
ಜುಲೈ 1995



ಬೆಲೆ ರೂ 4.

ಕಲ್ಯಾಣ ಕಿರಣ

ಕಲ್ಯಾಣ ಕಿರಣ

ಮಾಸ ಪತ್ರಿಕೆ, ಜೂನ್-ಜುಲೈ 1995, ಬಿಡಿ ಸಂಚಿಕೆ 4 ರೂ.

ಸಂಪುಟ : 24 ಸಂಚಿಕೆ : 12 ಬಸವ ಶಕೆ : 862.

ವಾರ್ಷಿಕ ಚಂದಾ : 40 ರೂ. ಆಜೀವ ಸದಸ್ಯತ್ವ : 400 ರೂ.

ಕಿರಣಗನ್ನಡಿ

ಮುಖಪುಟ : ದಿ. 30–6–95 ರಂದು ನಗು ನಗುತ್ತಲೇ ಸಂತಸದಿಂದ ಪರಮಾತ್ಮನಲ್ಲಿ ಒಡವರೆದು ಒಂದಾದ ಲಿಂಗೈಕ್ಯ ಪೂಜ್ಯ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮೀಜಿಯವರು.

ಹೊದ್ದಿಕೆಯ 4ನೇ ಪುಟ : ಲಿಂಗೈಕ್ಯ ಪೂಜ್ಯ ಸ್ವಾಮೀಜಿಯವರು.

KALYANA KIRANA–Monthly Magazine Printed and Published by B. Shambhulingaiah, at Prabhudeva Printing Press, Basava Gangotri, Kumbalgod, Bangalore-560074. Ph: 8437234

ಗುರು ಚರಣಕೆ ನುಡಿ ನೈವೇದ್ಯ

ಶ್ರೀ ಗುರುವಿನ ಶಿವಚರಣಕೆ ನಮೋ ನಮೋ ಎಂಬೆನು
ಗುರುದೇವನ ಮಹಾತ್ಯಾಗಕೆ ನತಮಸ್ತಕಳಾದೆನು ॥ಪ॥
ಬಸವಣ್ಣನ ಶ್ರೀರಕ್ಷೆಯ ಹೊತ್ತು ನೀವು ಬಂದಿರಿ
ಹೊಸ ಬಾಳನು ಬಾಳ್ವ ಬಗೆಯ ಈ ಲೋಕಕೆ ತೋರ್ದಿರಿ
ದೇವನೊಬ್ಬ ಮನುಜ ಕುಲಕೆ ಎಂಬ ತತ್ತ್ವ ಸಾರ್ದಿರಿ
ಮನುಜರೆಲ್ಲರೊಂದೆ ಎಂಬ ಭ್ರಾತೃತ್ವವ ಬೀರ್ದಿರಿ ॥೧॥
ಜಾತಿವಾದ ಶುಷ್ಕಮಾರ್ಗ ಮೂಢರೂಢಿ ಜರಿದಿರಿ
ಕ್ರಾಂತಿಕಹಳೆಯೂದಿ ನೀವು ಜಾಗೃತಿಯಂ ಗೈದಿರಿ
ಪ್ರವಚನದ ನಿಜಸುಧೆಯ ಜನಮನಕೆ ಎರೆದಿರಿ
ಭವಗೆಲ್ಲುವ ಶಿವ ಮಂತ್ರವ ಹೃದಯ ತುಂಬಿ ಉಸಿರ್ದಿರಿ ॥೨॥
ಬಸವಣ್ಣನ ನಿಜ ತತ್ತ್ವವ ಮತ್ತೆ ಬಿತ್ತಿ ಬೆಳೆದಿರಿ
ಎನಿತೆನಿತೋ ಜೀವಗಳಲಿ ಸ್ಫೂರ್ತಿ ಕಿಡಿಯ ಹಚ್ಚಿದಿರಿ
ಮಿಥ್ಯ ಹಳಿದು ಸತ್ಯ ಹಿಡಿದು ಸ್ತುತ್ಯಪಥದಿ ನಡೆದಿರಿ
ಇಟ್ಟ ಹೆಜ್ಜೆ ಹಿಂತೆಗೆಯದ ಕ್ರಾಂತಿಪುರುಷರಾದಿರಿ ॥೩॥
ಬಂದ ಎಡರು ತೊಡರ ಜಯಿಸಿ ಭವ್ಯ ಮೂರ್ತಿಯಾದಿರಿ
ಸಂದ ಕೀರ್ತಿವಾರ್ತೆಯನ್ನು ಸಮುಚಿತ್ತದಿ ಪಡೆದಿರಿ ।
ಎನಿತು ಪುಣ್ಯ ನಮ್ಮದಿತ್ತೋ ಇಂಥ ಗುರುವ ಪಡೆಯಲು
ಶಿವರಕ್ಷೆಯ ಅಭಯ ಹೊತ್ತು ದಿವ್ಯ ಪಥದಿ ನಡೆಯಲು ॥೪॥
ಅಡಿಯ ಇಟ್ಟು ನಡೆದಲೆಲ್ಲ ದೀಪ ಹಚ್ಚಿ ಬಂದಿರಿ
ಬಸವ ಭಾನು ಕ್ರಾಂತಿ ಉಷೆಯು ಆಗಿ ಮುಂದೆ ನಡೆದಿರಿ
ಗುರುದೇವ ಲಿಂಗಾನಂದ ಹೆಸರು ಅಮರವಾಗಿದೆ
ಸತ್ತು ಚಿತ್ತು ಆನಂದನ ಶುಭ ರಕ್ಷೆಯು ತಮಗಿದೆ ॥೫॥

—ಮಾತಾಜಿ

ಬಸವ ಧರ್ಮದ ವೀರ ಸೇನಾನಿ
ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು
ಲಿಂಗಾನಂದ ಸ್ವಾಮಿಗಳು

—ಮಾತಾಜಿ

ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು ಇನ್ನಿಲ್ಲ ; **ಪೂಜ್ಯ ಅಪ್ಪಾಜಿ** ನಮ್ಮ-ನಿಮ್ಮೆಲ್ಲರನ್ನು ಅಗಲಿದರು. ಈಗವರ ಒಂದು ನೆನಪು ಮಾತ್ರವಾಗಿ ನಮ್ಮೊಡನೆ ಉಳಿದಿದ್ದಾರೆ. ಎಂತಹ ಧೀಮಂತ ನಿಲುವು, ಕಂಚಿನ ಕಂಠ, ಮಂದಸ್ಮಿತ ಮುಖ, ಓತಪ್ರೋತ ವಿಚಾರಧಾರೆ, ಅಸ್ಖಲಿತ ವಾಣಿ ; ಇಂಥ ಅಪ್ಪಾಜಿ ಇನ್ನಿಲ್ಲ. ಎಂತಹ ಆಘಾತ ಶರಣ ವೃಂದಕ್ಕೆ ! ಇನ್ನೆಂದೂ ಹಿಂದಿರುಗಲಾರದಂತಹ ಜಗತ್ತಿಗೆ ಬೀಳ್ಕೊಡಬೇಕಾಯಿತು. ಅವರೇನೋ ತಮ್ಮ ಮೂಲನೆಲೆಗೆ, ಸೃಷ್ಟಿಕರ್ತನ ಮನೆಗೆ, ಆತ್ಮದ ಠೌಗೆ ಸಾಗಿದರು. ಆದರೆ ನಮ್ಮಗಳ ಭೌತಿಕ ಮಹಾಮನೆ ಬರಿದಾಯಿತಲ್ಲ ; ಎಂತಹ ಕಠೋರ ಅನುಭವವಿದು.

ಶರಣರ ಜೀವನ ಮರಣದಲ್ಲಿ ನೋಡು

"ನನಗೆ ಪ್ರವಚನ ಕಾಯಕ ಒಂದು ತಪಸ್ಸು, ಒಂದು ವ್ರತ. ಕಾಯಕದಲ್ಲಿರುವಾಗಲೇ ಪ್ರಾಣ ಹೋಗಬೇಕು. "

"ಶರೀರ ಶಿಥಿಲವಾಗಿ ಪರಾವಲಂಬಿಯಾಗಿ ಬದುಕುವ ಇಚ್ಛೆ ನನಗಿಲ್ಲ." ಯಾವಾಗಲಾದರೊಮ್ಮೆ ಇಂಥ ಮಾತನ್ನಾಡಿದಾಗ ನಮಗೆ ಅಸಹನೀಯವೆನಿಸಿ, "ಅತ್ಯಂತ ಶ್ರದ್ಧೆ–ಭಕ್ತಿಯಿಂದ ಸೇವೆ ಮಾಡುವ ಸಾಧಕರಿದ್ದಾರೆ. ಇಂಥ ಅಸಂಗತ ಮಾತುಗಳೇಕೆ ?" ಎಂದು ತಕ್ಷಣ ಪ್ರತಿಭಟಿಸುತ್ತಿದ್ದೆವು.

ಹಿರಿಯೂರಿನಲ್ಲಿ ವಿಶ್ವಧರ್ಮ ಪ್ರವಚನ ಪ್ರಾರಂಭವಾಗಿ ನಿರಾತಂಕವಾಗಿ ನಡೆದಿತ್ತು. ಸೋಮವಾರ ದಿ. 26–6–95 ರಂದು ರಾಣೇಬೆನ್ನೂರಿನ ಶರಣ. ಕರಿಬಸಪ್ಪ ಮಂಜ್ಜಗಿ ಅವರ ಮನೆಯಲ್ಲಿ ಪೂಜೆ ಇತ್ತು. ಬೆಂಗಳೂರಿಂದ ಬೇಗ್ಗೆ ಹೊರಟು ಹನ್ನೊಂದೂವರೆಗೆ ತಲ್ಪುವುದು ಕಷ್ಟ ಎಂದು ಹಿಂದಿನ ದಿವಸವೇ ಹೊರಟು ಹಿರಿಯೂರು ತಲ್ಪಿದಾಗ **ಪೂಜ್ಯ ಅಪ್ಪಾಜಿ** ಹೋಳಿಗೆ-ಸೀಕರಣೆ ಮಾಡಿಸಿ ಕಾಯುತ್ತಿದ್ದರು. ತಮಾಷೆ ಮಾಡುತ್ತ ನಮಗೆ, ನಮ್ಮ ಶಿಷ್ಯ ವೃಂದಕ್ಕೆ ಪ್ರಸಾದ ಮಾಡಿಸಿದರು. ಪುನಃ ಹಿರಿಯೂರಿಗೆ ಶನಿವಾರ 1–7–95 ಕ್ಕೆ, ಚಿತ್ರದುರ್ಗಕ್ಕೆ ಭಾನುವಾರ 2–7–1995 ಕ್ಕೆ ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸಲು ಬರುವುದಿತ್ತು, ರಾಣೇಬೆನ್ನೂರು–ಹುಬ್ಬಳ್ಳಿ–ಕಾರ್ಯಕ್ರಮ ಮುಗಿಸಿ ಆಶ್ರಮದಲ್ಲಿದ್ದೆ. ಮರುದಿವಸವೇ

ಬರಸಿಡಿಲಿನಂತೆರಗಿತು **ಪೂಜ್ಯ ಅಪ್ಪಾಜಿಯವರ** ಲಿಂಗೈಕ್ಯ ವಾರ್ತೆ.

ಶುಕ್ರವಾರ ದಿ. 30–6–95 ಮಧ್ಯಾಹ್ನ 1 ಗಂಟೆಗೆ ಪ್ರಸಾದ ಮುಗಿಸಿದರಂತೆ; "ನಾಳೆ ಇಷ್ಟು ಹೊತ್ತಿಗೆ ಮಾತಾಜಿ ಬರುತ್ತಾರೆ ; ಪ್ರಸಾದಕ್ಕೆ ಇಲ್ಲೇ ಬರುತ್ತಾರೆ." ಎಂದರಂತೆ. ಊಟ ಮುಗಿಸಿ ಸ್ವಲ್ಪ ಹೊತ್ತು ಅಡ್ಡಾಡಿ ಬಂದು ಕುರ್ಚಿಯಲ್ಲಿ ಕುಳಿತರಂತೆ. ಅಷ್ಟು ಹೊತ್ತಿಗೆ ಬಂದ ಇಬ್ಬರು ಸದ್ಭಕ್ತರು ಹಣ್ಣು ಕೊಟ್ಟು ನಮಸ್ಕರಿಸುತ್ತಲೇ ತಮಾಷೆಯ ಮಾತನ್ನಾಡಿ ನಗಿಸಿದರಂತೆ. "ನಾಳೆ ಮಾತಾಜಿ ಬರುತ್ತಾರೆ...." ಎಂದು ಆ ಶರಣೆಯರು ಅನ್ನುತ್ತಲೇ, "ಹೌದು....ಅವರ ಪ್ರವಚನ ಬಹಳ ಚೆನ್ನಾಗಿರುತ್ತದೆ...." ಎಂದು ಹಾಸ್ಯದ ಕಥೆ ಹೇಳಿ ನಗಲು ತೊಡಗಿದರಂತೆ. ಅರ್ಧ ನಕ್ಕಿರುವಾಗಲೇ ಬಿಕ್ಕಳಿಕೆ ಬಂದು, ಕಣ್ಸನ್ನೆಯಿಂದ ಕೊಂಚ ದೂರದಲ್ಲಿದ್ದ ಓರ್ವ ಸಾಧಕಿಯನ್ನು ಕರೆದರಂತೆ. ಆಕೆ ಧಾವಿಸಿ ಬರುವಷ್ಟರಲ್ಲೇ 'ಬಸವಾ' ಎಂದರಂತೆ, ಕತ್ತು ಮುಂದಕ್ಕೆ ವಾಲಿತಂತೆ. ಉಳಿದವರು ಧಾವಿಸಿ ತೀರ್ಥ ಹಾಕಬೇಕೆಂದು ಪ್ರಯತ್ನಿಸುತ್ತಿರುವಷ್ಟರಲ್ಲೇ, ಇನ್ನೊಬ್ಬರು ಹತ್ತಿರದಲ್ಲೇ ಇದ್ದ ವೈದ್ಯರನ್ನು ಕರೆತರಲು ಓಡಿದರಂತೆ. ಅವರು ಬಂದು ನೋಡಿ ಎಲ್ಲಾ ಮುಗಿಯಿತು ಎಂದರಂತೆ. ಇದೆಲ್ಲವೂ ಕಣ್ಣು ತೆರೆಯುವಷ್ಟರಲ್ಲಿ ನಡೆದ ಘಟನೆ. ಮೂರುನಾಲ್ಕು ಜನ ಪ್ರತ್ಯಕ್ಷದರ್ಶಿಗಳು. ಯಾವ ಕಾಯಿಲೆ ಇಲ್ಲ ; ನೋವು ಇಲ್ಲ ನಗುನಗುತ್ತಾ ಪ್ರಾಣವು ನಿರಾಯಾಸವಾಗಿ ಹೋಗಿದೆ. ಮುಖದ ಮೇಲಿನ ನಗೆ ಮಾಸಿಯೇ ಇರಲಿಲ್ಲ. ಮಧ್ಯಾಹ್ನ 2 ಗಂಟೆಗೆ ಪ್ರಾಣ ಹೋಗುತ್ತಲೇ ಎಲ್ಲೆಡೆಗೆ ಸುದ್ದಿ ಕಳಿಸಿದರೂ ನನಗೆ ಧಾರವಾಡಕ್ಕೆ ತಲ್ಪಿದ್ದು ನಾಲ್ಕು ಗಂಟೆಗೆ. ನನಗೆ ನಂಬಲಾಗಲಿಲ್ಲ. ಕುಚೋದ್ಯದ ಸುಳ್ಳುವಾರ್ತೆ ಇರಬಹುದು ಎಂದು ಖಚಿತಪಡಿಸಿಕೊಳ್ಳಲು ಬೆಂಗಳೂರಿಗೆ ತಿಳಿಸಿದೆ. ಕಡೆಯ ಭೇಟಿ ದಿ. 25–6–95 ರಂದು ತುಂಬಾ ಉಲ್ಲಸಿತರಾಗಿ, ಸಾಕಷ್ಟು ವಿಷಯ ಚರ್ಚಿಸಿದ್ದರು. ಕುಳಿತಲ್ಲಿ, ನಿಂತಲ್ಲಿ, ಪ್ರಸಾದ ಸ್ವೀಕರಿಸುವಾಗ ಬರೀ ತಾತ್ತ್ವಿಕ ಚಿಂತನೆ ಅವರ ವೈಶಿಷ್ಟ್ಯ. ಬೇರೆ ಹರಟೆಗೆ ಅವಕಾಶ ವಿರಲಿಲ್ಲ. ಅಂದು ಬಹಳ ವಿಷಯಗಳನ್ನು ವಿಶ್ಲೇಷಿಸಿದ್ದರು. "ಆರೋಗ್ಯ ಸುಧಾರಿಸಿದೆಯಲ್ಲಾ. ಹಿರಿಯೂರು ಚೆನ್ನಾಗಿ ಒಗ್ಗಿದೆ. " ಎಂದೆನ್ನಲು "ಅಹುದು, ಮನೆಪರಿಸರ ಚೆನ್ನಾಗಿದೆ. ಆರೋಗ್ಯ ಸುಧಾರಿಸಿದ" ಎಂದರು. ಇಷ್ಟು ಲವಲವಿಕೆಯ ವ್ಯಕ್ತಿಗೆ ಏನಾಗಿರಬೇಕು ? ಧಾವತಿಗೊಂಡು ಧಾರವಾಡದಿಂದ ಧಾವಿಸಿ ಬರುವಷ್ಟರಲ್ಲಿ ರಾತ್ರಿ 1 ಗಂಟೆ. ನನ್ನ ಬರವಿಗಾಗಿ ಏನೊಂದೂ ನಿರ್ಧಾರ ತಗೊಳ್ಳದೆ ಎಲ್ಲರೂ ಕಾಯುತ್ತಿದ್ದರು. ಬೆಳಗಿನಿಂದಲೂ ಪ್ರವಾಹದೋಪಾದಿಯಲ್ಲಿ ಸ್ಥಳೀಯರು ಮತ್ತು ಸುತ್ತಣ ಗ್ರಾಮದವರೂ ಬಂದು ಅಂತಿಮ ದರ್ಶನ ಪಡೆದುದಲ್ಲದೆ, ಇನ್ನೂ ವಿಪರೀತ ಜನರು ಅಲ್ಲೇ ಉಳಿದಿದ್ದರು.

ನಾನು ಬಂದು ನೋಡಿದಾಗ ಒಂದು ಕಡೆ ದುಃಖ, ಇನ್ನೊಂದು ಕಡೆ ಬೆರಗು. ಮುಖವು ಅತ್ಯಂತ ತೇಜಸ್ವಿಯಾಗಿ ಬೆಳಗುತ್ತಿತ್ತು. ಪ್ರಾಣಜ್ಯೋತಿ ನಂದುವ ಮುನ್ನ ಮುಖದ ಮೇಲೆ ಮೂಡಿದ್ದ ನಗೆ, ಇನ್ನೂ ಸ್ಥಾಯಿಯಾಗಿ ನೆಲೆಸಿದೆ. ಹೊಂಬಣ್ಣದ ಮುಖ ದಿಂದ ಕಾಂತಿಕಿರಣಗಳು ಹೊರಚೆಲ್ಲುವಂತೆ ಅಪೂರ್ವ ತೇಜಸ್ಸು. ಕಣ್ಣಿವೆ ಮುಚ್ಚಿ-ದ್ದರೂ ದೃಷ್ಟಿ ಊರ್ಧ್ವ ಮುಖವಾಗಿ ನಿಂತಿತ್ತು. ಮಂದಹಾಸ ಬೀರುತ್ತ ಕಣ್ಣು ಮುಚ್ಚಿಮಲಗಿದಂತೆ ತೋರುತ್ತಿತ್ತು. ಭಸ್ಮಧರಿಸಿ, ಪುಷ್ಪವೃಷ್ಟಿ ಮಾಡಿ, ಸುಧಾರಿಸಿ ಕೊಂಡು ಕೇಳಿದೆ, "ಏಕೆ ಏನಾಗಿತ್ತು ? ಎದೆ ನೋವು ಏನಾದರೂ ಬಂದಿತಾ ?" ಎಂದು; "ಇಲ್ಲ ಮಾತನಾಡುತ್ತ, ನಗುತ್ತಾ ನಗಿಸುತ್ತಾ ಹಾಗೆಯೇ ಒರಗಿದರು. ಬಸವಾ ಎಂಬ ಮೂರಕ್ಷರ ಕಡೆಯ ನುಡಿಯಾಯಿತು." ಎಂದು ಶರಣ ಸಾಧಕಿ ನೀಲಗಂಗಮ್ಮ ಹೇಳಿದಳು. ಪ್ರತ್ಯಕ್ಷವಾಗಿ ಇದನ್ನು ನೋಡಿದ ಹಿರಿಯೂರಿನ ತಾಯಂದಿರೂ ದುಃಖಾಶ್ರು ಭರಿತರಾಗಿ ಅದನ್ನೇ ನುಡಿದರು.

ಒಮ್ಮೆ ನಾನು ಹೇಳಿದ್ದೆ, "ಸಾರ್ಥಕದ ಬದುಕಾವುದು ? ಎಂಬ ಬಗ್ಗೆ ಒಂದು ವ್ಯಾಖ್ಯಾನವಿದೆ. ಮಗುವೊಂದು ಲೋಕಕ್ಕೆ ಜನಿಸಿ ಬರುತ್ತದೆ. ಅದು ಲೋಕದ ಗಾಳಿ ಬಡಿಯುವ ತನಕವೂ ದೇವನ ನೆನಹಿನಲ್ಲಿ ಇರುವುದಂತೆ. ತಾಯಿಯ ಗರ್ಭದಿಂದ ಬರುವಾಗ ಗೋಳಾಡುವುದಂತೆ, 'ದೇವಾ ಏಕೆ ಈ ಭಯಂಕರ ಜಗತ್ತಿಗೆ ದೂಡುತ್ತಿ-ರುವೆ ?' ಎಂದು. ಆಗ ಮೊದಲೇ ಇಲ್ಲಿ ಬೀಡುಬಿಟ್ಟಿರುವ ಜನ ನಮ್ಮೊಡನೆ ಪಾಡು ಪಡಲು ಇನ್ನೊಂದು ಜೀವಿ ಬಂದಿತಲ್ಲಾ ಎಂದು ಹರ್ಷಭರಿತರಾಗಿ ನಗುತ್ತಾ ಸಕ್ಕರೆ ಹಂಚುವರಂತೆ. ಅಂತಿಮ ಕಾಲದಲ್ಲಿ ಜ್ಞಾನಿಯಾದವನು ನಗುನಗುತ್ತಾ ಹೋಗುವ ನಂತೆ, ಆತನನ್ನು ಕಳೆದುಕೊಂಡು ಲೋಕ ಆತನಿಗಾಗಿ ದುಃಖಿಸುವುದಂತೆ...." ಈ ದೃಷ್ಟಾಂತ ಅಪ್ಪಾಜಿಯವರಿಗೆ ತುಂಬಾ ಮೆಚ್ಚುಗೆಯಾಗಿತ್ತು. ಇದು ಬರೀ ಹೇಳಿಕೆ-ಕೇಳಿಕೆಯಾಗಿ ಉಳಿಯದೆ ಪೂಜ್ಯ ಗುರುಗಳ ಜೀವನದಲ್ಲಿ ವಾಸ್ತವವಾಗಿ ನಡೆಯಿತು. ಕಾಯಕ ಮಾಡುತ್ತಲೇ ಜೀವನಕ್ಕೆ ಪೂರ್ಣವಿರಾಮ ಹೊಂದಬೇಕು ಮತ್ತು ನರಳಿ, ಇನ್ನೊಬ್ಬರಿಗೆ ಭಾರವಾಗಿ ಬದುಕಬಾರದು ಎಂಬ ಅವರ ಅನಿಸಿಕೆಗಳು ಪೂರ್ಣಗೊಂಡುಬಿಟ್ಟವು. ಅವರನ್ನು ಅಗಲಿದವರನ್ನು ಈ ನಿಧನ ದುಃಖ ಸಾಗರದಲ್ಲಿ ಕೆಡವಿದರೂ, ಪೂಜ್ಯರನ್ನು ನಗೆಯ ದೋಣಿಯಲ್ಲೇ ದೇವನು ಸಾಗಿಸಿಕೊಂಡು ಹೋದನಲ್ಲಾ ? ಎಂಥಾ ಸೋಜಿಗ ! ಶವಸಂಸ್ಕಾರಕ್ಕೆ ಸಮಯಬೇಕಾದ್ದರಿಂದ ಫಾರ್ಮಾಲಿನ್ ರಾಸಾಯನಿಕವನ್ನು ದೇಹಕ್ಕೆ ನೀಡಿಸಬೇಕಾಯಿತು. ಆಗ ಒಂದು ಚೂರು ಬಣ್ಣವು ಬದಲಾಯಿತಲ್ಲದೆ ಪ್ರಾಣಜ್ಯೋತಿ ನಂದಿದ ಬಳಿಕವೂ ಸುದೀರ್ಘಕಾಲದವರೆಗೆ ತೇಜಸ್ಸು ಕಡಿಮೆಯಾಗಿರಲಿಲ್ಲ.

ರೋಗ-ರುಜಿನದಿಂದ ಬಳಲದೆ, ವೃದ್ಧಾಪ್ಯದ ಅಥವಾ ಮಾನಸಿಕ ವಿಕೃತಿಗೆ ಸಿಲುಕದೆ ಇಡೀ ಜೀವನ ಪರ್ಯಂತರ ಜಗತ್ತನ್ನು ನಕ್ಕುನಲಿಸಿದ ಅಪ್ಪಾಜಿ ನಗುತ್ತಲೇ ಕ್ರಿಯಾವಿಶ್ರಾಂತಿಯನ್ನೈದಿದುದು ಎಂಥಾ ಸೋಜಿಗವಲ್ಲವೆ ? ನಿರ್ಲಿಪ್ತವಾಗಿ ಕಾಯಕ ಮಾಡಿದರು, ನಿರ್ಲಿಪ್ತವಾಗಿ ಬದುಕಿದರು, ನಿರ್ಲಿಪ್ತವಾಗಿಯೇ ಜಗತ್ತನ್ನು ತೊರೆದರು. ಘನವಾದ ಉದ್ದೇಶದಿಂದ ಕಾಣಿಕೆ ಕೇಳುತ್ತಿದ್ದರು-ಆದಾಯದ ಬೇರಾವ ಮಾರ್ಗವನ್ನೂ ಅವಲಂಬಿಸಿರದಿದ್ದರಿಂದ. ಆದರೆ ತಮಗೆಂದೂ ಎಲ್ಲಿಯೂ ಏನನ್ನೂ ಮುಚ್ಚಿಟ್ಟುಕೊಳ್ಳಲಿಲ್ಲ ; ಕೂಡಿಟ್ಟುಕೊಳ್ಳಲಿಲ್ಲ. ಸಂಸ್ಥೆಗಳ ಹೊರತಾಗಿ ಅವರ ಹೆಸರಿನಲ್ಲಿ ಎಲ್ಲೆಲ್ಲಿಯೂ ಹತ್ತು ಪೈಸೆಯನ್ನೂ ಸಂಗ್ರಹಿಸಿಟ್ಟಿರಲಿಲ್ಲ. ಪೂಜ್ಯ ಅಪ್ಪಾಜಿ ಯವರ ಈ ನಿಸ್ವಾರ್ಥತೆ ತ್ಯಾಗಗಳೇ ನಮ್ಮೆಲ್ಲರಲ್ಲಿ ಅದೇ ಪ್ರವೃತ್ತಿ ಬೆಳೆಸಿದವು.

ಹಿರಿಯೂರಿನಿಂದ ಬೆಂಗಳೂರಿಗೆ, ಧಾರವಾಡಕ್ಕೆ ಪೂಜ್ಯರ ಪಾರ್ಥೀವ ಶರೀರ-ವನ್ನು ಒಯ್ಯೋಣ ಎಂದು ಹಲವರು ಸೂಚಿಸಿದರು. ಎಲ್ಲವೂ ಪೂಜ್ಯ ಅಪ್ಪಾಜಿ ಕಟ್ಟಿರುವ ಸಂಸ್ಥೆಗಳಾದರೂ, ಅವರ ಇಚ್ಛೆ "ಬಸವಣ್ಣನ ದಿವ್ಯ ಸನ್ನಿಧಿಯಲ್ಲೇ ನಾನು ಅಡಗಬೇಕು." ಎಂಬುದಿತ್ತು. ಆದಕ್ಕಾಗಿ ಕೂಡಲ ಸಂಗಮಕ್ಕೆ ಕರೆದುಕೊಂಡು ಹೋಗೋಣ ಎಂದೆ. ಚಿತ್ರದುರ್ಗದ ರಾಷ್ಟ್ರೀಯ ಬಸವ ದಳದವರು ತಮ್ಮಲ್ಲಿಗೆ ಬರಬೇಕೆಂದು, ಉತ್ಸವ ಮಾಡಿ ಬೀಳ್ಕೊಡುತ್ತೇವೆ ಎಂದರು. ಈ ನಿರ್ಧಾರ ತಗೊಂಡಾಗ ರಾತ್ರಿ 2 ಗಂಟೆ. ಅವರಿಗೆ ಸಿದ್ಧತೆಗೂ ಸಮಯವಿರಲಿಲ್ಲ. ಚಳ್ಳಕೆರೆ ರಾಷ್ಟ್ರೀಯ ಬಸವ ದಳದವರು ತಮ್ಮಲ್ಲಿಗೂ ಕರೆತರಬೇಕೆಂದು ಆಗ್ರಹಿಸಿದರು. ಒಪ್ಪಿಕೊಂಡುದಾಯಿತು. ಚಿತ್ರದುರ್ಗದಲ್ಲಿ ಉತ್ಸವ ಮಾಡಿ ಬೀಳ್ಕೊಟ್ಟಾಗ ಮಧ್ಯಾಹ್ನ ಒಂದೂವರೆ. ಅಲ್ಲಿಂದ ಹೊರಟಾಗ ಅನ್ನಿಸಿತು ಚಿತ್ರದುರ್ಗ ಬಸವ ದಳದವರು ಸೂಕ್ತವಾಗಿ ಕೃತಜ್ಞತೆ ಅರ್ಪಿಸಿದರು ಎಂದು. ಅಲ್ಲದೆ ರಾಷ್ಟ್ರೀಯ ಬಸವ ದಳದವರೇ ನೇರವಾಗಿ ಕಟ್ಟಿದ ಪ್ರಪ್ರಥಮ ಬಸವ ಮಂಟಪ ಚಿತ್ರದುರ್ಗದ್ದು. ಅಪ್ಪಾಜಿ ಯವರನ್ನು ಅಂದರೆ ರಾಷ್ಟ್ರೀಯ ಬಸವ ದಳದ ಪ್ರೇರಕ ಶಕ್ತಿಯನ್ನು ಬರಮಾಡಿ ಕೊಂಡಿದ್ದು ಅಭಿನಂದನೀಯ. ಚಳ್ಳಕೆರೆಯ ತಾಲ್ಲೋಕಿನಲ್ಲಿ ಬಹಳಷ್ಟು ರಾಷ್ಟ್ರೀಯ ಬಸವ ದಳಗಳಿದ್ದು ವೀರಶೈವ ಹಾಸ್ಟೆಲ್ ಆವರಣದಲ್ಲಿ ಅಸಂಖ್ಯಾತ ಜನರು ನೆರೆದಿ ದ್ದರು. ಪೂಜ್ಯರ ಅಂತಿಮ ದರ್ಶನವನ್ನು ದುಃಖಾಶ್ರುಪೂರಿತರಾಗಿ ಎಲ್ಲರೂ ಪಡೆದರು. ಅಬಕಾರಿ ಸಚಿವ ಶ್ರೀ ತಿಪ್ಪೇಸ್ವಾಮಿಯವರೂ ಸುದ್ದಿ ತಿಳಿದು ಬಂದು ಪುಷ್ಪಾಂಜಲಿ ಅರ್ಪಿಸಿ ಗೌರವಿಸಿದರು. ಅಲ್ಲಿಂದ ಉತ್ಸವವು ಹೊರಟಾಗ ಮಧ್ಯಾಹ್ನ 4-30 ದಾಟಿತ್ತು.

ರಾತ್ರಿ ಒಂದು ಗಂಟೆಗೆ ಕೂಡಲ ಸಂಗಮಕ್ಕೆ ಬರುವಷ್ಟರಲ್ಲಿ ಶರಣ ಬಂಧುಗಳು ಕಿಕ್ಕಿರಿದು ಸೇರಿದ್ದರು. ಹೊರ ರಾಜ್ಯಗಳಿಂದಲೂ ಬಂದಿದ್ದರು. ಎಲ್ಲರೂ ದುಃಖಾಶ್ರುವಿನ ಮಹಾಪೂರದಲ್ಲಿ ಮುಳುಗಿದ್ದರು. ಪೂಜ್ಯರಿಗೆ ಕೊನೆಯ ಸ್ನಾನಮಾಡಿಸಿ, ಇಷ್ಟಲಿಂಗಾರ್ಚನೆ ಮಾಡಿಸಲಾಯಿತು. 'ಶ್ರೀ ಬಸವೇಶ್ವರ ಐಕ್ಯಮಂಟಪಕ್ಕೆ ಹೋಗಿ ಅಲ್ಲಿಂದ ಪುಷ್ಪ-ಪ್ರಸಾದವನ್ನು ತರಬೇಕು' ಎಂದು ನಾನು ಸೂಚಿಸಿದೆ ; ಪಥ ಸಂಚಲನ-ಉತ್ಸವ ಮಾಡುವುದಾಗಿ ಬಸವಕುಮಾರ್ ಪಾಟೀಲರು, ಡಾ|| ನಿತಿನಚಂದ್ರ ಹತ್ತೀಕಾಳ ಸೂಚಿಸಿದರು. ಎಲ್ಲ ಶರಣರು ಹಾಡುತ್ತ ಭಜನೆ ಮಾಡುತ್ತಾ ಅಂತಿಮ ಯಾತ್ರೆಯಲ್ಲಿ ಪಾಲ್ಗೊಂಡರು.

ಗದುಗಿನ ಪೂಜ್ಯ ಶ್ರೀ ನಿ. ಪ್ರ: ಜಗದ್ಗುರು ಡಾ|| ಸಿದ್ಧಲಿಂಗ ಸ್ವಾಮಿಗಳು, ಪೂಜ್ಯ ಶ್ರೀ ನಿ. ಪ್ರ: ಮಹಾಂತ ಸ್ವಾಮಿಗಳು ಇಳಕಲ್, ಪೂಜ್ಯ ಶ್ರೀ ಜಗದ್ಗುರು ಸಾರಂಗ ದೇಶೀಕೇಂದ್ರ ಸ್ವಾಮಿಗಳು, ಪೂಜ್ಯ ಶ್ರೀ ಭಾಲ್ಕಿ ಬಸವಲಿಂಗ ಪಟ್ಟಾಧ್ಯಕ್ಷರು, ಪೂಜ್ಯ ಶ್ರೀ ಶಿವಾನಂದ ಸ್ವಾಮಿಗಳು ಹುಲಸೂರು, ಪೂಜ್ಯ ಶ್ರೀ ಸದ್ಗುರು ಸದಾನಂದ ಪ್ರಭುಸ್ವಾಮಿಗಳು, ಮುಂತಾದ ಅನೇಕ ಪೂಜ್ಯರು ಶ್ರದ್ಧಾಂಜಲಿ ಅರ್ಪಿಸಿದರು. ಕೂಡಲ ಸಂಗಮದ ಮಹಾಮನೆ ಮಹಾಮಠದಲ್ಲಿರುವ ಬಸವಾಲಯದ ಬಲಬದಿಯ ಬಾದಾಮಿಯಾಕೃತಿಯ ಮಂಟಪದಲ್ಲಿ ಪೂಜ್ಯರ ಸಮಾಧಿಯ ಕಾರ್ಯ-ವನ್ನು ನೆರವೇರಿಸಲಾಯಿತು. ಎಲ್ಲ ಪೂಜ್ಯರು, ಗಣ್ಯರು ವಿಭೂತಿ ವೀಳ್ಯವನ್ನು ನೀಡಿದರು. ಮಹಾಮಂಗಲ ಮಾಡಿ, ಜಯಘೋಷ ಮಾಡಲಾಯಿತು. ಅಪ್ಪ ಬಸವಣ್ಣನವರು ನುಡಿದಂತೆ :

ಭಕ್ತಿ ಎಂಬ ಪೃಥ್ವಿಯ ಮೇಲೆ
ಗುರುವೆಂಬ ಬೀಜಮಂಕುರಿಸಿ
ಲಿಂಗವೆಂಬ ಎಲೆಯಾಯಿತ್ತು
ವಿಚಾರವೆಂಬ ಹೂವಾಯಿತ್ತು
ಆಚಾರವೆಂಬ ಕಾಯಾಯಿತ್ತು
ನಿಷ್ಪತ್ತಿ ಎಂಬ ಹಣ್ಣಾಯಿತ್ತು
ನಿಷ್ಪತ್ತಿ ಎಂಬ ಹಣ್ಣು ತಾನು
ತೊಟ್ಟು ಕಳಚಿ ಕೆಳಗೆ ಬೀಳುವಲ್ಲಿ
ಕೂಡಲ ಸಂಗಮದೇವ
ತನಗೆ ಬೇಕೆಂದು ಎತ್ತಿಕೊಂಡ.

ಪಕ್ವವಾದ ಹಣ್ಣು ಸಹಜವಾಗಿ ತೊಟ್ಟು ಬಿಟ್ಟು ಕಳಚುವಂತೆ, ಪೂಜ್ಯ ಅಪ್ಪಾಜಿಯವರ ಆತ್ಮ ನಗುನಗುತ್ತ ದೇಹದಿಂದ ಕಳಚಿಕೊಂಡಿತು. ಪರಮಾತ್ಮನು

ಈ ಮಹಾಮನೆಯಿಂದ ತನ್ನ ಹೃದಯದ ಮಹಾಮನೆಗೆ ಕರೆದುಕೊಂಡ. ನೆರೆದ ಅಸಂಖ್ಯಾತರು ಹೃದಯಾಂತರಾಳದಿಂದ ಶೋಕಿಸುತ್ತಿದ್ದರು. ಅದರಲ್ಲಿ ಕೇವಲ ಗೌರವ ಭಾವ ಅಥವಾ ಯಾಂತ್ರಿಕ ಶೋಕವಿರಲಿಲ್ಲ; ಭಕ್ತಿ, ಗೌರವ ಆತ್ಮೀಯತೆ ತುಂಬಿ ತುಳುಕುತ್ತಿದ್ದವು. ತಮ್ಮ ಆಪ್ತ ಬಂಧುಗಳನ್ನು ಕಳೆದು ಕೊಂಡದ್ದಕ್ಕಿಂತಲೂ ಹೆಚ್ಚಿನ ಶೋಕ ಅವರ ದುಃಖ, ಮಾತುಗಳಲ್ಲಿ ಹೊನಲಾಗಿ ಹರಿಯುತ್ತಿತ್ತು. ನಿಜ, ಅಪ್ಪಾಜಿ ಅವರೆಲ್ಲರ ಮನೆಗಳಲ್ಲಿ ಜ್ಞಾನವಾಗಿ, ಸಂಸ್ಕೃತಿಯಾಗಿ, ಮನಗಳಲ್ಲಿ ಪ್ರೀತಿಯ ಅಪ್ಪಾಜಿಯಾಗಿ ತುಂಬಿಕೊಂಡಿದ್ದರು. ಅವರ ಪ್ರಾಣಜ್ಯೋತಿ ದೇವನಲ್ಲಿ ವಿಲೀನ-ವಾಗಿದ್ದರೂ ಅವರು ಹಚ್ಚಿದ ಬಸವ ಧರ್ಮದ ಜ್ಯೋತಿ ಶರಣರ ಮನೆಮನೆಗಳಲ್ಲಿ ಬೆಳಗುತ್ತಿದೆ.

"ಬಸವ ಧರ್ಮದ ವೀರ ಸೇನಾನಿ" ಅವರು. ಪೂಜ್ಯ ಗದಗಿನ ಜಗದ್ಗುರುಗಳು ಅತ್ಯಂತ ಪರಿಣಾಮಕಾರಿಯಾಗಿ ಹೇಳಿದರು. "ನೆಪೋಲಿಯನ್ ಬೋನೋಪಾರ್ಟ್ ಬಗ್ಗೆ ಹೀಗೊಂದು ಮಾತಿದೆ. He came, he saw, he conquerred" ಹಾಗೆಯೇ ಹುಟ್ಟು ಹೋರಾಟಗಾರರಾದ ಪೂಜ್ಯ ಜಗದ್ಗುರು ಲಿಂಗಾನಂದ ಸ್ವಾಮಿಗಳು ಕಾಲಿಟ್ಟಲ್ಲಿ ಜಯಭೇರಿ ಬಾರಿಸುತ್ತಿದ್ದರು. ಏಕಾಂಗಿಯಾಗಿ ಬಂದು, ಪ್ರವಚನ ಮಾಡಿ, ಬಸವ ತತ್ತ್ವದ ಜ್ಯೋತಿ ಹಚ್ಚಿ, ಹೋಗುವಾಗ ಅಸಂಖ್ಯಾತರ ಅಭಿಮಾನ ಗಳಿಸಿಕೊಂಡು ದಿಗ್ವಿಜಯ ಸಾಧಿಸಿ ಹೋಗುತ್ತಿದ್ದರು."

ಪೂಜ್ಯ ಶ್ರೀಗಳ ಮಾತು ನೂರಕ್ಕೆ ನೂರು ಸತ್ಯ. ಅಪ್ಪಾಜಿಯ ವೀರವಾಣಿಗೆ ಪ್ರಭಾವಿತರಾಗದವರೇ ಕಡಿಮೆ. ಬಸವ ಧರ್ಮದ ವೀರ ಸೇನಾನಿ(Commander) ಆಗಿ ಅವರು ಧಾರ್ಮಿಕ ಸಾಮ್ರಾಜ್ಯವನ್ನು ವಿಸ್ತರಿಸಿ, ಗುರು ಸಾರ್ವಭೌಮ ಬಸವಣ್ಣ ಪ್ರಭಾವ ವಲಯ ವಿಸ್ತರಿಸಿದರು ; ಪ್ರವಚನ ಶಸ್ತ್ರದಿಂದಲೇ ಜನ ಸಮುದಾಯವನ್ನು ಗೆದ್ದರು.

ನಾನೊಂದು ದೃಷ್ಟಾಂತ ಕೇಳಿದ್ದೆ. ಓರ್ವ ಸಾಧು ಭಿಕ್ಷೆ ಬೇಡುತ್ತ ಬಂದ-ಯಾರ ಮನೆಯಲ್ಲೂ ದೊರೆಯಲಿಲ್ಲ. ಓರ್ವ ಗೃಹಿಣಿಯ ಮನೆಯ ಮುಂದೆ ನಿಂತು ಬೇಡಿದ. ಅಲ್ಲೊಂದು ಶವಯಾತ್ರೆ ಹೊರಟಿತ್ತು. ಆಕೆ ಹೇಳಿದಳು, 'ಆತ ಸ್ವರ್ಗಕ್ಕೆ ಹೋಗುವನೋ ನರಕಕ್ಕೆ ಹೋಗುವನೋ ತಿಳಿದು ಬಾ' ಶವಯಾತ್ರೆ ಹಿಂದೆ ಹೋಗಿ ಪುನಃ ಬಂದ. ತನಗೆ ತಿಳಿಯಲಿಲ್ಲವೆಂದ. "ಊರಿನಲ್ಲಿ ವಾತಾವರಣ ಹೇಗಿತ್ತು ?" ಎಂದು ಕೇಳಿದಳು "ಯಾರ ಮನೆಯಲ್ಲೂ ಒಲೆ ಹಚ್ಚಿಲ್ಲ, ಎಲ್ಲರೂ ಶವ ಯಾತ್ರೆ-ಯಲ್ಲಿದ್ದಾರೆ. "ನೋಡಿದೆಯಾ ? ಆತನ ನಿಧನದಿಂದ ಎಲ್ಲರಿಗೂ ದುಃಖವಾಗಿದೆ. ಯಾರಿಗೂ ಊಟ ಮಾಡಲೂ ಮನಸ್ಸಿಲ್ಲ. ಎಲ್ಲರೂ ಶವಯಾತ್ರೆಯಲ್ಲಿ ಭಾಗಿಯಾಗಿ-ದ್ದಾರೆ. ಅದೇ ತೋರಿಸುತ್ತೆ ಆತ ಸ್ವರ್ಗಕ್ಕೆ ಹೋಗುತ್ತಾನೆಂಬುದನ್ನು."

ನಾವು ಸ್ವರ್ಗ–ನರಕ ನಂಬುವವರಲ್ಲ. "ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು." ಎಂಬ ಬಸವ ವಾಣಿ ನಂಬಿದವರು. ಪೂಜ್ಯ ಅಪ್ಪಾಜಿ ಇಲ್ಲಿ ಸಲ್ಲಿದವರು ಎಂಬುದಕ್ಕೆ ನೆರೆದ ಅಪಾರ ಜನ ಸಮುದಾಯವೇ ಸಾಕ್ಷಿ; ತಮ್ಮ ಆತ್ಮೀಯ–ರೊಬ್ಬರನ್ನು ಕಳೆದುಕೊಂಡಂತೆ ಜನರು ಶೋಕಿಸುತ್ತಿದ್ದುದೇ ಸಾಕ್ಷಿ. ಅಲ್ಲಿ ಅಂದರೆ ಪರಮಾತ್ಮನಲ್ಲಿ ಸಲ್ಲುವರೆ ? ಈ ಪ್ರಶ್ನೆಗೆ ಉತ್ತರಿಸುವುದು ಕಷ್ಟ. ಆದರೆ ಅದಕ್ಕೂ ಎರಡೂ ಸಾಕ್ಷಿಗಳುಂಟು.

ಚಿತ್ರದುರ್ಗದಲ್ಲಿ ಉತ್ಸವ ನಡೆವಾಗ ಎಳೆಯ ಬಿಸಿಲಿನ ಮಧ್ಯೆ ತುಂತುರು ಹೂಮಳೆ ಸುರಿದುದು ಒಂದು ಸಾಕ್ಷಿ; ಭಾನುವಾರ ದಿನಾಂಕ 2–7 95 ರಂದು ಬೆಳಗಿನ ಜಾವದಲ್ಲೇ ಕಡೆಯ ಸ್ನಾನ ಮಾಡಿಸಿ, ಬಟ್ಟೆ ತೊಡಿಸಿ, ಅಲಂಕರಿಸಿ ಶರಣ ಬಂಧುಗಳು ದರ್ಶನಕ್ಕೆ ಕುಳ್ಳಿರಿಸಿದ್ದರು. ನಾನು ಪೂಜೆ ಮುಗಿಸಿ, ಪೂಜ್ಯ ಅಪ್ಪಾಜಿಯವರ ಇಷ್ಟಲಿಂಗಕ್ಕೂ ಅರ್ಚನೆ ಮಾಡಿಸಿ, ತೀರ್ಥ–ಪ್ರಸಾದ ನೀಡಲು ಪೂಜಾ ಸಾಮಗ್ರಿಗಳೊಡನೆ ಸಿದ್ಧಳಾಗಿ ಬಂದೆ. ಪಾರ್ಥಿವ ಶರೀರದ ಮೇಲೆ ಹೊಂದಿಸಿದ್ದ ರಾಶಿರಾಶಿ ಮೊಲ್ಲೆ–ಮಲ್ಲಿಗೆಯ ಮೇಲೆ ಏನೋ ಹಾರಾಡುತ್ತಿದ್ದವು. "ಇದೇನೂ ಇಲ್ಲೆಲ್ಲೂ ಕೊಳೆಯಿಲ್ಲ, ವಾಸನೆಯಿಲ್ಲ ನೊಣ ಏಕೆ ಬಂದವು ?" ಎಂದು ಆತಂಕದಿಂದ ಕೇಳಿದೆ. ಶಿವಣ್ಣ ಶಿರೂರು ಹೇಳಿದರು, "ಇವು ನೊಣಗಳಲ್ಲ ಜೇನ್ನೊಣಗಳು. ಎಷ್ಟು ಓಡಿಸಿದರೂ ಹೋಗುತ್ತಿಲ್ಲ." ನಾನು ಚಕಿತಳಾದೆ. ಜೇನ್ನೊಣ ಕಚ್ಚಿದರೆ ನಂಜು. ಅವುಗಳ ಕೊಂಡಿ ಚೂಪು. ಸಿಕ್ಕಾಪಟ್ಟೆ ಜನ" ಎಂದು ಸ್ವಲ್ಪ ಆತಂಕ–ವಾದರೂ, ಅಂತರಂಗವು ಆಶ್ಚರ್ಯ–ಆನಂದದಲ್ಲಿ ಮುಳುಗಿತು. "ಇದು ಸಾಂಕೇತಿಕ ಘಟನೆ. ಪರಮಾತ್ಮನು ತನ್ನ ಪ್ರೀತಿಯನ್ನು ಸಾಂಕೇತಿಕವಾಗಿ ತೋರಿಸುತ್ತಿದ್ದಾನೆ" ಎನ್ನಿಸಿತು. ಅವು ಸಾವಿರಾರು ಸಂಖ್ಯೆಯಲ್ಲಿ ಇದ್ದವು. ಶಾಂತವಾಗಿ ಅತ್ಯಂತ ಆನಂದದಿಂದ ಹಾರಾಡುತ್ತ ಮಕರಂದವನ್ನು ಈಂಟುತ್ತಿದ್ದವು. ನಾನು ಎಡಗೈಯಲ್ಲಿ ಇಷ್ಟಲಿಂಗವನ್ನು ಇಟ್ಟು ಮಲ್ಲಿಗೆ ಹೂವು ಮುಡಿಸುತ್ತಲೇ ಅಲ್ಲೂ ಹಾರಾಡಿದವು. ಯಾವ ವ್ಯಗ್ರತೆಯೂ ಇಲ್ಲ; ಅವುಗಳ ಹಾರಾಟದಲ್ಲಿ ಶಾಂತಿ–ಸಂತೃಪ್ತಿ–ಆನಂದ ತುಂಬಿತ್ತು. ಈ ದೃಶ್ಯಾವಳಿ ಎಲ್ಲರಲ್ಲೂ ಅಚ್ಚರಿ ಹುಟ್ಟಿಸಿತ್ತು. ಮಾಲೆ ಹೆಚ್ಚಾ–ದಂತೆ ಎತ್ತಿ ಕೊಂಚದೂರದಲ್ಲಿ ಕಾರ್ಯಕರ್ತರು ರಾಶಿ ಹಾಕುತ್ತಿದ್ದರು. ಅದೇ ಹೂವೆ; ಆದರೆ ಅವು ಅಲ್ಲಿಗೆ ಹೋಗುತ್ತಿರಲಿಲ್ಲ. ಪೂಜ್ಯ ಅಪ್ಪಾಜಿಯವರಿಗೆ ಹಾಕಿದ್ದ ಹೂವಿನ ಮೇಲೆಯೇ ಕೂರುತ್ತ–ಹಾರುತ್ತ ಇದ್ದವು.

"ಬಲ್ಲಿದ ಬಸವನ ತೆರದಲಿ ತಮ್ಮಯ ದೇಹವೆ ದೇಗುಲ ವೆಂದಿಹರು
ಎಲ್ಲಿದ್ದರು ಜನ ಮುಕುರುವ ತಮ್ಮಯ ಜೀವನ ಜೇನಾಗಿರಿಸಿಹರು"

[41 ನೇ ಪುಟಕ್ಕೆ ಮುಂದುವರಿದಿದೆ]



॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ಬೆಂಗಳೂರಿನಲ್ಲಿ ಜರುಗಿದ ಅಖಿಲ ಭಾರತ ಬಸವ ಧರ್ಮ ತೃತೀಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ದಿ. 14-5-1995 ರಂದು ಘೋಷಿಸಿದ ನಿರ್ಣಯಗಳು

ಬಸವ ಧರ್ಮದ ಮಹಾಜಗದ್ಗುರು ಪೀಠಾಧೀಶ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳ ದಿವ್ಯ ಸನ್ನಿಧಿಯಲ್ಲಿ ಗುರುವಾರ ದಿ 11–5–95 ರಂದು ರಾಷ್ಟ್ರೀಯ ಬಸವ ದಳದ ಕೇಂದ್ರ ಸಮಿತಿಯ ಪದಾಧಿಕಾರಿಗಳು ಸಭೆ ಸೇರಿ ಕೈಗೊಂಡ ನಿರ್ಣಯಗಳು.

1. ಲಿಂಗಾಯತವು ಸ್ವತಂತ್ರ ಧರ್ಮ :

ಧರ್ಮಪಿತ ಬಸವಣ್ಣನವರಿಂದ ಸ್ಥಾಪಿಸಲ್ಪಟ್ಟ ಲಿಂಗಾಯತ (ಲಿಂಗವಂತ) ಧರ್ಮವು ಒಂದು ಸ್ವತಂತ್ರ ಧರ್ಮವಾಗಿದ್ದು. ಇದು ಪ್ರಗತಿಪರವು, ಪ್ರಾಯೋಗಿ–ಕವೂ ಆಗಿದೆ. ಪರಿಪೂರ್ಣ ಸಮಾಜವನ್ನು ಕಟ್ಟಬಲ್ಲ ಸಂಪೂರ್ಣ ಧರ್ಮವಾಗಿದೆ. ಯಾವುದೇ ವರ್ಣ, ವರ್ಗ, ಜಾತಿ, ಲಿಂಗಭೇದವಿಲ್ಲದೆ ಎಲ್ಲ ಮಾನವರನ್ನೂ ಇಂಬಿಟ್ಟು ಕೊಳ್ಳುವ ಕಳಕಳಿ ಮತ್ತು ಸಾಮರ್ಥ್ಯ ಹೊಂದಿರುವ ಲಿಂಗಾಯತ ಧರ್ಮವು ಬೌದ್ಧ, ಜೈನ, ಕ್ರೈಸ್ತ, ಮುಸ್ಲಿಂ, ಸಿಖ್ ಧರ್ಮಗಳಂತೆ ಸ್ವತಂತ್ರ ಮತ್ತು ಸ್ವಾವಲಂಬಿ ಧರ್ಮವಾಗಿರುವ ಕಾರಣ, ಇದಕ್ಕೆ ರಾಷ್ಟ್ರೀಯ ಮತ್ತು ಜಾಗತಿಕ ಮನ್ನಣೆ ಪಡೆಯಲು ಯತ್ನಿಸಬೇಕು. ಸಂವಿಧಾನಾತ್ಮಕ ಮನ್ನಣೆ ಮತ್ತು ಸ್ವತಂತ್ರ ಧರ್ಮಗಳ ಸಾಲಿನಲ್ಲಿ ಮಾನ್ಯತೆ ಪಡೆಯಲು ಸೂಕ್ತ ಪ್ರಯತ್ನ ಮಾಡಬೇಕು.

2. ಲಿಂಗಾಯತ ಧರ್ಮವು ಅಲ್ಪಸಂಖ್ಯಾತರ ಧರ್ಮ :

ವಿಶ್ವಗುರು ಬಸವಣ್ಣನವರು ಗಣಲಾಂಛನವನ್ನಾಗಿ ಇಷ್ಟಲಿಂಗವನ್ನು ನೀಡಿ ಲಿಂಗಾಯತ ಧರ್ಮವನ್ನು ಕೊಟ್ಟರು. ಇದರ ಮುಖ್ಯ ಉದ್ದೇಶ ದೇವರು–ಧರ್ಮ–ಸಂಸ್ಕಾರ ವಂಚಿತರಾದ ಅಸಂಖ್ಯಾತ ಜನರಿಗೆ ಪೂಜೆಯ ಹಕ್ಕನ್ನು, ಧಾರ್ಮಿಕ ಸಮಾ–ನತೆಯನ್ನು, ಸಾಮಾಜಿಕ ಸಮಾನತೆ–ಸ್ವಾತಂತ್ರ್ಯಗಳನ್ನು, ದೇವರ ಕೃಪೆಯನ್ನು ಪಡೆಯುವ ಸದವಕಾಶವನ್ನು ಕೊಡಬೇಕು ಎಂಬುದೇ ಆಗಿತ್ತು. ಅದರಂತೆಯೇ ಎಲ್ಲ ಜಾತಿಮತ ಪಂಥ ಪಂಗಡಗಳವರೂ ಈ ಸಂಸ್ಕಾರವನ್ನು ಪಡೆದುಕೊಂಡು ಪುನೀತ–ರಾದರು. ಇಂದಿಗೂ ಲಿಂಗವಂತ/ಲಿಂಗಾಯತ ಸಮಾಜದಲ್ಲಿ ಎಲ್ಲ ಕಾಯಕಗಳವರೂ

ಇರುವುದನ್ನು ಕಾಣುತ್ತೇವೆ. ಸಾಂಪ್ರದಾಯಿಕ ಸಮಾಜದಲ್ಲಿ ಪೂಜೆಯ ಹಕ್ಕನ್ನು ವಿಶೇಷವಾಗಿ ಹೊಂದಿದ್ದ ಬ್ರಾಹ್ಮಣರಿಂದ ಹಿಡಿದು, ಇಂದು ಪರಿಶಿಷ್ಟ ಜಾತಿ/ಪಂಗಡ, ಹಿಂದುಳಿದ ವರ್ಗಗಳು ಎಂದು ಗುರುತಿಸಲ್ಪಡುವ ಎಲ್ಲ ಜಾತಿ, ಉದ್ಯೋಗಗಳವರೂ ವಿಶ್ವಗುರು ಬಸವಣ್ಣನವರ ಕಾಲದಿಂದಲೂ ಇಂದಿನವರೆಗೆ ದೀಕ್ಷಾಸಂಸ್ಕಾರ ಪಡೆಯುತ್ತಿದ್ದಾರೆ. ಇವರೆಲ್ಲರೂ ಧರ್ಮ ಸಂಸ್ಕಾರ ಹೊಂದಿದ ಮಾತ್ರಕ್ಕೆ ಅವರ ಆರ್ಥಿಕ ಸ್ಥಿತಿ ಸುಧಾರಿಸುವುದಿಲ್ಲ. ಇಂದಿನ ಲಿಂಗಾಯತ ಸಮಾಜದಲ್ಲಿ ಮಡಿವಾಳಿಕೆ, ಕ್ಷೌರಿಕ ವೃತ್ತಿ, ಕುರಿ ಕಾಯುವಿಕೆ, ಕುಂಬಾರಿಕೆ, ಗಾಣದ ಕಾಯಕ, ಸಮಗಾರಿಕೆ, ಮುಂತಾದ ಎಲ್ಲ ವೃತ್ತಿಗಳವರೂ ಇದ್ದಾರೆ. ಆದ್ದರಿಂದ ಸ್ವತಂತ್ರ ಧರ್ಮಾನುಯಾಯಿಗಳಾದ ಲಿಂಗಾಯತರನ್ನು ಧಾರ್ಮಿಕ ಅಲ್ಪಸಂಖ್ಯಾತರು ಎಂದು ಪರಿಗಣಿಸಬೇಕು. ಈ ದಿಶೆಯಲ್ಲಿ ಎಲ್ಲ ರೀತಿಯ ಮಾನ್ಯತೆ ಪಡೆಯಲು ಪ್ರಯತ್ನ ಮಾಡಬೇಕು. ಇದೇ ಉದ್ದೇಶಕ್ಕಾಗಿ ಹುಟ್ಟಿರುವ ಲಿಂಗಾಯತ ಧರ್ಮ ಮಹಾಸಭಾ (ಕೇಂದ್ರ) ಸಂಸ್ಥೆಯು ವ್ಯವಸ್ಥಿತ ಪ್ರಯತ್ನ ಮಾಡಬೇಕು.

3. ಲಿಂಗಾಯತ/ಲಿಂಗವಂತ/ಬಸವ ಧರ್ಮ :

ಲಿಂಗಾಯತ ಧರ್ಮವು ವಚನ ಸಾಹಿತ್ಯವನ್ನೇ ಧಾರ್ಮಿಕ ಸಂವಿಧಾನವನ್ನಾಗಿ ಹೊಂದಿದೆ. ಆದಿ ಶರಣರು ವಚನ ಸಾಹಿತ್ಯದಲ್ಲಿ ಲಿಂಗವಂತ/ಲಿಂಗಾಯತ ಎಂಬ ಪದಗಳನ್ನು ಮಾತ್ರ ಬಳಸಿರುವುದರಿಂದ ತತ್ತ್ವವಾಚಕವಾಗಿ ಈ ಧರ್ಮಕ್ಕೆ ಲಿಂಗಾಯತ/ಲಿಂಗವಂತ ಪದಗಳನ್ನು ಮಾತ್ರ ಬಳಕೆ ಮಾಡಬೇಕು. ಪರಮಾತ್ಮನು ನಿರಾಕಾರ. ಅವನನ್ನು ಇಷ್ಟಲಿಂಗದಾಕಾರದಲ್ಲಿ ಚುಳುಕಾಗಿ ಮಾಡಿ, ದೇಹದ ಮೇಲೆ ಧರಿಸಿಕೊಂಡ ವ್ಯಕ್ತಿಯೇ ಲಿಂಗಾಯತ/ಲಿಂಗವಂತ. ವಿದ್ಯೆ ಇದ್ದವನು ವಿದ್ಯಾವಂತ, ಹಣ ಇದ್ದವನು ಹಣವಂತ, ಶೀಲವಿದ್ದವನು ಶೀಲವಂತ ಅದೇ ರೀತಿ ಇಷ್ಟಲಿಂಗವಿದ್ದವನು ಲಿಂಗವಂತ. ಇಷ್ಟಲಿಂಗವನ್ನು ದೇಹಕ್ಕೆ ಆಯತ (ಸಂಬಂಧ) ಮಾಡಿಕೊಂಡವನೇ ಲಿಂಗಾಯತ. ಈ ಪದಗಳು ಅತ್ಯಂತ ಸ್ಪಷ್ಟವಿರುವ ಕಾರಣ ಲಿಂಗಾಯತ/ಲಿಂಗವಂತ ಪದಗಳನ್ನೇ ಬಳಸಬೇಕಲ್ಲದೆ ಗೊಂದಲ ಉಂಟುಮಾಡುವ, ಅಸ್ಪಷ್ಟ ಅರ್ಥ ನೀಡುವ ವೀರಶೈವ ಪದವನ್ನು ಬಸವಗುರು ಸಂಸ್ಥಾಪಿತ ಧರ್ಮಕ್ಕೆ ಬಳಸಿ ತಾತ್ತ್ವಿಕ ತಪ್ಪು ಮಾಡಬಾರದು.

ಈ ಧರ್ಮಕ್ಕೆ ಬಸವ ಧರ್ಮ ಎಂಬ ಹೆಸರನ್ನು ಶಿವಯೋಗಿ ಸಿದ್ಧರಾಮೇಶ್ವರರು ಪ್ರಯೋಗಿಸಿ ಇದು ಪ್ರತಿಪಾದಿಸುವ ಯೋಗಕ್ಕೆ ಬಸವಯೋಗ ಎಂದು ಕರೆದಿದ್ದಾರೆ. ಹರಿಹರ ಮಹಾಕವಿಯೂ 'ಬಸವ ಧರ್ಮ' ಪದ ಪ್ರಯೋಗವನ್ನು ಮಾಡಿದ್ದಾನೆ. ಲಿಂಗಾಯತ ಧರ್ಮ ಎಂದಾಗ ತತ್ತ್ವವಾಚಕವಾಗುವುದು. ಬಸವ ಧರ್ಮ ಎಂದಾಗ

ಇದು ಬೌದ್ಧಧರ್ಮ ಎಂದಂತೆ ಗುರುವಾಚಕವಾಗುವುದು. ಆದ್ದರಿಂದ ಲಿಂಗಾಯತ/ಲಿಂಗವಂತ ಧರ್ಮ, ಬಸವ ಧರ್ಮ ಎಂದು ಬಳಸಬೇಕು. ಮತ್ತು ಧರ್ಮ ಎಂಬ ವಿಶಾಲವ್ಯಾಪ್ತಿಯ ಪದವನ್ನು ಬಳಸಬೇಕೇ ವಿನಾ ಲಿಂಗಾಯತ–ಜಾತಿ/ಮತ/ಪಂಥ ಎಂದು ಸಂಕುಚಿತಾರ್ಥದಲ್ಲಿ ಬಳಸಬಾರದು.

4. ಧರ್ಮಭಾಷೆ ಕನ್ನಡ :

ಅ) ಲಿಂಗಾಯತ ಧರ್ಮದ ಭಾಷೆ ಕನ್ನಡ. ವೈದಿಕ ಧರ್ಮ–ಸಂಸ್ಕೃತ, ಬೌದ್ಧ ಧರ್ಮ–ಪಾಲಿ, ಜೈನಧರ್ಮ – ಅರ್ಧಮಾಗಧಿ, ಇಸ್ಲಾಂ ಧರ್ಮ – ಅರೇಬಿಕ್, ಯಹೂದಿ ಧರ್ಮ–ಹೀಬ್ರು, ಸಿಖ್‌ಧರ್ಮ–ಪಂಜಾಬಿಯಲ್ಲಿ ಜನ್ಮಿಸಿದಂತೆ ಅಂದರೆ ಆ ಧರ್ಮದ ಪ್ರವಾದಿ, ದ್ರಷ್ಟಾರರ ಮಾತೃಭಾಷೆಗಳಲ್ಲಿ ರೂಪುಗೊಂಡಂತೆ ಲಿಂಗಾಯತ ಧರ್ಮದ ಸಂವಿಧಾನ ಹುಟ್ಟಿರುವುದು ಕನ್ನಡ ಭಾಷೆಯಲ್ಲಿ. ಪಂಜಾಬಿ ಭಾಷೆಯನ್ನು ಗುರುಮುಖಿ ಎಂದು ಕರೆದಂತೆ ಕನ್ನಡವು ಇಂದು ಶರಣ ಭಾಷೆಯಾಗಿದೆ. ಮಹಾರಾಷ್ಟ್ರದ ಕೆಲವು ಭಾಗಗಳಲ್ಲಿ ಲಿಂಗವಂತ ಧರ್ಮವನ್ನು "ಕಾನಡಿ ಧರ್ಮ" ಎಂದು ಜನಸಾಮಾನ್ಯರು ಕರೆಯುವುದನ್ನು ಕಾಣುತ್ತೇವೆ. ಹೀಗೆ ಲಿಂಗಾಯತ ಧರ್ಮವು ಕನ್ನಡದ ಧರ್ಮವಾಗಿದ್ದರೆ, ಕನ್ನಡವು ಶರಣ ಭಾಷೆ/ವಚನ ಭಾಷೆಯಾಗಿದೆ. ಈ ಹಿನ್ನೆಲೆಯಲ್ಲಿ ಬಸವ (ಲಿಂಗಾಯತ) ಧರ್ಮದ ಅನುಯಾಯಿಗಳು ತಾವು ಎಲ್ಲೇ ಇರಲಿ. ಆಯಾ ಪ್ರಾಂತೀಯ ಭಾಷೆಯು ಯಾವುದು ಇರುವುದೋ ಅದನ್ನು ಶೈಕ್ಷಣಿಕ ಭಾಷೆಯಾಗಿ ಕಲಿತರೂ, ಕನ್ನಡವನ್ನು ಧರ್ಮಭಾಷೆಯನ್ನಾಗಿ ಕಲಿಯಲೇಬೇಕು. ಆಯಾ ಪ್ರಾಂತೀಯ ಭಾಷೆ ಮಾತೃಭಾಷೆಯಾಗಿದ್ದರೂ ಲಿಂಗಾಯತರು ಕನ್ನಡವು ಧರ್ಮ ಭಾಷೆಯಾದ ಕಾರಣ ಕಲಿಯಬೇಕು. ಇಲ್ಲದಿದ್ದರೆ ವಚನ ಸಾಹಿತ್ಯದ ಅಂತಃಸತ್ವವನ್ನು, ಲಿಂಗಾಯತ ಧರ್ಮದ ಸಾರವನ್ನು ತಿಳಿಯಲು ಸಾಧ್ಯವಾಗುವುದಿಲ್ಲ.

ಆ) ಅವರವರ ಮಾತೃಭಾಷೆಗಳಲ್ಲಿಯೇ ಆಯಾ ಧರ್ಮಾನುಯಾಯಿಗಳ ಧಾರ್ಮಿಕ ಸಂಸ್ಕಾರ, ವಿಧಿ–ವಿಧಾನಗಳು ನಡೆಯಬೇಕೆಂಬುದೇ ಆದಿ ಶರಣರ ಅಪೇಕ್ಷೆಯಾಗಿರುವುದರಿಂದ ಲಿಂಗಾಯತ ಧರ್ಮಾನುಯಾಯಿಗಳು ಕನ್ನಡದಲ್ಲಿ ವಚನ ಸಾಹಿತ್ಯದ ಪ್ರಕಾರವಾಗಿಯೇ ತಮ್ಮ ಧಾರ್ಮಿಕ ಸಂಸ್ಕಾರ–ವಿಧಿ ವಿಧಾನಗಳನ್ನು ಪೂರೈಸಬೇಕು. ಮಾತೃಭಾಷೆ ಬೇರೆ ಇದ್ದವರು ಕನ್ನಡದ ವಚನಗಳನ್ನು ತಮ್ಮ ಮಾತೃಭಾಷೆಗೆ ಪರಿವರ್ತನೆ (ತರ್ಜುಮೆ) ಮಾಡಿ ವಿಧಿವಿಧಾನಗಳನ್ನು ನಡೆಸಬೇಕು.

5. ಸಾಹಿತ್ಯ ವಿಕೃತಿಗೆ ಕಡಿವಾಣ :

ವಚನ ವಾಙ್ಮಯವು ಇಂದು ಕೇವಲ ಒಂದು ಸಾಹಿತ್ಯವಾಗಿ ಉಳಿಯದೆ ಒಂದು ಧಾರ್ಮಿಕ ಸಂವಿಧಾನವಾಗಿದೆ. ಪ್ರತಿನಿತ್ಯವು ಅಸಂಖ್ಯಾತ ಅನುಯಾಯಿಗಳು ಅದರ

ಪಠಣ, ಪಾರಾಯಣ ಮಾಡುತ್ತಲಿದ್ದಾರೆ. ಕೆಲವಾರು ಸ್ವಾರ್ಥಿಗಳು, ಧೂರ್ತರು ಈಗಾಗಲೇ ಅದರಲ್ಲಿ ಹಸ್ತಕ್ಷೇಪ ಮಾಡಿ, ಕೃತ್ರಿಮ ವಚನಗಳನ್ನು ತೂರಿಸಿ ಮೂಲ ವಚನಕಾರರ ಆಶಯ – ಸಿದ್ಧಾಂತಗಳಿಗೆ ಚ್ಯುತಿ ತಂದಿದ್ದಾರೆ. ಇಂಥ ಸನ್ನಿವೇಶದಲ್ಲಿ ಸೈದ್ಧಾಂತಿಕ ಚೌಕಟ್ಟನ್ನು ಇಟ್ಟುಕೊಂಡು ಪ್ರಕ್ಷಿಪ್ತ ವಚನಗಳನ್ನು ಆರಿಸಿ ತೆಗೆದು ಶುದ್ಧೀಕರಣ ಮಾಡುವ ಅಗತ್ಯವಿರುವಾಗ, ಆ ಪ್ರಯತ್ನವೂ ನಡೆದಿರುವಾಗ ಇತ್ತೀಚಿನ ಕೆಲವು ಬರಹಗಾರರು ವಚನ ಸಾಹಿತ್ಯವನ್ನು ವಿಕೃತವಾಗಿ ಅರ್ಥಮಾಡುತ್ತಿರುವರು, ಬಳಸುತ್ತಿರುವರು.

ವಿಶ್ವಗುರು ಬಸವಣ್ಣನವರು, ಚನ್ನಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಅಕ್ಕ ನಾಗಲಾಂಬಿಕೆ ಮುಂತಾದವರು ಲಿಂಗಾಯತ ಧರ್ಮದ ಸಂಸ್ಮರಣೀಯ ವ್ಯಕ್ತಿಗಳು ; ವಿಶ್ವಗುರು ಬಸವಣ್ಣನವರು ಮಂತ್ರಪುರುಷರು, ಧರ್ಮಕರ್ತರು, ಕಾರಣಿಕರು, ಅವರಿಂದು ಕೋಟಿಗಟ್ಟಳೆ ಲಿಂಗಾಯತ ಧರ್ಮಾನುಯಾಯಿಗಳ ಮತ್ತು ಲಿಂಗಾಯತೇತರ ತತ್ತ್ವಾಭಿಮಾನಿಗಳ ಹೃದಯದಲ್ಲಿ ಆರಾಧಿಸಲ್ಪಡುತ್ತಿದ್ದಾರೆ. ಇಂಥ ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರ ಬಗ್ಗೆ ಕೆಲವರು ಆಧುನಿಕ ಬರಹಗಾರರು ಕುಚೋದ್ಯದ ಪುಸ್ತಕಗಳನ್ನು ಬರೆದಿರುವುದು, ಬರೆಯುತ್ತಿರುವುದೇ ಅಲ್ಲದೆ ಹೀನಾಮಾನವಾಗಿ ಬೈದು, ಅಭಿವ್ಯಕ್ತಿ ಸ್ವಾತಂತ್ರ ಮತ್ತು ಸೃಜನಶೀಲತೆಯ ಹೆಸರಿನಲ್ಲಿ ತಾವು ಮಾಡಿದ ನಿಂದನೆಯನ್ನು ಸಮರ್ಥಿಸಿಕೊಳ್ಳುವ ಹವ್ಯಾಸ ಬೆಳೆಸಿಕೊಂಡಿದ್ದಾರೆ. ಇಂಥ ಕುಚೋದ್ಯದ ಬರಹಗಾರರನ್ನು ಮತ್ತೆ ಕೆಲವರು ಸಮರ್ಥಿಸಿಕೊಳ್ಳುವ ಪ್ರಯತ್ನ ಮಾಡುತ್ತಾರೆ.

ಬಸವಾದಿ ಪ್ರಮಥರ ಚರಿತ್ರೆ–ಚಾರಿತ್ರ್ಯ–ಸಂದೇಶಗಳಿಗೆ ಕಲಂಕವನ್ನು ಉಂಟು ಮಾಡುವ ಬರಹಗಳನ್ನು ಅರ್ಥಾತ್ ಸಾಹಿತಿಗಳ ಲೇಖನಿ–ದೌರ್ಜನ್ಯ, ಹಲ್ಲೆಯನ್ನು ಪ್ರಜ್ಞಾವಂತ ಅನುಯಾಯಿಗಳು ಸಹಿಸಿಕೊಳ್ಳದೆ ಪ್ರತಿಭಟಿಸಬೇಕು. ಅಂಥ ವಿಧ್ವಂಸಕ, ವಿಕೃತ ಮನಸ್ಸಿನ ಸಾಹಿತ್ಯ ಹೊರಬರದಂತೆ, ಪ್ರಚಾರಗೊಳ್ಳದಂತೆ ಕಟ್ಟೆಚ್ಚರ ವಹಿಸಬೇಕು. ಪ್ರವಾದಿ ಮೊಹಮ್ಮದರ ಬಗ್ಗೆಯಾಗಲೀ, ಛತ್ರಪತಿ ಶಿವಾಜಿ ಮಹಾರಾಜರ ಬಗ್ಗೆಯಾಗಲೀ, ರಾಜಕೀಯ ನೇತಾರರಾದ ಅಣ್ಣಾದೂರೈ ಬಗ್ಗೆಯಾಗಲೀ ಇಂಥ ಸಾಹಿತ್ಯ ಬರೆಯದೆ, ವಿಶ್ವವಿಭೂತಿಗಳಾದ ಬಸವಣ್ಣ, ಅಕ್ಕಮಹಾದೇವಿ ಮುಂತಾದವರ ಬಗ್ಗೆಯೇ ಬರೆಯುವ ಚಪಲವು ಲೇಖಕರಲ್ಲಿ ಇರುವುದನ್ನು ಗಮನಿಸಿದಾಗ ಲಿಂಗಾಯತ ಸಮಾಜದಲ್ಲಿರುವ ಅನೈಕ್ಯತೆ, ಪರಸ್ಪರ ತೋರಿಸುವ ಈರ್ಷೆ, ಧರ್ಮಸಂರಕ್ಷಕರ ಲಾಂಛನ ಧರಿಸಿದ ಮಠಾಧಿಪತಿಗಳ ನಿರಭಿಮಾನ, ಅಂತರಂಗಿಕ ಬಸವದ್ವೇಷಗಳೇ ಇದಕ್ಕೆ ಕಾರಣ ಮತ್ತು ಪ್ರೇರಣೆ ಎನ್ನಿಸದಿರದು. ಈ ಹಿನ್ನಲೆಯಲ್ಲಿ ಇಂದು ಧರ್ಮಾನುಯಾಯಿಗಳಲ್ಲಿ ಕಟ್ಟೆಚ್ಚರ ಅಗತ್ಯ.

6. **ಮಹಾಚೈತ್ರ ಪಠ್ಯರದ್ದತಿಗಾಗಿ ಸರ್ಕಾರಕ್ಕೆ ಅಭಿನಂದನೆ :**

ಕಲಬುರ್ಗಿ ಮತ್ತು ಕುವೆಂಪು ವಿಶ್ವವಿದ್ಯಾಲಯಗಳ ಪಠ್ಯಕ್ರಮದಿಂದ ಮಹಾಚೈತ್ರ ಎಂಬ ಅತ್ಯಂತ ಹೀನಾಯವಾದ, ಕುಚೋದ್ಯದ ಪುಸ್ತಕವನ್ನು ಬಸವ ಭಕ್ತರ ನೋವನ್ನು ಪರಿಗಣಿಸಿ, ರದ್ದುಮಾಡಿದ ಸನ್ಮಾನ್ಯ **ಮುಖ್ಯಮಂತ್ರಿ ಶ್ರೀ ಹೆಚ್. ಡಿ. ದೇವೇಗೌಡರನ್ನು** ರಾಷ್ಟ್ರೀಯ ಬಸವದಳ ಮತ್ತು ಸಮಸ್ತ ಬಸವ ತತ್ತ್ವಾನುಯಾಯಿಗಳ ಸಮೂಹ ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ.

ಮತ್ತು ಆ ಪುಸ್ತಕವು ಅಸ್ತಿತ್ವದಲ್ಲಿ ಇರಲು ಅನರ್ಹವಾಗಿದ್ದು, ಶಾಶ್ವತವಾದ ಕಪ್ಪುಕಲೆಯಾಗಿ ಬಸವಾದಿ ಪ್ರಮಥರ ವಿಷಯದಲ್ಲಿ ಉಳಿದು, ಭಾವೀ ಜನಾಂಗದ ಮೇಲೆ ತಪ್ಪು ಪ್ರಭಾವ ಬೀರುವ ಕಾರಣ ಅದನ್ನು ಪೂರ್ಣವಾಗಿ ಚಲಾವಣೆ-ಪ್ರಕಾಶನದಿಂದ ರದ್ದುಮಾಡಬೇಕೆಂದು ಮನವಿ ಸಲ್ಲಿಸಿ, ಆಗ್ರಹಿಸುತ್ತದೆ.

7. ವಿಶ್ವಗುರು ಬಸವಣ್ಣನವರು ಜನ್ಮಿಸಿದ್ದು ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯಾದಂದು, ರೋಹಿಣಿ ನಕ್ಷತ್ರದಲ್ಲಿ ; (ಕ್ರಿ.ಶ. 1134). ಲಿಂಗೈಕ್ಯರಾದುದು ನಳನಾಮ ಸಂವತ್ಸರದ ಶ್ರಾವಣ ಮಾಸದ ಶುದ್ಧ ಪಂಚಮಿಯಂದು; ಕ್ರಿ.ಶ. 1196 ರಲ್ಲಿ. 1996 ನೆಯ ಇಸವಿಗೆ 800 ವರ್ಷಗಳು ಪೂರೈಸುತ್ತವೆ. ಆದ್ದರಿಂದ ಕರ್ನಾಟಕ ಸರ್ಕಾರವು ಲಿಂಗೈಕ್ಯ–ಅಷ್ಟಶತಮಾನೋತ್ಸವವನ್ನು ಹಮ್ಮಿಕೊಂಡು ಬಸವಾದಿ ಪ್ರಮಥರ ಸಾಧನೆ–ಸಂದೇಶ ಕುರಿತು ಹೆಚ್ಚಿನ ಪ್ರಚಾರ ನೀಡಬೇಕೆಂದು ವಿನಂತಿಸಿಕೊಳ್ಳಬೇಕು.

ಅ) ಬಸವ ತತ್ತ್ವಾನುಯಾಯಿಗಳು, ಸಂಘ ಸಂಸ್ಥೆಗಳು 1996 ನೇ ಸಾಲಿನ ಬಸವ ಲಿಂಗೈಕ್ಯ ದಿನದಿಂದ 1997 ನೆಯ ಸಾಲಿನ ಬಸವ ಪಂಚಮಿ (ಶ್ರಾವಣ ಶುದ್ಧ ಪಂಚಮಿ)ವರೆಗೆ, ಶ್ರೀ ಬಸವೇಶ್ವರ ಅಷ್ಟಶತಮಾನೋತ್ಸವವನ್ನು ಆಚರಿಸುತ್ತ, ವಚನ ವಾಙ್ಮಯದ ಪ್ರಚಾರ, ಪಠಣ, ಪಾರಾಯಣ, ಅನುಷ್ಠಾನ ಮಾಡಬೇಕು.

ಆ) ಶ್ರೀ ಬಸವೇಶ್ವರ ಅಷ್ಟ ಶತಮಾನೋತ್ಸವದ ನಿಮಿತ್ತ ಕೇಂದ್ರ ಸರ್ಕಾರವು ಅಂಚೆ ಚೀಟಿ ಮುದ್ರಿಸಲು ಪ್ರೇರಣೆ ನೀಡಬೇಕು. ಪಾರ್ಲಿಮೆಂಟ್ ಭವನದಲ್ಲಿ ಕಾಯಂ ಆಗಿ ಶ್ರೀ ಬಸವಣ್ಣನವರ ಭಾವಚಿತ್ರ ಪ್ರದರ್ಶಿಸಬೇಕು ಎಂಬುದನ್ನು ಮನವರಿಕೆ ಮಾಡಿಕೊಡಬೇಕು; ಶ್ರೀ ಬಸವಣ್ಣನವರ ತತ್ತ್ವಸಿದ್ಧಾಂತಗಳು ಇಡೀ ಮಾನವ ಕುಲಕ್ಕೆ ಬೇಕು ; ಸಮೃದ್ಧ ಭಾರತವನ್ನು ಕಟ್ಟಲು ಬೇಕು. ಆದ್ದರಿಂದ ಸಮಸ್ತ ಭಾರತೀಯರಿಗೆ ಶ್ರೀ ಗುರು ಬಸವಣ್ಣನವರ ಪರಿಚಯ ಮಾಡಿಕೊಡಲು ನೆರವಾಗುವಂತೆ ಕೇಂದ್ರ ಸರ್ಕಾರವು ಬಸವ ಜಯಂತಿಗೆ ರಜೆಯನ್ನು ಘೋಷಿಸಬೇಕು.

8. ಲಿಂಗಾಯತ ಧರ್ಮ ಮಹಾಸಭಾ-ರಾಷ್ಟ್ರೀಯ ಬಸವ ದಳ ಸ್ಥಾಪನೆ :

ಬಸವ ತತ್ವಾನುಯಾಯಿ ಲಿಂಗಾಯತರನ್ನು ಸಂಘಟಿಸಲು, ವ್ಯವಸ್ಥಿತ ಒಕ್ಕೂಟವಾಗಿ ಪುನರ್ರಚಿಸಲು ಲಿಂಗಾಯತ ಧರ್ಮ ಮಹಾಸಭಾ ಎಂಬ ಸಂಘಟನೆಯನ್ನು ಬಸವಧರ್ಮ ಸಂಸ್ಥಾಪನಾ ದಿನದಂದು (ದಿ. 14. 1. 1995) ಕೂಡಲಸಂಗಮದಲ್ಲಿ ಉದ್ಘಾಟಿಸಲಾಗಿದ್ದು, ಇದರ ಕೇಂದ್ರ ಕಾರ್ಯಾಲಯವು ಬೆಂಗಳೂರಿನಲ್ಲಿದೆ. ಆದ್ದರಿಂದ ಶರಣ ಬಂಧುಗಳು ಎಲ್ಲ ರಾಜ್ಯ, ಜಿಲ್ಲೆ, ತಾಲ್ಲೂಕು, ಗ್ರಾಮಗಳಲ್ಲೂ ಲಿಂಗಾಯತ ಧರ್ಮ ಮಹಾಸಭಾದ ಘಟಕಗಳನ್ನು ಅವರ ಕಾರ್ಯಾಂಗವಾಗಿ ರಾಷ್ಟ್ರೀಯ ಬಸವ ದಳಗಳನ್ನು ತೆರೆದು ಸಮಾಜ-ಸಂಘಟನೆ ಮಾಡಬೇಕು.

9. ವಚನ ವಾಙ್ಮಯ ಪರಿಶೀಲನಾ ಮತ್ತು ಪಠ್ಯಪುಸ್ತಕ ಪರಿಶೀಲನಾ-ಸಮಿತಿಗಳು :

ಅ) 12ನೆಯ ಶತಮಾನದ ಶರಣರ ವಚನ ವಾಙ್ಮಯದ ವಿಕೃತಿ ತಡೆಯಲು, ವಚನ ಸಾಹಿತ್ಯ ಪರಿಶೀಲನಾ ಸಮಿತಿಯೊಂದನ್ನು ರಚಿಸಿದ್ದು ಈ ಸಮಿತಿಯ ಸದಸ್ಯರು ಎಲ್ಲ ಭಾಷೆಗಳಲ್ಲಿ ಪ್ರಕಟವಾಗುವ ವಚನ ಸಾಹಿತ್ಯ ವಚನಕಾರರ ಕುರಿತಾದ ಗ್ರಂಥಗಳನ್ನು ಓದಿ, ಟಿಪ್ಪಣಿ ಮಾಡಬೇಕು. ರಾಷ್ಟ್ರೀಯ ಬಸವದಳಗಳವರು ಪ್ರಕಟವಾಗುವ ಸಾಹಿತ್ಯ ಓದಿ ಆಕ್ಷೇಪಾರ್ಹವಾದುದು ಇದ್ದರೆ ತಕ್ಷಣ ವಚನ ಸಾಹಿತ್ಯ ಪರಿಶೀಲನಾ ಸಮಿತಿಯ ಗಮನಕ್ಕೆ ತರಬೇಕು.

ಆ) ಪ್ರಾಥಮಿಕ ಶಾಲೆಯ ಪಠ್ಯಕ್ರಮದಿಂದ ಹಿಡಿದು ವಿಶ್ವವಿದ್ಯಾಲಯಗಳವರೆಗೆ ಪಠ್ಯವಾಗಿ ಆಯ್ಕೆಯಾಗುವ ವಚನ ಸಾಹಿತ್ಯ-ವಚನಕಾರರಿಗೆ ಸಂಬಂಧಿಸಿದ ಗ್ರಂಥಗಳನ್ನು ಅವು ಬಿಡುಗಡೆಯಾಗುತ್ತಲೇ ಓದಿ, ಆಕ್ಷೇಪಾರ್ಹ ಭಾಗಗಳಿದ್ದರೆ ಪರಿಶೀಲಿಸಲು ಪಠ್ಯಪುಸ್ತಕ ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆ, ಮಾತ್ರವಲ್ಲ ಯಾವುದೇ ಲೇಖಕರ ಕೃತಿಯು ಪಠ್ಯವಾಗಿ ಆಯ್ಕೆಯಾಗುತ್ತಲೇ ಅದನ್ನು ಈ ವಿದ್ವಾಂಸರ ಸಮಿತಿಯ ಗಮನಕ್ಕೆ ತಂದು ನಂತರ ಅಗತ್ಯವಿರುವ ವಿಪುಲ ಸಂಖ್ಯೆಯಲ್ಲಿ ಮುದ್ರಿಸಬೇಕೆಂದು ಒಂದು ಮನವಿಯನ್ನು ಪಠ್ಯಪುಸ್ತಕ ನಿರ್ದೇಶಕರುಗಳಿಗೆ ದಿ. 1-4-1995ರಂದು ಸಲ್ಲಿಸಲಾಗಿದೆ. ಈ ಆರೋಗ್ಯಕರ ಕ್ರಮದಿಂದಾಗಿ ಮಹಾಪುರುಷರ, ಅವರ ಸಂದೇಶಗಳ ವಿಕೃತೀಕರಣ ತಪ್ಪಲು ಸಾಧ್ಯವಿದೆ.

10. ರಾಷ್ಟ್ರೀಯ ಹಬ್ಬ ಆಚರಣೆ :

ರಾಷ್ಟ್ರೀಯ ಬಸವ ದಳಗಳವರು ಗಣರಾಜ್ಯೋತ್ಸವದ ಪ್ರತಿವರ್ಷದ ಜನವರಿ 26 ರಂದು ಮತ್ತು ಸ್ವಾತಂತ್ರ್ಯೋತ್ಸವ ಆಗಸ್ಟ್ 15 ರಂದು ಆಚರಿಸುವ ಪರಿಪಾಠ ಇರಿಸಿಕೊಳ್ಳಬೇಕು.

11. ಹುಟ್ಟು ಲಿಂಗಾಯತರ ಆತ್ಮಾವಲೋಕನ :

ಧರ್ಮಪಿತ ಬಸವಣ್ಣನವರು ಕೊಟ್ಟ ಲಿಂಗಾಯತವು ಒಂದು ಜಾತಿಯಲ್ಲ ಧರ್ಮ. ಇದು ಹುಟ್ಟಿನಿಂದ ಬರದೆ ಧರ್ಮಸಂಸ್ಕಾರದಿಂದ ಬರುವುದು. ಆದರೆ ಎಂದೋ ಒಂದು ಕಾಲಕ್ಕೆ ದೀಕ್ಷಾವಂತರಾಗಿ, ಸಾಂಪ್ರದಾಯಿಕ ಲಿಂಗವಂತರಾಗಿರುವ ಅನೇಕರು ಜಾತಿಯಿಂದ ಲಿಂಗವಂತರೆಂದು ಹೇಳಿಕೊಳ್ಳುವ ಪರಿಪಾಠವಿದೆ. ಇಂದು ಬಹುಪಾಲು ಜನರು ಬಸವ ತತ್ತ್ವವನ್ನು ತಿಳಿದುಕೊಂಡು ಶರಣ ಸಂಸ್ಕೃತಿಗೆ ಬದ್ಧರಾಗುತ್ತಿದ್ದಾರೆ. ಮತ್ತಿತರರು ಬಹಳ ಸಂಕುಚಿತ ಮತಿಯವರಾಗಿ, ಜಾತಿವಾದಿಗಳಾಗಿ, ಕಂದಾಚಾರದ ಕೂಪದಲ್ಲಿ ಮುಳುಗಿದ್ದಾರೆ. ಇದು ಧರ್ಮಕರ್ತ ಬಸವಣ್ಣನವರಿಗೆ ಬಹಳ ವ್ಯಥೆಯನ್ನು ಉಂಟುಮಾಡುವ ಸಂಗತಿ. ನಾವು ಅದ್ದೂರಿಯ ಬಸವ ಜಯಂತಿ, ಸಮ್ಮೇಳನಗಳನ್ನು ಮಾಡಿದ ಮಾತ್ರಕ್ಕೆ ಆದಿ ಪ್ರಮಥ ಬಸವಣ್ಣನವರಿಗೆ ನಿಜವಾದ ಆನಂದ ಪ್ರಾಪ್ತಿಯಾಗದು. ಈ ಉತ್ಸವ ಸಮ್ಮೇಳನಗಳು ನಿಜ ತತ್ತ್ವದ ಅನುಷ್ಠಾನಕ್ಕೆ ಸಹಾಯಕವಾಗಬೇಕು. ಮನೆಯು ಅಂದವಾಗಿ, ಸ್ವಚ್ಛವಾಗಿದ್ದರೆ ಮನೆಯಲ್ಲಿ ವಾಸಿಸುವವರಿಗೂ ನೆಮ್ಮದಿ, ಇತರರನ್ನು ಆಹ್ವಾನಿಸಲು ಸಂತೋಷ. ಮನೆಯಲ್ಲಿ ಜೇಡರ ಬಲೆ ನೇತಾಡುತ್ತಿದ್ದು, ಜಿರಳೆ-ಹಲ್ಲಿ ಹರಿದಾಡುತ್ತಿದ್ದರೆ, ಕಸವು ತುಂಬಿದ್ದರೆ ಮನೆಯಲ್ಲಿರುವವರಿಗೂ ನೆಮ್ಮದಿ ಇಲ್ಲ. ಹೊರಗಿನವರನ್ನು ಆಹ್ವಾನಿಸಲೂ ಧೈರ್ಯ-ಸಂತೋಷವಿರದು. ಲಿಂಗಾಯತ ಸಮಾಜ ಎಂಬ ಮನೆಯಲ್ಲಿ ಜಾತಿಪ್ರಜ್ಞೆ ಎಂಬ ಜೇಡರ ಬಲೆ ಇದ್ದು, ಮೂಢನಂಬಿಕೆಗಳೆಂಬ ಜಿರಳೆ-ಹಲ್ಲಿ ಹರಿದಾಡುತ್ತಿದ್ದು, ಪರಸ್ಪರ ಮತ್ಸರ-ಈರ್ಷೆ ಎಂಬ ಕಸ ತುಂಬಿದ್ದರೆ ಯಾರಿಗೆ ತಾನೇ ನೆಮ್ಮದಿ ಇರುತ್ತದೆ ಮತ್ತು ಇತರರನ್ನು ಆಹ್ವಾನಿಸಲು ಧೈರ್ಯವಿರುತ್ತದೆ. ನಮ್ಮ ದೇಶಕ್ಕೆ ಇಂದು ವಿಶ್ವಗುರು ಬಸವಣ್ಣನವರು ನೀಡಿದ ಧಾರ್ಮಿಕ ಸಂದೇಶ ಬೇಕಾಗಿದೆ. ಅದನ್ನು ಸಂಕುಚಿತಗೊಳಿಸಿ ತನ್ಮೂಲಕ ಭಾರತ ದೇಶಕ್ಕೆ ಧರ್ಮ ಸಂಸ್ಕಾರದಿಂದ ವಂಚಿತರಾದ ಅಸಂಖ್ಯಾತ ಜನ ಸಮುದಾಯಕ್ಕೆ, ಮಾನವ ಕುಲಕ್ಕೆ ಅಪಚಾರ ಮಾಡಬಾರದು. ಆದ್ದರಿಂದ ಇಂದು ಲಿಂಗಾಯತರು ಆತ್ಮಾವಲೋಕನ ಮಾಡಿಕೊಂಡು, ಶರಣ ಸಮಾಜವನ್ನು, ಜಾತಿ-ವರ್ಣ-ವರ್ಗರಹಿತ ಧರ್ಮಸಹಿತ ಕಲ್ಯಾಣ ರಾಜ್ಯವನ್ನು ಕಟ್ಟುವುದಕ್ಕೆ ಪಣ ತೊಡಬೇಕೆಂದು ನಿರ್ಧರಿಸಲಾಗಿದೆ.

ದಿನಾಂಕ 14-5-1995 **ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ**
ಕಾರ್ಯಾಧ್ಯಕ್ಷೆ,

ರಾಷ್ಟ್ರೀಯ ಬಸವ ದಳ, ಬಸವ ಮಂಟಪ, 2035, 20 ನೆಯ ಮುಖ್ಯರಸ್ತೆ,
ಕಾರ್ಡ್‌ರಸ್ತೆ, 2 ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010.

ಗಣನಾಯಕರು :	ಗಣನಾಯಕಿಯರು :
ಶರಣ. ಬಸವಕುಮಾರ್ ಪಾಟೀಲ್, ಬೀದರ	ಶರಣೆ. ದೇವಿಕಾ ಶರಣಪ್ಪ, ಬೆಂಗಳೂರು
ಶರಣ. ಡಾ|| ನಿತೀನಚಂದ್ರ ಹತ್ತೀಕಾಳ, ಧಾರವಾಡ	ಶರಣೆ. ಮಾಲೂತಾಯಿ ಚಂದ್ರಕಾಂತ ಸ್ವಾಮಿ
ಶರಣ. ಸುಭಾಷ್ ಪಾಟೀಲ, ಹೈದರಾಬಾದ	ಶರಣೆ. ಸರೋಜಮ್ಮ ನಾಗರಾಜು, ಮೈಸೂರು
ಶರಣ. ಆರ್. ಜಿ. ಶೆಟಗಾರ, ಗುಲ್ಬರ್ಗಾ	ಶರಣೆ. ಜಯಮ್ಮ ಚಂದ್ರಪ್ಪ, ಶಿವಮೊಗ್ಗ
ಶರಣ. ಆರ್. ಚಂದ್ರಶೇಖರ, ತಮಿಳುನಾಡು	ಶರಣೆ. ಅನ್ನಪೂರ್ಣ, ಬೀದರ
ಶರಣ. ಡಿ. ಎಸ್. ವಿಜಯಕುಮಾರ್, ಶಿವಮೊಗ್ಗ	ಶರಣೆ. ಶಾರದಾ ತಾಯಿ, ಬಳ್ಳಾರಿ

ಅಂಚೆಯಲ್ಲಿ ಬಂದ ಒಂದು ಅನಾಮಧೇಯ ಪತ್ರ

॥ ಜೈ ಮಾಚಿದೇವ ॥

ಮಾಚಿದೇವ ಸೇನೆಯಿಂದ

ಬಸವ ಕಲ್ಯಾಣದಲ್ಲಿ ದಿ. 1-6-1995 ರಂದು ನಡೆದ ಘಟನೆಗೆ ಕಾರಣರಾರು ಬಲ್ಲಿರಾ ? ಜಾತಿವಾದಿಗಳಾಗಿ, ಅಡ್ಡಪಲ್ಲಕ್ಕಿಯ ಮೇಲೆ ಹತ್ತಿ ಇನ್ನಿತರರ ಹೆಗಲ ಒತ್ತಿ, ತಾವೇ ಶ್ರೇಷ್ಠರೆಂದು ಮೆರೆಯುತ್ತ ಎತ್ತರದ ಕುರ್ಚಿಯನ್ನು ಏರಿ ಇತರ ಜಂಗಮರನ್ನು ತಿರಸ್ಕಾರದಿಂದ ಕಾಣುತ್ತ, ಧರ್ಮಗುರು ಬಸವೇಶ್ವರರನ್ನು ನಿಂದಿಸುತ್ತ ಕೊಬ್ಬಿದ ಕೋಣಗಳಂತೆ ಅಟ್ಟಹಾಸಗೈಯುವ ಪಂಚಪೀಠಗಳಲ್ಲಿ ಇಬ್ಬರು ಬಸವ ಕಲ್ಯಾಣಕ್ಕೆ ಬಂದಾಗ ಬಾಲಸುಟ್ಟ ಬೆಕ್ಕಿನಂತೆ ಅವರು ಪೋಲಿಸ್ ಬೆಂಗಾವಲಿನಲ್ಲಿ ಓಡಿ ಹೋಗುವಂತ ಮಾಡಿದವರಾರು ಬಲ್ಲಿರಾ ? ರಾಷ್ಟ್ರೀಯ ಬಸವ ದಳದವರೇ ಅಲ್ಲಲ್ಲ; ಅವರು ಬರೀ ಘೋಷಣೆ-ಧಿಕ್ಕಾರಗಳ ವಾಕ್‌ಶೂರರು !

ವೇದಿಕೆಗೆ ಅಗ್ನಿಸ್ಪರ್ಶ ಮಾಡಿ, ಇನ್ನೆಂದೂ ಶರಣರ ಸ್ಥಾನಗಳಲ್ಲಿ ಉಪದ್ವ್ಯಾಪಿತನ ಮಾಡಬಾರದೆಂದು ಪೀಠಾಧೀಶರಿಗೆ ಬುದ್ಧಿ ಕಲಿಸಿದವರು ವೀರ-ಗಣಾಚಾರಿ ಮಡಿವಾಳ ಮಾಚಿದೇವರ ಸಂತತಿಯ ಮಾಚಿದೇವ ಸೇನೆಯವರು. ಇವರು ಯಾರು ಎಂದು ಹುಬ್ಬೇರಿಸಬೇಡಿರಿ. ರಾಷ್ಟ್ರೀಯ ಬಸವ ದಳವು ಶಿಸ್ತು-ಬದ್ಧ ಧಾರ್ಮಿಕ ಸಂಘಟನೆಯಾದರೂ ಇನ್ನೂ ಶಾಂತಿ ಮಾರ್ಗದಲ್ಲಿ ನಡೆಯಬೇಕೆನ್ನುವ ಬಸವ ಸಂತಾನ. ಇದರ ಮಾರ್ಗದರ್ಶಕರಾದ **ಪೂಜ್ಯ ಮಾತಾಜಿ** ಯವರು ಶಾಂತಿಪ್ರಿಯರು. ಅವರ ಬಗ್ಗೆ ನಮಗೆ ಅಪಾರ ಗೌರವ ಇದೆಯಾದರೂ, ಅಲ್ಲಿ ವೀರತ್ವದ ಕೊರತೆ ಇದೆ ಎನ್ನಿಸಿ, ಮಾಚಿದೇವ ಸೇನೆಯನ್ನು 1-5-1995 ರಂದು ಹುಟ್ಟುಹಾಕಲಾಗಿದೆ.

1994ರ ಜನವರಿ ಹತ್ತರಂದು ನಾವೆಲ್ಲ ಸಕ್ರಿಯ ರಾಷ್ಟ್ರೀಯ ಬಸವ ದಳದ ಕಾರ್ಯಕರ್ತರೇ. ಅಂದು ಆ ರಾಕ್ಷಸ ಶಾಸಕ ಕಾಶಪ್ಪನು ಪಂಚ ಪೀಠಗಳ ನೇರ ಉಪಸ್ಥಿತಿಯಲ್ಲಿ ಧರ್ಮಗುರು ಬಸವಣ್ಣನವರ ಭಾವಚಿತ್ರವನ್ನು, ಕಮಾನಿಗೆ ಕಟ್ಟಿದ್ದ ಬಸವ ಧ್ವಜವನ್ನು ಕಿಡವಿದಾಗ ನಮ್ಮ ರಕ್ತ ಕುದಿಯಿತು. ತೋಳುಗಳು ಚಟಪಡಿಸಿದವು. ನಮ್ಮ ಪ್ರಾಣವನ್ನು ಪಣಕ್ಕಿಟ್ಟು ಹೋರಾಡಲು ನಾವು ಸಿದ್ಧರಿದ್ದಾಗ ಕಾರ್ಯಕರ್ತರನ್ನು ಹುರಿದುಂಬಿಸುವುದು ಬಿಟ್ಟು, ಮಾತಾಜಿಯವರು ಮಾಡಿದ್ದೇನು ? ಸಾಮೂಹಿಕ ಪ್ರಾರ್ಥನೆ ಮಾಡಿಸಿ, ಪಂಚಪೀಠಾಧೀಶರು ಏನೇ ಮಾಡಲಿ ನೀವು ದುಡುಕಬೇಡಿ ಎಂದು ನಮ್ಮಿಂದ ಮಾತು ತೆಗೆದುಕೊಂಡುದು ಅವರ ಕಳಕಳಿಗೆ ಮಾರು ಹೋಗಿ ಮೌನವಾಗಿ ಬಸವ ಭಾವಚಿತ್ರಕ್ಕಾದ ಅವಮಾನವನ್ನು ಷಂಡರಂತೆ ಸಹಿಸಿಕೊಂಡೆವಾದರೂ, ನಮ್ಮ ಮನಸ್ಸಿನ ತಾಪ ಆರಲಿಲ್ಲ. ಸಮಯಕ್ಕಾಗಿ

ಕಾಯುತ್ತಿದ್ದೆವು. ಗಂಡು ಮೆಟ್ಟಿನ ನಾಡು, ಬಸವ ಭಕ್ತಿಯ ಬೀಡು ಬಸವ ಕಲ್ಯಾಣಕ್ಕೂ ಪಂಚಪೀಠಗಳು, ಕೆಲವು ಸಮಯ ಸಾಧಕರ ಧನ ಸಂಪಾದನೆಗೆ ಸಹಾಯಕವಾಗುವಂತೆ, ಬರುವ ಸುದ್ದಿ ತಿಳಿಯುತ್ತಲೇ ಅವರಿಗೆ ಬುದ್ಧಿ ಕಲಿಸಬೇಕೆಂದು ಮಾಚಿದೇವ ಸ್ಮರಣೋತ್ಸವದಂದು (ಮೇ 1 ಕಾಯಕದ ದಿನ) ಈ ಸೇನೆಯನ್ನು ಹುಟ್ಟು ಹಾಕಲಾಗಿದೆ. ಕಾರಣಾಂತರದಿಂದ ಇನ್ನೂ ಕೊಂಚ ಕಾಲ ನಾವು ಬಹಿರಂಗಗೊಳಿಸುವುದಿಲ್ಲ.

ನಮ್ಮ ಮೊಟ್ಟ ಮೊದಲ ಯಶಸ್ವಿ ಕಾರ್ಯ ಪಂಚಪೀಠಗಳ ಬಸವ ಕಲ್ಯಾಣದ ಕಾರ್ಯಕ್ರಮ ರದ್ದಾದುದು. ಅಂದು ಎಲ್ಲ ಪೋಲಿಸರು ಪ್ರದರ್ಶನಕಾರರ ಸುತ್ತಮುತ್ತಲೇ ತಿರುಗುತ್ತಿದ್ದುದರಿಂದ ವೇದಿಕೆ ಬಳಿ ಮೊದಲು ವಿದ್ಯುತ್ ವ್ಯವಸ್ಥೆ ನಿಲ್ಲಿಸಲು, ಕತ್ತಲಲ್ಲಿ ಬೆಂಕಿ ಹಚ್ಚಿ ತಪ್ಪಿಸಿಕೊಳ್ಳಲು ಅನುಕೂಲವಾಯಿತು. ಸುಲಭವಾಗಿ ನಮ್ಮ ಗುರಿ ಸಾಧಿಸಿತು.

ರಾಷ್ಟ್ರೀಯ ಬಸವ ದಳವು ಮೃದು ಧೋರಣೆಯ, ಮಂದಗಾಮಿ ಸಂಸ್ಥೆ. ಧರ್ಮಗುರು ಬಸವಣ್ಣನವರ ಸ್ವಭಾವಕ್ಕೆ ಹೊಂದುವಂಥದು. ಈ ಕಾಲದಲ್ಲಿ ಆ ಸಾತ್ವಿಕತೆ ಉಪಯೋಗವಾಗದು. "ಮಹಾಚೈತ್ರ" ಪುಸ್ತಕ ಓದಿ ನಾವು ಮಾರ್ಗದರ್ಶನ-ಸ್ಫೂರ್ತಿ ಪಡೆದಿದ್ದೇವೆ. ಮಡಿವಾಳ ಮಾಚಿದೇವರು ಹೇಳುವ "ನಾವು ಉತ್ತರಿಸುವುದು ಕತ್ತಿಯ ಮೂಲಕ" ಎಂಬ ಮಾತೆ ನಮಗೆ ಸ್ಫೂರ್ತಿ. ಮೊದಲೆಲ್ಲ ಸಾಹಿತ್ಯ ಓದಿ ಶರಣರು ಮೃದು ಮಾರ್ಗಿಗಳು, ಸಾತ್ವಿಕರು ಎಂಬ ಕಲ್ಪನೆ ಇತ್ತು. ಮಹಾಚೈತ್ರ ಓದಿದ ಮೇಲೆ ಮಾಚಿದೇವರು, ಹಡಪದ ಅಪ್ಪಣ್ಣನವರು ಮುಂತಾದವರು ಕೇವಲ ಸತ್ವಮಾರ್ಗಿಗಳಲ್ಲ ಹೋರಾಟಗಾರರು ಎಂಬ ಕಲ್ಪನೆ ಉಂಟಾಯಿತು.

ಮಠಾಧಿಪತಿಗಳ ಬಗ್ಗೆ ಶಿವಪ್ರಕಾಶ್ ಸರಿಯಾದ ಚಿತ್ರಣ ನೀಡಿದ್ದಾರೆ. ಮಠಾಧಿಪತಿಗಳು ಬಸವಣ್ಣನ ಶತ್ರುಗಳೇ ಸರಿ. ಅದರಲ್ಲೂ ಆ ಚಿತ್ರಣ ಪಂಚ ಪೀಠಾಧೀಶರಿಗೆ ಚೆನ್ನಾಗಿ ಅನ್ವಯವಾಗುವುದು. ಶರಣರನ್ನೆಲ್ಲ ಕುಲಗೆಟ್ಟವರು ಎಂದು ನಿಂದಿಸುತ್ತ ತಾವೇ ಉಚ್ಚಜಾತಿಯವರೆಂದು ಘೋಷಿಸಿಕೊಳ್ಳುತ್ತ, ಬೇಡ ಜಂಗಮ-ಪರಿಶಿಷ್ಟ ಜಾತಿ ಎಂದು ಬರೆದುಕೊಳ್ಳುತ್ತ ಮುಗ್ಧರೂ, ಅಶಿಕ್ಷಿತರೂ ಆದ ಬೇಡ ಜಂಗಮ, ಬುಡುಗ ಜಂಗಮರ ಸೌಲತ್ತುಗಳನ್ನು ಕಬಳಿಸುತ್ತ, ಮಾನವೀಯತೆಯಿಂದ ಸಮತಾವಾದವನ್ನೂ ಬೋಧಿಸಿದ ವಿಶ್ವಮಾನವ ಬಸವಣ್ಣನವರನ್ನು ಹೀಯಾಳಿಸುವ ಈ ಜಾತಿವಾದಿ ಪಂಚಪೀಠಾಧೀಶರಿಗೆ ಬುದ್ಧಿ ಕಲಿಸಲೆಂದೇ ಮಾಚಿದೇವ ಸೇನೆ ಮೈತಳೆದಿದೆ.

ದಲಿತ ಮೂಲದಿಂದ ಬಂದು ಲಿಂಗವಂತರಾಗಿ ಬಸವ ಪಥದಲ್ಲಿ ನಡೆದಿರುವವರ ಸಂಘಟನೆ ಇದು ಎಂಬುದನ್ನು ಸಾರ್ವಜನಿಕರ ಗಮನಕ್ಕೆ ತಂದು, ಸದ್ಯ ಗುಪ್ತವಾಗಿದ್ದುಕೊಂಡು ನಂತರ ಒಂದು ದಿನ ಪ್ರಕಟಗೊಳ್ಳುವ ಮನೀಷೆ ಹೊಂದಿರುವ

ಮಾನವತಾವಾದಿಗಳಾದ ಮಾಚಿದೇವ ಸೇನಾಪಡೆಯವರು.

ಬಸವ ಕಲ್ಯಾಣದ ಘಟನೆ

೧. ಘಟನೆಯ ವಿವರ ಕೇಳಿದ ಪತ್ರ

ದಿನಾಂಕ : 3-6-1995
ಬೆಂಗಳೂರು

ಶರಣರಾದ ಬಸವಕುಮಾರ್ ಪಾಟೀಲರು
ಅಧ್ಯಕ್ಷರು, ರಾಷ್ಟ್ರೀಯ ಬಸವ ದಳ,
ಬೀದರ.

ಇವರಿಗೆ ಬಸವ ಸ್ಮರಣಪೂರ್ವಕ ಶುಭಹಾರೈಕೆಗಳ .

ಬಸವ ಕಲ್ಯಾಣದಲ್ಲಿ ದಿ. 1-6-1995 ರಂದು ನಡೆಯಬೇಕಾಗಿದ್ದ ಪಂಚ-ಪೀಠಾಧೀಶರ ಕಾರ್ಯಕ್ರಮವು ನಡೆಯದೆ ಏನೇನೋ ಅಸ್ತವ್ಯಸ್ಥತೆಯುಂಟಾಯಿತು ಎಂಬ ಬಗ್ಗೆ ಬೇರೆ ಬೇರೆ ಪತ್ರಿಕೆಗಳಲ್ಲಿ ಭಿನ್ನ ಭಿನ್ನ ವರದಿಗಳು ಬಂದು ಸ್ವಲ್ಪ ಕಳವಳವು ಉಂಟಾಯಿತು. ಆದ್ದರಿಂದ ವಿವರಣೆ ತಿಳಿಯಲು ಈ ಪತ್ರವನ್ನು ಬರೆಯುತ್ತಿದ್ದೇವೆ.

ಅಖಿಲ ಭಾರತ ಬಸವ ಧರ್ಮ ಸಮ್ಮೇಳನವು ಮುಗಿದ ಮರುದಿನ ರಾಷ್ಟ್ರೀಯ ಬಸವ ದಳದ ಕೇಂದ್ರ ಸಮಿತಿಯ ಸಭೆ ಸೇರಿ, ಕೆಲವು ವಿಷಯ ಚರ್ಚಿಸಿದಾಗ ಪಂಚಾಚಾರ್ಯ ಮಠದವರು ಬಸವ ಕಲ್ಯಾಣಕ್ಕೆ ಬಂದು ಅಡ್ಡ ಪಲ್ಲಕ್ಕಿ ಉತ್ಸವ ಮಾಡುವ ವಿಷಯ ಚರ್ಚೆಗೆ ಬಂದಿತು.

"ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರ, ಕ್ರಾಂತಿಭೂಮಿ, ಶುದ್ಧ ಶರಣ ಕ್ಷೇತ್ರವಾದ ಬಸವ ಕಲ್ಯಾಣಕ್ಕೆ ಬಂದು ಪಂಚಪೀಠಾಧೀಶರು ಅಡ್ಡಪಲ್ಲಕ್ಕಿಯಲ್ಲಿ ಮೆರೆಯುವುದು ಏಕೆ ? ಇದಕ್ಕೆ ಅವಕಾಶ ನೀಡಬಾರದು, ಅವರು ಬರಬಾರದು" ಎಂದು ಬೀದರ ಜಿಲ್ಲೆಯ ಹಲವಾರು ಜನ ಅಂದಿನ ಸಭೆಯಲ್ಲಿ ನುಡಿದರು. ಆಗ ನಾವು ಹೇಳಿದೆವು, "ಇದು ಪ್ರಜಾಪ್ರಭುತ್ವ ; ಯಾರು ಎಲ್ಲಿ ಬೇಕಾದರೂ ಕಾರ್ಯಕ್ರಮ ಮಾಡಬಹುದು, ಬರುತ್ತೇವೆ ಎನ್ನುವವರನ್ನು ಬೇಡ ಎನ್ನಲು, ಕರೆಯುತ್ತೇವೆ ಎನ್ನುವವರನ್ನು ಕರೆಯಬೇಡಿ ಎನ್ನುವುದು ಸರಿಯಲ್ಲ" ಎಂದು ನಾನು ಸೂಚಿಸಿದೆ. ಆಗ ಕೆಲವರು ಹೇಳಿದರು, "ಬಸವ ಕಲ್ಯಾಣ ಶುದ್ಧವಾಗಿ ಶರಣರ ಕ್ಷೇತ್ರ. ಇವರು ಇಲ್ಲಿಯೂ ಬಂದು ಒಡಕು ಹುಟ್ಟಿಸುವರು, ವಿಶ್ವಗುರು ಬಸವಣ್ಣನವರ ಭಾವಚಿತ್ರಕ್ಕೆ ಅವಮಾನ ಮಾಡುವರು ; ಗುರುವಲ್ಲ, ಬಸವಣ್ಣ ಭಕ್ತ ಎಂದು ನಿಂದಿಸುವರು. ಇದನ್ನೆಲ್ಲ ನಾವು ತಾಳಿಕೊಳ್ಳಬೇಕೇ ? ನಾವು ಯಾರಾದರೂ ಅವರ ಕ್ಷೇತ್ರಗಳಿಗೆ ಹೋಗಿ ಗಲಾಟೆ ಮಾಡುತ್ತೇವೆಯೆ ?

ಕೂಡಲ ಸಂಗಮದಲ್ಲಿ 7ನೆಯ ಶರಣ ಮೇಳದ ಸಮಯದಲ್ಲಿ ಕಟ್ಟಿದ್ದ ಕಮಾನನ್ನು, ಧರ್ಮಗುರು ಬಸವಣ್ಣನವರ ಭಾವಚಿತ್ರ ಸಹಿತವಾಗಿ ಕೆಡವಿದಾಗಲೇ ನಮ್ಮ ರಕ್ತ ಕುದಿಯಿತು. ನೀವು ನಮ್ಮನ್ನು ತಡೆಗಟ್ಟಿದಿರಿ. ನ್ಯಾಯ-ತತ್ತ್ವಕ್ಕಾಗಿ ಹೋರಾಡಬೇಕೆಂಬ ಗಣಾಚಾರವನ್ನು ಬೆ ೀಧಿಸಿ, ನಮ್ಮನ್ನು ಹುರಿದುಂಬಿಸಿ ಅಂಥ ಸದವಕಾಶ ಬಂದಾಗ ಮತ್ತೆ ಸಹನೆಯಿಂದಿರಲು ಹೇಳುವಿರಿ ಬಸವ ಕಲ್ಯಾಣಕ್ಕೆ ಬಂದರೂ, ಕೂಡಲ ಸಂಗಮದಲ್ಲಿ ಬಸವ ಭಾವಚಿತ್ರಕ್ಕೆ ಮಾಡಿದ ಅಪಮಾನವನ್ನೇ ಇಲ್ಲೂ ಮಾಡದೆ ಇರುವುದಿಲ್ಲ. ನಾವು ಬಿಜಾಪುರ ಜಿಲ್ಲೆಯ ಜನರಂತೆ ಸುಮ್ಮನೆ ಕೂಡುವವರಲ್ಲ." ಎಂದು ಹಲವಾರು ಜನರು ಉದ್ರಿಕ್ತರಾಗಿ ನುಡಿದರು.

"ಬೆಳಗಾಂವದಲ್ಲಿ ನಡೆದ ವೀರಶೈವ ಮಹಾಸಭಾ ಅಧಿವೇಶನದಲ್ಲಿ ವಿರಕ್ತ ಮಠಾಧೀಶರಾದ ವಯೋವೃದ್ಧ ನಾಗನೂರು ಲಿಂ॥ ಶಿವಬಸವ ಮಹಾಸ್ವಾಮಿಗಳಿಗೆ ಸಮಾನ ಕುರ್ಚಿಕೊಡದೆ ಎಳೆದಾಡಿ ಅವಮಾನ ಮಾಡಿದರು. ಹಾಗೆಯೇ ಬೀದರ ಜಿಲ್ಲೆಯ ಬಸವಕಲ್ಯಾಣದ ಶ್ರೇಯೋಭಿವೃದ್ಧಿಗಾಗಿ ಕಂಕಣ ಬದ್ಧರಾದ ಸ್ವಾಮಿಗಳಿಗೆ ಸಮಾನ ಸ್ಥಾನ ಕೊಡದೆ ಹೋದರೆ ನಾವು ತೀವ್ರ ಪ್ರತಿಕ್ರಿಯೆ ತೋರಿಸುತ್ತೇವೆ" ಎಂದು ಮತ್ತೆ ಕೆಲವರು ಮಾತನಾಡಿದರು. ಈ ದಿಶೆಯಲ್ಲಿ ನಾನು ಸೂಚಿಸಿದ್ದು, "ಪಂಚಪೀಠಾಧೀಶರ ಕಾರ್ಯಕ್ರಮ ಅವರು ಯೋಜಿಸಿದಂತೆ ನಡೆಯಲಿ. ಅವರು ನಮ್ಮ ಧರ್ಮಗುರು ಬಸವಣ್ಣನವರಿಗೆ ಅವರ ಸಮಕಾಲೀನ ಶರಣರಿಗೆ ಅವಮಾನ ಮಾಡದಂತೆ ನೋಡಿರಿ. ಅಷ್ಟೆ, ಇನ್ನಾವ ವಿರಸ-ವಿರೋಧಗಳೂ ಬೇಡ" ಎಂದು.

ಅದರಂತೆಯೇ ನೀವುಗಳು ಶರತ್ತು ವಿಧಿಸಿ ಪಂಚಪೀಠಾಧೀಶರ ಕಾರ್ಯ-ಕ್ರಮಕ್ಕೆ ಸಹಕರಿಸುವುದಾಗಿಯೂ ಅಥವಾ ನಿಮ್ಮ ಪಾಡಿಗೆ ನೀವು ನಿರ್ಲಿಪ್ತರಾಗಿರುವುದಾಗಿಯೂ ಹೇಳಿದ್ದುದಾಗಿ ತಿಳಿಯಿತು. ಪತ್ರಿಕಾ ವರದಿಯಂತೆ, ಪಂಚಪೀಠಾಧೀಶರು ಎಲ್ಲರೂ ಬರದೆ ಇದ್ದರೂ, ಕೇವಲ ರಂಭಾಪುರಿ ಮತ್ತು ಕಾಶಿ-ಯವರು ಮಾತ್ರ ಬಂದಿದ್ದರೂ, ಬೀದರ ಜಿಲ್ಲೆಯ ಪ್ರಮುಖ ಮಠಾಧೀಶರಾದ ಬಸವ ಕಲ್ಯಾಣದ ಅನುಭವ ಮಂಟಪದ ಸಚೇತಕ ಶಕ್ತಿ, ರೂವಾರಿ ಪೂಜ್ಯ ಶ್ರೀ ಚನ್ನಬಸವ ಪಟ್ಟಾಧ್ಯಕ್ಷರ ಉತ್ತರಾಧಿಕಾರಿಗಳಾದ ಭಾಲ್ಕಿ ಹಿರೇಮಠಾಧ್ಯಕ್ಷ ಪೂಜ್ಯ ಶ್ರೀ ಬಸವಲಿಂಗ ಪಟ್ಟದ್ದೇವರು, ಬೀದರಿನ ಹುಲಸೂರಿನ ಶ್ರೀ ಗುರು ಬಸವೇಶ್ವರ ಸಂಸ್ಥಾನ ಮಠದ ಶ್ರೀ ನಿ. ಪ್ರ. ಶಿವಾನಂದ ಸ್ವಾಮಿಗಳು, ಬೀದರಿನ ಮುಕ್ತಿ-ಮಂದಿರದ ಶ್ರೀ ಶಿವಯೋಗೀಶ್ವರ ಸ್ವಾಮಿಗಳು ಮುಂತಾದವರಿಗೆ ಸಮಾನ ಸ್ಥಾನ ಕೊಡಲು ಒಪ್ಪದಿದ್ದರಿಂದ ಕಾರ್ಯಕರ್ತರು ಧಿಕ್ಕಾರ, ಘೋಷಣೆ ಕೂಗಿದರು.

ಅಸಮಾನತೆಯ ಪೋಷಕರಾದ ಪಂಚಪೀಠಾಧೀಶರ ವಿರುದ್ಧ ಪ್ರದರ್ಶನ ನಡೆಸಿದರು ಎಂಬುದು ತಿಳಿಯಿತು.

ಪ್ರದರ್ಶನಕಾರರನ್ನು ಚದುರಿಸಲು ಆರಕ್ಷಕರು ಲಾಠಿ ಪ್ರಹಾರ ಮಾಡಿದರು ಎಂಬುದು, ನಿಮ್ಮನ್ನೆಲ್ಲ ಬಂಧಿಸಿದರು ಎಂಬುದು ಅದೇ ಪತ್ರಿಕೆಯಿಂದಲೇ ತಿಳಿಯಿತು. ಆದರೆ ನಮಗೆ ವಿಷಾದವೆನಿಸಿದ್ದೆಂದರೆ ಕಾರ್ಯಕ್ರಮ ನಡೆಯುವ ವೇದಿಕೆಗೆ ಬೆಂಕಿ ಹೊತ್ತಿತೆಂಬುದು. ಇದನ್ನು ಮಾಡಿದವರು ಯಾರು ? ರಾಷ್ಟ್ರೀಯ ಬಸವ ದಳ ಅತ್ಯಂತ ಶಿಸ್ತು, ತತ್ತ್ವಬದ್ಧವಾದ ಸಂಸ್ಥೆ. ಈಗ ತಾನೇ ಅದು ಅತ್ಯುತ್ತಮ ಧ್ಯೇಯವಾದಿಗಳನ್ನು ಸಂಘಟಿಸುತ್ತ ಹೊರಟಿರುವಾಗ ಅದರ ಹೆಸರಿಗೆ ಕಲಂಕ ಬರದಂತೆ ನೋಡಿಕೊಳ್ಳಬೇಕು. ಕೆಲವು ಬಸವ ವಿರೋಧಿಗಳಾದ ದುರ್ಜನರು ತಾವೇ ಬೆಂಕಿ ಹಚ್ಚಿ, ರಾಷ್ಟ್ರೀಯ ಬಸವ ದಳದ ಹೆಸರಿಗೆ ಕಲಂಕ ತರಲು ಯತ್ನಿಸಿರಲೂ ಬಹುದು. ಆದ್ದರಿಂದ ಈ ಪತ್ರ ತಲ್ಪುತ್ತಲೇ ನನಗೆ ವಿವರವಾದ ಉತ್ತರವನ್ನು ಬರೆಯಿರಿ. ವೇದಿಕೆಗೆ ಬೆಂಕಿ ಇಟ್ಟವರು ನಮ್ಮವರೆ ? ಅಲ್ಲವೆ ? ಆಗ ನೀವೆಲ್ಲರೂ ಎಲ್ಲಿದ್ದಿರಿ ? ಈ ಘಟನೆ ನಡೆದಾಗ ವೇದಿಕೆ ಮೇಲೆ ಪಂಚಪೀಠಾಧೀಶರು ಇದ್ದರೆ ? ಲಾಠಿ ಪ್ರಹಾರ, ಭಾಲ್ಕಿಯ ಶ್ರೀಗಳಿಗೆ ಏಟಾಯಿತೆಂದು ಪತ್ರಿಕಾ ವರದಿ ಬಂದಿದೆ. ಇದು ಸತ್ಯವೇ ? ಪೋಲಿಸ್ ಸಬ್‌ಇನ್ಸ್‌ಪೆಕ್ಟರ್ ನಮ್ಮ ಶರಣೆಯರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದರು, ಸ್ಟೇಷನ್‌ದಲ್ಲಿ ಥಳಿಸಿದರು ಎಂದು ಯಾರೋ ಫೋನ್ ಮಾಡಿದ್ದರು. ಇದು ಸತ್ಯವೆ ?

ಪಂಚಪೀಠಾಧೀಶರು 1994 ರ ಜನವರಿ 10 ರಂದು ವಿಶ್ವಗುರು ಬಸವಣ್ಣನವರ ಭಾವಚಿತ್ರ ಕೆಡವಿದಾಗ ನಾನು ಅವರಿಂದ ಪ್ರತಿಜ್ಞೆ ಮಾಡಿಸಿಕೊಳ್ಳದಿದ್ದರೆ ಅಂದೇ ಬಿಸಿ ರಕ್ತದ ಯುವಕರು ದುಡುಕುತ್ತಿದ್ದರು. ಬಸವ ಗುರುವಿಗೆ ಅವರು ಮಾಡಿಸಿದ ಅವಮಾನ, ಬೆಳಗಾಂದಲ್ಲಿ ಹಿರಿಯ ಮಠಾಧೀಶರಿಗೆ ವೇದಿಕೆ ಮೇಲೆ ಮಾಡಿದ ಅವಮಾನಗಳು ಅನೇಕರ ಹೃದಯದಲ್ಲಿ ಲಾವಾರಸದಂತೆ ಕುದಿಯುತ್ತಿದ್ದು ದಿ. 1–6–1995 ರಂದು ಬಸವ ಕಲ್ಯಾಣದಲ್ಲಿ ಪ್ರತಿಭಟನಾ ರೂಪದಲ್ಲಿ ಧಿಕ್ಕಾರ, ಘೋಷಣೆ ಕೂಗುವ ಮೂಲಕ ವ್ಯಕ್ತವಾದಂತೆ ತೋರುತ್ತದೆ. ಆದರೆ ಇಂಥ ಘಟನೆ (ಬೆಂಕಿ ಹೊತ್ತಿ, ವೇದಿಕೆ ಸುಟ್ಟು ಕಾರ್ಯಕ್ರಮವು ರದ್ದಾದುದು) ನಡೆಯಲು ನೀವು ಅಂದರೆ ರಾಷ್ಟ್ರೀಯ ಬಸವ ದಳದವರು ಕಾರಣರಾಗಿರಲಿಕ್ಕಿಲ್ಲ ಎಂದು ನಂಬಿದ್ದೇನೆ. ಉದ್ವಿಗ್ನ ವಾತಾವರಣ ಉಪಯೋಗಿಸಿಕೊಂಡು ನಿಮ್ಮ ಸಂಘಟನೆಗೆ ಕೆಟ್ಟ ಹೆಸರು ತರಲು ಯಾರೋ ಬಸವ ತತ್ತ್ವ ವಿರೋಧಿಗಳು ವೇದಿಕೆಗೆ ಬೆಂಕಿ ಹಚ್ಚುವ ಕೀಳು ಕೆಲಸ ಮಾಡಿರಬಹುದೆಂದು ಊಹಿಸಿದ್ದೇವೆ. ಆದ್ದರಿಂದ ಈ ಪತ್ರ ತಲ್ಪುತ್ತಲೇ ನೀವು ವಿವರಗಳನ್ನು ಬರೆದು ತಿಳಿಸಿರಿ.

ಶುಭ ಹಾರೈಕೆಗಳೊಡನೆ,

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಕಾರ್ಯಾಧ್ಯಕ್ಷೆ

೨. ಗೃಹ ಮಂತ್ರಿಗಳಿಗೆ ಮನವಿ

ದಿನಾಂಕ 5–6–1995

ಬೆಂಗಳೂರು.

ಶ್ರೀಯುತ. ಪಿ. ಜಿ. ಆರ್. ಸಿಂಧ್ಯರವರು

ಸನ್ಮಾನ್ಯ ಗೃಹಸಚಿವರು,

ಕರ್ನಾಟಕ ಸರ್ಕಾರ,

ಬೆಂಗಳೂರು,

ಇವರಿಗೆ, ಶುಭಹಾರೈಕೆಗಳು,

ವಿಶ್ವಗುರು ಬಸವಣ್ಣನವರ ಕ್ರಾಂತಿಭೂಮಿ ಬಸವ ಕಲ್ಯಾಣದಲ್ಲಿ ದಿನಾಂಕ– 1–6–1995 ರಂದು ನಡೆದ ಅಹಿತಕರ ಪ್ರಸಂಗ ಕುರಿತು ಈ ವಿಶೇಷ ಮನವಿ ಸಲ್ಲಿಸಲಾಗಿದೆ.

ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ಅನುಭವ ಮಂಟಪದ ಮೂಲಕ ಇಡೀ ಭರತಖಂಡ ಮಾತ್ರವಲ್ಲದೆ ಅನ್ಯದೇಶಗಳ ಗಮನವನ್ನು ಸೆಳೆದ ಐತಿಹಾಸಿಕ ಸ್ಥಳ. ಅಫ್ಘಾನಿಸ್ಥಾನದಿಂದ ಸೂಫೀ ಪಂಥಾನುಯಾಯಿ ಮರುಳು ಶಂಕರದೇವ, ಸಿಂಹಳದಿಂದ ಸಿದ್ಧಬಸವಿದೇವ, ಕಾಶ್ಮೀರದ ದೊರೆ ಮಹಾದೇವ ಭೂಪಾಲ ಹೀಗೆ ನಾಡಿನಾದ್ಯಂತದಿಂದಲೂ ಕಲ್ಯಾಣಕ್ಕೆ ಆಗಮಿಸಿದರು. ಪ್ರಪ್ರಥಮ ವರ್ಣಾಂತರ ವಿವಾಹವನ್ನು ಕಂಡ ಕ್ರಾಂತಿಭೂಮಿ ಕಲ್ಯಾಣ, ಇದು ಶುದ್ಧವಾಗಿ **ಶರಣ–ಕ್ಷೇತ್ರ.**

ಇತ್ತೀಚಿನ ಕೆಲವು ವರ್ಷಗಳಲ್ಲಿ ಪಂಚಪೀಠಾಧೀಶರು ಶರಣರ ಸ್ಥಾನಗಳಲ್ಲಿ ಪ್ರವೇಶಿಸಿ ಅನವಶ್ಯಕ ಗೊಂದಲ, ಒಡಕು ಹುಟ್ಟಿಸುತ್ತಿದ್ದಾರೆ. ಕೂಡಲ ಸಂಗಮದ ಕಡೆಗೆ ಕಣ್ಣೆತ್ತಿಯೂ ನೋಡದಿದ್ದ ಇವರು ನಾವು ಆ ಕ್ಷೇತ್ರವನ್ನು ಬೆಳೆಸಬೇಕೆಂದು 1987 ರಲ್ಲಿ ಸಂಕಲ್ಪಿಸಿ, ಟ್ರಸ್ಟ್ ಮಾಡಿ ಕಾರ್ಯೋನ್ಮುಖರಾಗುತ್ತಲೇ, ಅವರ ಅನುಯಾಯಿಗಳ ಮೂಲಕ ಕಿರುಕುಳ ಆರಂಭಿಸಿದರು. ಇದಕ್ಕೆ, ಮೊದಲನೆ ಶರಣ–ಮೇಳ ನಡೆದ 1988 ರಿಂದಲೂ ಪೋಲೀಸ್ ಇಲಾಖೆಯಲ್ಲಿ ಸ್ಪಷ್ಟ ದಾಖಲೆಗಳಿವೆ. 1994 ನೆಯ ಸಾಲಿನ ಶರಣ ಮೇಳದಿಂದ ನೇರವಾಗಿ ಭಾಗವಹಿಸಿ, ಬಗೆಬಗೆಯ ಕಿರುಕುಳ ಕೊಡತೊಡಗಿದರು. ನಾವು ಸ್ವಭಾವತಃ ಶಾಂತಿವಾದಿಗಳಾದ ಕಾರಣ ಸಹನೆಯಿಂದ ತಾಳಿಕೊಂಡೆವು, ಪರಿಸ್ಥಿತಿಯನ್ನು ನಿಭಾಯಿಸಿದೆವು.

1994ರ ಜನವರಿ 10 ರಂದು ಜಗಳ ತೆಗೆಯಲೆಂದು ಕಾರ್ಯಕ್ರಮ ಹಾಕಿಕೊಂಡರು. ಸಮಾಜದ ಗಣ್ಯರು–ಹಿರಿಯರು ಎಷ್ಟು ಹಿತೋಪದೇಶ ಮಾಡಿದರೂ

ಸಮಾನಾಂತರ ಕಾರ್ಯಕ್ರಮ ನಡೆಸುವುದು ಹಿಂತೆಗೆದುಕೊಳ್ಳಲಿಲ್ಲ ಈ ವಿಷಯ ನಾನು ಏಕೆ ಪ್ರಸ್ತಾಪಿಸುತ್ತೇನೆಂದರೆ ಜೂನ್ ಒಂದರ ಘಟನೆಗೆ ಹಿನ್ನೆಲೆ 1994ರ ಜನವರಿ 10 ರಂದು ಕೂಡಲ ಸಂಗಮದಲ್ಲಿ ಪಂಚಪೀಠಾಧೀಶರು ತೋರ್ಪಡಿಸಿದ ವರ್ತನೆ ; ಶಾಸಕ ಕಾಶಪ್ಪನವರು ಐದೂ ಜನ ಸ್ವಾಮಿಗಳ ಪ್ರತ್ಯಕ್ಷ ಉಪಸ್ಥಿತಿಯಲ್ಲಿ ದಾರಿಯಲ್ಲಿ ಶರಣ ಮೇಳ ಉತ್ಸವ ಸಮಿತಿಯವರು ಕಟ್ಟಿಸಿದ್ದ ಸುಂದರ ಕಮಾನು ಮತ್ತು ಸುಂದರ ಬಸವ ಭಾವಚಿತ್ರವನ್ನು ಕೆಡವಿದರು, ಹಾರೆಗಳನ್ನು ಹಾಕಿ ಕಮಾನು ಕೆಡವಿದರು. ಸುಮಾರು ಒಂದು ಸಾವಿರ ಜನ ಸ್ವಯಂ ಸೇವಕರು ನಮ್ಮ ಆವರಣದಲ್ಲಿ, ಇನ್ನೂರು ಜನ ಅವರ ಮೆರವಣಿಗೆಯಲ್ಲಿದ್ದರು, ಪಂಚಪೀಠಾಧೀಶರ ಹಠಮಾರಿತನ ತಿಳಿದಿದ್ದ ನಾವು ನಮ್ಮ ಗೇಟಿಗೆ ಬೀಗ ಹಾಕಿಸಿದ್ದಲ್ಲದೆ, ನಮ್ಮ ಕಾರ್ಯಕರ್ತರನ್ನು ಒಂದೆಡೆ ಸೇರಿಸಿ ಪ್ರಾರ್ಥನೆ ಆರಂಭಿಸಿ ಯಾರೂ ಈ ಸ್ಥಳದಿಂದ ಚದುರಕೂಡದೆಂದು ಪ್ರತಿಜ್ಞೆ ಮಾಡಿಸಿಕೊಂಡೆವು. ಕಮಾನು ಮತ್ತು ಬಸವಣ್ಣನವರ ಭಾವಚಿತ್ರ ಬಿದ್ದಾಗ ನಮ್ಮ ಕಾರ್ಯಕರ್ತರು ಉದ್ವಿಗ್ನರಾದರು ; ಅಂತೂ ಹೇಗೋ ನಿಯಂತ್ರಿಸಿದ್ದಾಯಿತು, ನಮ್ಮ ಸಹನೆಯನ್ನು ಪೋಲೀಸ್ ಅಧಿಕಾರಿಗಳು ಕೊಂಡಾಡಿದರು.

ಈ ಘಟನೆ ಬಸವ ಕಲ್ಯಾಣದಲ್ಲಿಯೂ ಮರುಕಳಿಸಬಹುದೆಂದು ಬೀದರ ಜಿಲ್ಲೆಯ ಜನರು ನಿರೀಕ್ಷಿಸಿ, ಪಂಚಪೀಠಾಧೀಶರ ಅಡ್ಡಪಲ್ಲಕ್ಕಿ ಉತ್ಸವ ಇಡುತ್ತಲೇ ಸ್ವಾಗತ ಸಮಿತಿಯವರನ್ನು ಕಂಡು ಮಾತನಾಡಿದ್ದಾರೆ. ಅಗತ್ಯವಿಲ್ಲದ, ಸಮಾಜದಲ್ಲಿ ಶಾಂತಿ ಕದಡುವ, ಐಕ್ಯತೆಯಿದ್ದಲ್ಲಿ ಒಡಕು ಹುಟ್ಟಿಸುವ, ಬಸವ ಗುರುವನ್ನು ದ್ವೇಷಿಸುವ, ಅಸಮಾನತೆ ಪ್ರತಿಪಾದಿಸುವ ಇವರ ಕಾರ್ಯಕ್ರಮ ಬೇಡ ಎಂದರೂ ಕೇಳದೆ ಕೆಲವು ಸ್ವಾರ್ಥಿಗಳು ಹಠದಿಂದ ಕಾರ್ಯಕ್ರಮ ಹಾಕಿಕೊಂಡಿದ್ದಾರೆ, ಬಸವ ಕಲ್ಯಾಣದಲ್ಲಿ ಇದರಿಂದ 3 ವರ್ಗಗಳಾದವು. ಅವರನ್ನು ಆಹ್ವಾನಿಸಿ ತಮ್ಮ ಸ್ವಾರ್ಥ ಸಾಧಿಸಬೇಕು ಎನ್ನುವವರು, ಅವರು ಬರಲೇ ಕೂಡದು ಎನ್ನುವವರು, ಅವರು ಬಂದು ತಮ್ಮ ಕಾರ್ಯಕ್ರಮ ಮಾಡಿಕೊಳ್ಳಲಿ ಆದರೆ ವಿಶ್ವಗುರು ಬಸವಣ್ಣನವರ ತತ್ತ್ವಕ್ಕೆ, ಭಾವಚಿತ್ರಕ್ಕೆ ಅವಮಾನ ಮಾಡದಿದ್ದರೆ ಸಾಕು ಎನ್ನುವವರು. ರಾಷ್ಟ್ರೀಯ ಬಸವ ದಳದವರು 3ನೆಯ ವರ್ಗಕ್ಕೆ ಸೇರಿದವರು ಎಂಬುದನ್ನು ನಿಮ್ಮ ಗಮನಕ್ಕೆ ತರಬಯಸುತ್ತೇವೆ. ಏಕೆಂದರೆ, ನಿಮ್ಮ ಇಲಾಖೆಯವರು ಮತ್ತು ಪತ್ರಿಕೆಗಳವರು 2ನೆಯ ವರ್ಗದ ಜನರನ್ನು ಗುರುತಿಸದೆ ಹೋಗಿರುವುದು ನಮಗೆ ಸ್ಪಷ್ಟವಾಗಿದೆ, ಇದೇ ಲೋಪದಿಂದಾಗಿಯೇ ಆರಕ್ಷಕ ಇಲಾಖೆಯವರು ವೇದಿಕೆ ಬಳಿ, ಕಾರ್ಯಕ್ರಮದ ಸಭಾಂಗಣದಲ್ಲಿ ಎಚ್ಚರಿಕೆ ವಹಿಸದೆ, ಮೆರವಣಿಗೆಯಲ್ಲಿ ಕೇವಲ ಘೋಷಣೆ ಕೂಗುತ್ತಿದ್ದ ರಾಷ್ಟ್ರೀಯ ಬಸವ ದಳದ ಶರಣ–ಶರಣೆಯರ ಬಂಧನದಲ್ಲಿ ತೊಡಗಿ,

ವೇದಿಕೆ ಬಳಿ ಅಗ್ನಿ ಅನಾಹುತಕ್ಕೆ ಎಡೆಮಾಡಿಕೊಟ್ಟಿರುವುದು, ಅಗ್ನಿ ಆಕಸ್ಮಿಕ ಸಂಭವಿಸಿದಾಗ ರಾಷ್ಟ್ರೀಯ ಸವ ದಳದ ಮುಖ್ಯ ಕಾರ್ಯಕರ್ತರೆಲ್ಲ ಮೆರವಣಿಗೆಯಲ್ಲಿ ಘೋಷಣೆ ಕೂಗಿದ ಬಳಿಕ ನಡೆದ ಬಂಧನದಲ್ಲಿ ಸಿಕ್ಕಿದ್ದರು ಎಂಬುದಾಗಿ ನಮಗೆ ತಿಳಿದು ಬಂದಿದೆ. ಮೆರವಣಿಗೆಯು ಇದ್ದ ಸ್ಥಳಕ್ಕೂ ವೇದಿಕೆ-ಸಭಾಮಂಟಪಕ್ಕೂ ಸಾಕಷ್ಟು ಅಂತರವಿತ್ತು ಎಂದು ತಿಳಿದು ಬಂದಿದೆ. ಇದರಿಂದಾಗಿ ರಾಷ್ಟ್ರೀಯ ಬಸವ ದಳಕ್ಕೆ ಕೆಟ್ಟ ಹೆಸರು ತರಬೇಕು ಎನ್ನುವವರೋ ಅಥವಾ ಪಂಚಪೀಠಾಧೀಶರ ಕಾರ್ಯಕ್ರಮ ನಡೆಯಬೇಬಾರದು ಎನ್ನುವವರ ಕುಚೋದ್ಯತನದಿಂದಲೋ ಅಗ್ನಿ ಆಕಸ್ಮಿಕಕ್ಕೆ ಕಾರಣ ಎಂಬಂತೆ ವರದಿ ಮಾಡಿವೆ. ತತ್ತ್ವ ನಿಷ್ಠೆ–ಶಿಸ್ತು–ಸೇವೆಗಳಿಗೆ ಹೆಸರಾದ ರಾಷ್ಟ್ರೀಯ ಬಸವ ದಳ ಜನರ ಅಭಿಮಾನಕ್ಕೆ ಹೆಚ್ಚು ಹೆಚ್ಚು ಪಾತ್ರವಾಗುತ್ತಿರುವ ಈ ಸಮಯದಲ್ಲಿ ಅದರ ಬಗ್ಗೆ ತಪ್ಪು ಕಲ್ಪನೆ ಮೂಡುವುದು ನಮಗೆ ದುಃಖದ ಸಂಗತಿ. ರಾಷ್ಟ್ರೀಯ ಬಸವ ದಳದವರು ಮಾತುಕತೆಯ ಮೂಲಕ ಎಲ್ಲ ಸಮಸ್ಯೆ ಬಗೆಹರಿಸಲು ಯತ್ನಿಸಿ, ಸ್ವಾಗತ ಸಮಿತಿಯವರೊಡನೆ ಎರಡು-ಮೂರು ಸಲ ಮಾತುಕತೆ ನಡೆಸಿದ್ದಾರಂತೆ; ಬೆಳಗಾಂವದಲ್ಲಿ ನಡೆದ ವೀರಶೈವ ಮಹಾಸಭಾ ಸಮ್ಮೇಳನದಲ್ಲಿ ಪಂಚ ಪೀಠಾಧೀಶರು ವಯೋವೃದ್ಧರು, ಜನಪ್ರಿಯ ವಿರಕ್ತ ಸ್ವಾಮಿಗಳು; ಸಮ್ಮೇಳನದ ಪೋಷಕರು ಆಗಿದ್ದ ಶ್ರೀ ನಿ. ಪ್ರ. ಶಿವಬಸವ ಸ್ವಾಮಿಗಳಿಗೆ ತಮ್ಮ ಸಮಾನ ಕುರ್ಚಿಕೊಡಲು ನಿರಾಕರಿಸಿ, ಅವಮಾನ ಮಾಡಿದ ಪ್ರಸಂಗ ಇಡೀ ಸಮಾಜವನ್ನೇ ನೋಯಿಸಿತ್ತು; ಪಂಚಪೀಠಾಧೀಶರ ಅಹಂಕಾರ–ಅಸೌಜನ್ಯಯುತ ನಡವಳಿಕೆಯಿಂದ ಎಲ್ಲರೂ ತಲೆ ತಗ್ಗಿಸುವಂತಾಗಿತ್ತು. ಇದೇ ರೀತಿ ಬೀದರ ಜಿಲ್ಲೆಯ ಸ್ವಾಮಿಗಳಿಗೂ ಆಗಬಾರದು ಎಂದು ಮುಂಜಾಗ್ರತೆ ವಹಿಸಿ ರಾಷ್ಟ್ರೀಯ ಬಸವ ದಳದವರು ಮಾತುಕತೆಗಳಲ್ಲಿ ಆಸಕ್ತಿ ತೋರಿದ್ದಾರೆ. "ಸಮಾನವಾಗಿ ಕುರ್ಚಿ ಕೊಡುವುದಿಲ್ಲ" ಎಂದಾಗ ಪ್ರತಿಭಟನಾತ್ಮಕ ಘೋಷಣೆ–ಧಿಕ್ಕಾರಗಳನ್ನು ಮೆರವಣಿಗೆಯಲ್ಲಿ ಕೂಗಿದ್ದಾರೆ. ಇಂಥಾ ಅಹಿಂಸಾತ್ಮಕ ಪ್ರತಿಭಟನೆಗೆ ಭಾರತದ ಸಂವಿಧಾನ ಅನುಮತಿ ನೀಡಿದೆಯಷ್ಟೆ?.

ಬಸವ ಕಲ್ಯಾಣದ ಪಿ.ಎಸ್.ಐ. ಶ್ರೀ ಅಯ್ಯಂಗಾರ ಎಂಬುವವರು, ಚಿಟಗುಪ್ಪಾ ಪಿ.ಎಸ್.ಐ. ಮಲ್ಲಿಕಾರ್ಜುನ ಎಂಬುವವರು ಬಹಳ ದೌರ್ಜನ್ಯ ಪದರ್ಶಿಸಿದರೆಂಬುದಾಗಿ ತಿಳಿದುಬಂದಿದೆ. ಹೆಣ್ಣು ಮಕ್ಕಳ ಮೇಲೆ ಕೈ ಮಾಡಿರುವುದಾಗಿಯೂ, ಅವಾಚ್ಯ ಪದಗಳಿಂದ ಬೈದುದಾಗಿಯೂ ಸ್ಥಳೀಯರು ಮೇಲಧಿಕಾರಿಗಳಲ್ಲಿ ದೂರು ಸಲ್ಲಿಸಿದ್ದಾರೆ. ಈ ಇಬ್ಬರೂ ದರ್ಪಯುತ. ಅಸೌಜನ್ಯ ವರ್ತನೆಯ ಪಿ.ಎಸ್.ಐ.ಗಳಾಗಿ ಶಾಂತಿಯುತ ಪ್ರದರ್ಶನ ಮಾಡುತ್ತಿದ್ದವರ ಮೇಲೆ ಕೈಮಾಡಿರುವ ಕಾರಣ, ಉಭಯತರನ್ನೂ ಸಸ್ಪೆಂಡ್ ಮಾಡಬೇಕೆಂಬ ಬೇಡಿಕೆಯನ್ನು ಪ್ರದರ್ಶನಕಾರರು ಬೀದರ ಜಿಲ್ಲೆಯ

ಪೋಲೀಸ್ ವರಿಷ್ಠಾಧಿಕಾರಿಗಳಲ್ಲಿ ಇಟ್ಟಿದ್ದಾರೆ. ವಿದ್ಯಾವಂತರು, ಸುಸಂಸ್ಕೃತರೂ, ಪ್ರೌಢರೂ ಆದ ಮಹಿಳೆಯರನ್ನು "ಮಾನ-ಮರ್ಯಾದೆ ಇಲ್ಲದೆ ಬೀದಿಗೆ ಬಂದಿದ್ದೀರಾ ?" ಎಂದು ಚಿಟಗುಪ್ಪಾ ಪಿ. ಎಸ್. ಐ. ನಿಂದಿಸಿದ್ದಾಗಿ ತಿಳಿದು ಬಂದಿದೆ. ಯಾವ ಒತ್ತಡವೂ ಇಲ್ಲದೆ ಸ್ವಯಂ ಪ್ರೇರಣೆಯಿಂದಲೇ ಬಂಧನಕ್ಕೆ ಸಿದ್ಧರಾಗಿದ್ದ ಕಾರ್ಯಕರ್ತರ ಮೇಲೆ ಅನವಶ್ಯಕವಾಗಿ ಲಾಠಿ ಪ್ರಹಾರ ಮಾಡಿ ಅವರಿಗೆ ನೋವನ್ನುಂಟು ಮಾಡಲಾಗಿದೆ ಎಂದು ತಿಳಿದು ಖೇದವಾಗಿದೆ. ಅದಕ್ಕಾಗಿಯೇ ಬೀದರ ಜಿಲ್ಲೆಯ ಜನರು ಈ ಇಬ್ಬರೂ ಪಿ. ಎಸ್. ಐ. ಗಳನ್ನು ಸಸ್ಪೆಂಡ್ ಮಾಡಬೇಕೆಂದು ಆಗ್ರಹಿಸುತ್ತಿರುವುದಾಗಿ ತಿಳಿದು ಬಂದಿದೆ.

ತಾವು ಈ ದಿಶೆಯಲ್ಲಿ ಕೆಳಕಂಡಂತೆ ಕ್ರಮ ಕೈಗೊಳ್ಳಬೇಕೆಂಬುದು ನಮ್ಮ ಬೇಡಿಕೆಯಾಗಿದೆ.

1. ಇಡೀ ಘಟನೆಯ ತನಿಖೆಯನ್ನು ಏರ್ಪಡಿಸಬೇಕು. ಪ್ರತಿಭಟನೆ ಆದರಲ್ಲೂ ಅಹಿಂಸಾತ್ಮಕ ಪ್ರತಿಭಟನೆ ಸಂವಿಧಾನ ವಿರೋಧಿಯಲ್ಲ ಆದರೆ ಅಗ್ನಿ ಆಕಸ್ಮಿಕವು, ಆಕಸ್ಮಾತ್ ವಿದ್ಯುತ್ ಲೋಪದಿಂದ ಆದುದೋ, ಉದ್ದೇಶ ಪೂರ್ವಕವೊ ? ಉದ್ದೇಶಪೂರ್ವಕವಾಗಿದ್ದರೆ ತಪ್ಪಿತಸ್ಥರು ಯಾರೆಂಬುದು ಜಗತ್ತಿಗೆ ತಿಳಿಯಬೇಕು. ರಾಷ್ಟ್ರೀಯ ಬಸವ ದಳದವರು ತಪ್ಪು ಮಾಡಿದ್ದರೆ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು. ಬಸವ ದಳದ ಹೆಸರಿಗೆ ಕಲಂಕ ತರಲು ಬೇರೆ ಯಾರಾದರೂ ಮಾಡಿದ್ದರೆ ಅವರನ್ನು ಪತ್ತೆ ಮಾಡಿ ಶಿಕ್ಷಿಸಲೇಬೇಕು.

2. ಸರಿಯಾದ ಬಂದೋಬಸ್ತು ಮಾಡದೆ, ವೇದಿಕೆ-ಸಭಾ ಮಂಟಪಕ್ಕೆ ರಕ್ಷಣೆ ಕೊಡದೆ ಉದಾಸೀನತೆಯಿಂದ ವರ್ತಿಸಿ, ದುಷ್ಕರ್ಮಿಗಳು ವೇದಿಕೆ ಸುಟ್ಟು, ಕಾರ್ಯಕ್ರಮ ರದ್ದಾಗುವಂತೆ ಮಾಡುವುದಕ್ಕೆ ಅಪ್ರತ್ಯಕ್ಷವಾಗಿ ಕಾರಣರಾಗಿರುವ ಆರಕ್ಷಕ ಸಿಬ್ಬಂದಿಯ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲೇಬೇಕು.

ಈ ದಿಶೆಯಲ್ಲಿ ತಾವು ಆಸಕ್ತಿ ವಹಿಸುವಿರಾಗಿ ನಂಬಿದ್ದೇವೆ,

ಶುಭ ಹಾರೈಕೆಯೊಡನೆ

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಬಸವನ ಮೂರ್ತಿಯೆ ಧ್ಯಾನಕ್ಕೆ ಮೂಲ
ಬಸವನ ಕೀರ್ತಿಯೆ ಜ್ಞಾನಕ್ಕೆ ಮೂಲ
ಬಸವಾ ಬಸವಾ ಎಂಬುದೇ ಭಕ್ತಿ ಕಾಣಾ
ಕಪಿಲ ಸಿದ್ಧ ಮಲ್ಲಿಕಾರ್ಜುನಾ ॥

—ಶ್ರೀ ಸಿದ್ಧರಾಮೇಶ್ವರರು

೩. ರಾಷ್ಟ್ರೀಯ ಬಸವ ದಳದ ಕಾರ್ಯಾಧ್ಯಕ್ಷರಿಂದ ಘಟನೆಯ ವರದಿ

ಪೂಜ್ಯ ಮಾತಾಜಿಯವರ ದಿವ್ಯ ಅಡಿದಾವರೆಗಳಲ್ಲಿ ಶರಣುಗಳು.

ದಿನಾಂಕ 1-6-95 ರಂದು ಬಸವ ಕಲ್ಯಾಣದಲ್ಲಿ ನಡೆದ ಘಟನೆಯ ವರದಿ ವಿವಿಧ ಪತ್ರಿಕೆಗಳಲ್ಲಿ ಬೇರೆ ಬೇರೆಯಾಗಿಯೇ ಪ್ರಕಟವಾಗಿದ್ದು ಅಲ್ಲಿ ನಡೆದಿರುವ ಪರಿಸ್ಥಿತಿಯ ಸತ್ಯವಾದ ವರದಿ ತಮ್ಮ ಗಮನಕ್ಕೆ ತರಬಯಸುತ್ತೇನೆ.

ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸಿ, ಸರ್ವರನ್ನು ಇಂಬಿಟ್ಟುಕೊಂಡು ಹೊಲೆಯನಿಂದ ಹಾರುವನವರೆಗೆ ಜಾತಿ ಭೇದವೆಣಿಸದೆ, ಮೋಚಿಯಿಂದ ಮಂತ್ರಿಯ ವರೆಗೆ ಯಾವುದೇ ರೀತಿಯ ವೃತ್ತಿ ಭೇದವನ್ನೆಣಿಸದೆ ಸರ್ವರಿಗೂ ಸಮಾನ ಸ್ಥಾನ-ಮಾನವನ್ನು ಕಲ್ಪಿಸಿಕೊಟ್ಟವರು ಬಸವಣ್ಣನವರು. ಅಷ್ಟೇ ಅಲ್ಲ ಈ ಭಿನ್ನ ಭೇದದ ಮೇಲು-ಕೀಳಿನ ಅಭೇದ್ಯ ಗೋಡೆಯನ್ನು ಅಂತರ್ಜಾತೀಯ ವಿವಾಹದ ಮೂಲಕ ಸ್ಫೋಟಿಸಿದರು. ಪಟ್ಟಭದ್ರ ಹಿತಾಸಕ್ತ ಕುತಂತ್ರಿಗಳಿಂದಾಗಿ ಅಸಂಖ್ಯಾತ ಶರಣರು ತಮ್ಮ ಪ್ರಾಣವನ್ನೆ ಬಲಿದಾನಗೈದು ಸರ್ವ ಸಮಾನತೆಯನ್ನು ಸಾಧಿಸಿ ತೋರಿಸಿ ಜಗತ್ತಿಗೆ ಮೇಲ್ಪಂಕ್ತಿಯನ್ನು ಹಾಕಿಕೊಟ್ಟ ಕ್ರಾಂತಿಕ್ಷೇತ್ರ ಬಸವ ಕಲ್ಯಾಣ.

ಇಂಥ ವೀರಭೂಮಿಯಲ್ಲಿ ಅಸಮಾನತೆಯ ಸಂಕೇತವಾದ, ಅಮಾನವೀಯ ಹೀನ ಕೃತ್ಯವಾದ, ತನ್ನಂತೆ ಇರುವ ವ್ಯಕ್ತಿಗಳ ಹೆಗಲ ಮೇಲೆ ಹೆಣಭಾರವಾಗಿ ಅಡ್ಡ ಪಲ್ಲಕ್ಕಿಗಳಲ್ಲಿ ಮೆರೆಯಬೇಕೆಂಬ ದುಸ್ಸಾಹಸಕ್ಕೆ ಪಂಚಾಚಾರ್ಯ ಸ್ವಾಮಿಗಳು ಕೈ ಹಾಕುತ್ತಿದ್ದಾರೆ ಎಂಬ ವಿಷಯ ತಿಳಿದು, ಕೂಡಲ ಸಂಗಮದಲ್ಲಿ ಎರಡು ವರ್ಷಗಳ ಹಿಂದೆ ಶರಣ ಮೇಳದಲ್ಲಿ ಹಾಕಿದ ಬಸವ ಭಾವಚಿತ್ರದ ಕಮಾನನ್ನು ಕಿತ್ತಿ ಹಾಕಿ ಅಡ್ಡ ಪಲ್ಲಕ್ಕಿಯಲ್ಲಿ ಮೆರೆದ ದುಷ್ಟತನದ ಹೀನ ಕೃತ್ಯದ ಚಿತ್ರಣ ಎದುರಿಗೆ ಬಂತು. ವೀರಶೈವ ಮಹಾಸಭಾ ಅಧಿವೇಶನದಲ್ಲಿ ಪೂಜ್ಯ ನಾಗನೂರು ಶ್ರೀಗಳಿಗೆ ತಮ್ಮ ಸಮಾನವಾಗಿ ಕೂತುಕೊಳ್ಳಲು ಅವಕಾಶ ಕೊಡದೆ ಕುರ್ಚಿ ನೂಕಿದ ಘಟನೆ, ಬಸವ ಕಲ್ಯಾಣ ತಾಲೂಕಿನ ಗೋರ್ಟ ಗ್ರಾಮದಲ್ಲಿ ಎರಡು ವರ್ಷಗಳ ಹಿಂದೆ "ಬಸವಣ್ಣ ಭಕ್ತ, ನಾವು ಗುರುಗಳು. ಗುರುಗಳಾಗುವ ಯೋಗ್ಯತೆ ನಮಗೆ ಬಿಟ್ಟರೆ ಯಾರಿಗೂ ಇಲ್ಲ." ಎಂಬ ಅಹಂಕಾರದ ಅಸಂಬದ್ಧ ಮಾತಿನಿಂದ ಬಸವ ಭಕ್ತರ ಕೋಪಕ್ಕೆ ತುತ್ತಾಗಿ ರಾತ್ರೋರಾತ್ರಿ ಪೋಲೀಸರ ಸರ್ಪಗಾವಲಿನಲ್ಲಿ ಪಲಾಯನ ಗೈದ ಘಟನೆಯ ನೆನಪು ಮರುಕಳಿಸಿತು. ಮತ್ತೆ ಅದೇ ಘಟನೆ ಬಸವ ಕಲ್ಯಾಣದಲ್ಲಿ ಪುನರಾವರ್ತಿತವಾಗಕೂಡದು ಎಂಬ ಉದ್ದೇಶದಿಂದ ದಿ. 27-5-95 ಸಾಯಂಕಾಲ 5-30 ಕ್ಕೆ

ರಾಷ್ಟ್ರೀಯ ಬಸವ ದಳ, ಬಸವ ಭಕ್ತರ ಹಾಗೂ ಸ್ವಾಗತ ಸಮಿತಿಯ ಕಾರ್ಯಾಧ್ಯಕ್ಷ ಡಾ॥ ಬೆಂಟೂರು ಅವರು ಬಸವ ಕಲ್ಯಾಣದ ಬಸವೇಶ್ವರ ದೇವಸ್ಥಾನದಲ್ಲಿ ಸಭೆ ಸೇರಿ ವಿವರವಾಗಿ ಚರ್ಚಿಸಿ ಕೆಳಕಂಡ ನಿಯಮಗಳಿಗನುಗುಣವಾಗಿ, ಷರತ್ತಿಗಳಿಗನುಸಾರವಾಗಿ ಕಾರ್ಯಕ್ರಮ ನಡೆಸುವದಾಗಿ ಸ್ವಾಗತ ಸಮಿತಿಯ ಕಾರ್ಯಾಧ್ಯಕ್ಷ ಡಾ॥ ಬೆಂಟೂರು ಅವರು ಒಪ್ಪಿದರು. ಈ ಷರತ್ತಿಗನುಗುಣವಾಗಿ ಕಾರ್ಯಕ್ರಮ ನಡೆಯದಿದ್ದರೆ ಕಾರ್ಯಕ್ರಮಕ್ಕೆ ಪ್ರತಿಭಟಿಸುವದಾಗಿ ಕಾರ್ಯಕರ್ತರ ಸಭೆ ಎಚ್ಚರಿಕೆ ನೀಡಿತು.

ಷರತ್ತುಗಳು

1] ಪಂಚಾಚಾರ್ಯರು ಅಡ್ಡ ಪಲ್ಲಕ್ಕಿಯಲ್ಲಿ ಕುಳಿತು ಸಾಗಬಾರದು. ಬಸವೇಶ್ವರ ದೇವಸ್ಥಾನದಿಂದ ಪರುಷ ಕಟ್ಟೆಯವರೆಗೆ ಪಾದಯಾತ್ರೆಯ ಮೂಲಕ ಹೋಗಬೇಕು. ಅಲ್ಲಿಂದ ಜೀಪಿನಲ್ಲಿ ಮೆರವಣಿಗೆ ತೆಗೆದುಕೊಳ್ಳಬಹುದು. ಮೆರವಣಿಗೆಯಲ್ಲಿ ಗುರು ಬಸವಣ್ಣನವರ ಭಾವಚಿತ್ರ ಅಲಂಕರಿಸಿ ಎಲ್ಲಕ್ಕೂ ಮುಂದಿಡಬೇಕು.

2] ಕಾರ್ಯಕ್ರಮದ ಪೂರ್ವದಲ್ಲಿ ಎರಡು ದಿವಸಗಳ ಕಾಲ ಷಟಸ್ಥಲ ಧ್ವಜಾರೋಹಣ ಮಾಡಬೇಕು.

3] ವೇದಿಕೆಯ ಮೇಲೆ ಯಾವ ಭೇದವಿಲ್ಲದೆ ಎಲ್ಲರಿಗೂ ಸಮಾನವಾದ ಆಸನಗಳ ಏರ್ಪಾಡಾಗಬೇಕು.

4] ಕಾರ್ಯಕ್ರಮದಲ್ಲಿ ಬಸವಣ್ಣನವರಿಗೆ ಅಗೌರವದ, ಅವರ ವ್ಯಕ್ತಿತ್ವಕ್ಕೆ ಕುಂದುಂಟು ಮಾಡುವ ಮಾತುಗಳನ್ನಾಡಕೂಡದು.

5] ವೇದಿಕೆಯ ಮೇಲೆ ಬಸವಣ್ಣನವರ ಭಾವಚಿತ್ರ ಅಲಂಕಾರ ಮಾಡಿಟ್ಟಿರಬೇಕು.

6] ಕಾರ್ಯಕ್ರಮಕ್ಕೆ ಭಾಲ್ಕಿ, ಭಾತಂಬ್ರಾ ಹುಲಸೂರು ಶ್ರೀಗಳನ್ನು ಆಮಂತ್ರಿಸಬೇಕು ಮತ್ತು ಸ್ವಾಮಿಗಳೆಲ್ಲರಿಗೂ ಸಮಾನ ಸ್ಥಾನ ಕೊಡಬೇಕು.

ಈ ಮೇಲಿನ ಷರತ್ತುಗಳ ಪಾಲನೆಯಲ್ಲಿ ಕಿಂಚಿತ್ ತಪ್ಪಿದ್ದೆ ಆದರೆ ಬಸವ ಭಕ್ತರು ಅಹಿಂಸಾತ್ಮಕವಾಗಿ ಪ್ರತಿಭಟಿಸುವುದಾಗಿ ನೀಡಲಾದ ಎಚ್ಚರಿಕೆಗೆ ಸ್ವಾಗತ ಸಮಿತಿಯ ಅಧ್ಯಕ್ಷ ಡಾ॥ ಬೆಂಟೂರು ಒಪ್ಪಿಕೊಂಡರು.

ರಾಷ್ಟ್ರೀಯ ಬಸವ ದಳದ ಸಾವಿರಾರು ಕಾರ್ಯಕರ್ತರು ದಿನಾಂಕ 1-6-95 ರಂದು ಬಸವ ಕಲ್ಯಾಣಕ್ಕೆ ಪಯಣಿಸಿದರು. ಕಾರ್ಯಕ್ರಮದ ಷರತ್ತುಗಳು ಪಾಲನೆಯಾಗುತ್ತಿವೆಯೋ ಇಲ್ಲವೋ ಎಂಬ ನಿರೀಕ್ಷಣೆಯಲ್ಲಿ ಮುಖಂಡರು ನಿರತರಾದರು.

ಕಾರ್ಯಕ್ರಮದ ಪಟ್ಟಿಯ ಪ್ರಕಾರ ದಿ. 1-6-95 ಬೆಳಿಗ್ಗೆ ಪೂಜ್ಯ ಭಾಲ್ಕಿ ಶ್ರೀಗಳಿಂದ ಷಟಸ್ಥಲ ಧ್ವಜಾರೋಹಣ ನಡೆಯಬೇಕಿತ್ತು. ಆದರೆ ಷಟಸ್ಥಲ ಧ್ವಜಾ-

ರೋಹಣವಾಗಲಿಲ್ಲ. ಪ್ರಾರಂಭದಲ್ಲಿಯೇ ಒಂದು ಷರತ್ತು ಕಳಚಿ ಬಿತ್ತು. ಮಧ್ಯಾಹ್ನ 2 ಗಂಟೆಗೆ ಮೆರವಣಿಗೆ ಪ್ರಾರಂಭವಾಗಬೇಕಿತ್ತು. ಆದರೆ ಬಸವ ಕಲ್ಯಾಣದ ಸಮೀಪ ಗ್ರಾಮವಾದ ತಡೋಳಾದಲ್ಲಿ ಬೀಡು ಬಿಟ್ಟಿದ್ದ ಪಂಚಾಚಾರ್ಯರು ಅಡ್ಡ ಪಲ್ಲಕ್ಕಿಯ ಹೊರತು ಕಲ್ಯಾಣಕ್ಕೆ ಬರುವುದಿಲ್ಲವೆಂದು ತಿಳಿಸಿದ್ದಾರೆಂಬ ಸುದ್ದಿ ಹರಡತೊಡಗಿತು. ಸ್ವಾಗತ ಸಮಿತಿಯವರು ಗಾಬರಿಗೊಂಡು ಓಡಾಡತೊಡಗಿದರು. ಕೊನೆಗೂ ಪೊಲೀಸ್‌ರ ಸರ್ಪಗಾವಲಿನಲ್ಲಿಯೇ ರಾತ್ರಿ 7-30 ಕ್ಕೆ ಇಬ್ಬರು ಪೀಠಾಧೀಶರು ಬಂದರು. ಬಸವೇಶ್ವರ ದೇವಸ್ಥಾನದಿಂದ ನಡೆದುಕೊಂಡು ಹೋಗಬೇಕಾಗಿದ್ದ ಅವರು ಜೀಪಿನಲ್ಲಿಯೇ ಏರಿದರು ಮೆರವಣಿಗೆ ಪ್ರಾರಂಭವಾಯಿತು. ಎರಡನೆಯ ಷರತ್ತು ಮುರಿದರೂ ಸಹ ಮೌನವಾಗಿ ಸಹಿಸಿಕೊಂಡೆವು. ವೇದಿಕೆಯ ಮೇಲೆ ಸಮಾನವಾಗಿ ಆಸನಗಳನ್ನು ಹಾಕಲಿಲ್ಲ. ಪಂಚಾಚಾರ್ಯರ ಆಸನಗಳನ್ನು ಒಂದು ಅಡಿ ಎತ್ತರಕ್ಕೆ ಹಾಕಿ ಉಳಿದವರ ಆಸನಗಳನ್ನು ಕೆಳಕ್ಕೆ ಹಾಕಲಾಗಿತ್ತು. ಇದು ಸರಿಯಲ್ಲ ಎಲ್ಲರಿಗೂ ಸಮಾನವಾಗಿ ಕುರ್ಚಿ ವ್ಯವಸ್ಥೆ ಮಾಡಿರಿ ಎಂದು ಸ್ವಾಗತ ಸಮಿತಿಯವರಿಗೂ ವಿನಂತಿಸಿದರೂ ಅವರು ಒಪ್ಪಲಿಲ್ಲ. ಆಗ ಮೆರವಣಿಗೆಯ ಮೂಲಕ ಬಸವೇಶ್ವರ ವೃತ್ತಕ್ಕೆ ಬಂದ ಕಾರ್ಯಕರ್ತರು "ಷರತ್ತು ಮುರಿದ ಪಂಚಾಚಾರ್ಯರಿಗೆ ಧಿಕ್ಕಾರ' ಸ್ವಾಗತ ಸಮಿತಿಯವರಿಗೆ ಧಿಕ್ಕಾರ, ಬಸವ ತತ್ತ್ವ ವಿರೋಧಿ ಪಂಚಾಚಾರ್ಯರಿಗೆ ಧಿಕ್ಕಾರ, ಸಮಾನತೆಯ ವಿರೋಧಿ ಪಂಚಾಚಾರ್ಯರಿಗೆ ಧಿಕ್ಕಾರ" ಎಂಬ ಘೋಷಣೆ ಕೂಗುತ್ತಾ ಅಹಿಂಸಾತ್ಮಕವಾಗಿ ಶಾಂತ ರೀತಿಯಿಂದ ಪ್ರತಿಭಟಿಸತೊಡಗಿದರು. ಆಗ ಪೋಲೀಸರು ನನ್ನನ್ನೂ ಸೇರಿಸಿ 33 ಜನರನ್ನು ಬಂಧಿಸಿ ಚಿಟಗುಪ್ಪ ಪೋಲೀಸ್ ಠಾಣೆಗೆ ಕರೆದುಕೊಂಡು ಹೋದರು. ಇನ್ನುಳಿದ ಕಾರ್ಯಕರ್ತರು ಪ್ರತಿಭಟಿಸುತ್ತಲೇ ಇದ್ದರಂತೆ. ಇದಕ್ಕಿದ್ದಂತೆಯೇ ಏಕಾಏಕಿಯಾಗಿ ಪೋಲೀಸರು ಲಾಠಿ ಚಾರ್ಜ್ ಮಾಡಿ ಅಲ್ಲಿ ಸೇರಿದ್ದ ಜನರನ್ನು ಚೆಲ್ಲಾಪಿಲ್ಲಿ ಮಾಡಿದರಂತೆ. ಪೋಲೀಸರು ಕಾರ್ಯಕರ್ತರನ್ನು ಮನಬಂದಂತೆ ಥಳಿಸಿದರಲ್ಲದೆ, ಅವಾಚ್ಯ ಶಬ್ದಗಳಿಂದ ಬೈದರಂತೆ, ಏಟು ತಿಂದ ಕಾರ್ಯಕರ್ತರು ಹಲವು ರೀತಿಯಲ್ಲಿ ಗಾಯಗೊಂಡರು. ಪೆಟ್ಟಿನಿಂದ ಒಬ್ಬರ ಹಲ್ಲು ಉದುರಿ ಹೋಗಿವೆ. ಹೆಣ್ಣುಮಕ್ಕಳಿಗೆ ಮತ್ತು ಪೂಜ್ಯ ಭಾಲ್ಕಿ-ಭಾತಂಬ್ರಾ ಸ್ವಾಮೀಜಿಯವರಿಗೂ ಅವಾಚ್ಯ ಶಬ್ದಗಳಿಂದ ಬೈದರಂತೆ. ಒಟ್ಟಾರೆ ಪೋಲೀಸರು ಕ್ರೂರವಾಗಿ ವರ್ತಿಸಿದರೆಂಬುದು ನಂತರ ತಿಳಿಯಿತು. ಬಂಧಿಸಿದ ಕಾರ್ಯಕರ್ತರನ್ನು ಬಿಡುಗಡೆ ಮಾಡುವಂತೆ ಒತ್ತಾಯಿಸಿ ಇಬ್ಬರು ಶ್ರೀಗಳೂ ಆಮರಣ ಉಪವಾಸ ಸತ್ಯಾಗ್ರಹ ಮಾಡುವದಾಗಿ ಘೋಷಿಸಿದರಂತೆ; ಊರಿನ ಮಧ್ಯದ ಬಸವೇಶ್ವರ ಚೌಕದಲ್ಲಿ ಸ್ವಾಮಿಗಳವರ ನಿರಶನ ನಡೆಯುತ್ತಿದ್ದಂತೆಯೇ ವಾತಾವರಣವು ಉದ್ವಿಗ್ನಗೊಳ್ಳ ತೊಡಗಿತಂತೆ. ನಮ್ಮನ್ನೆಲ್ಲಾ

ಬಂಧಿಸಿಕೊಂಡು ಹೋದ ಅರ್ಧ ಘಂಟೆಯ ನಂತರ ಪೆಂಡಾಲಿಗೆ ಬೆಂಕಿ ಹತ್ತಿದ ಘಟನೆ ನಡೆಯಿತು. ಇದಕ್ಕೂ ನಮಗೂ ಯಾವುದೇ ರೀತಿಯ ಸಂಬಂಧವಿಲ್ಲ. ಕಾರ್ಯ-ಕರ್ತರ ಬಂಧನ ಆದ ಮೇಲೆ ಈ ಘಟನೆ ನಡೆಯಿತು ಎನ್ನುವದು ಇಲ್ಲಿ ಗಮನಿಸಬೇಕಾದ ಅಂಶ. ಕೂಡಲೇ ಕಲಂ 144 ರ ಪ್ರಕಾರ ನಿಷೇಧಾಜ್ಞೆ ಜಾರಿಗೊಳಿಸಿ ಜೀಪಿನಲ್ಲಿ ಓಡಾಡಿ ಪೋಲೀಸರು ಪ್ರಚಾರ ಮಾಡಲಾರಂಭಿಸಿದರು. ಕೇವಲ ಪೋಲೀಸರು ಮತ್ತು ಬ್ಯಾಂಡಿನವರೊಂದಿಗೆ ಮೆರವಣಿಗೆಯಲ್ಲಿ (50 ಜನರು ಮಾತ್ರ) ಬರುತ್ತಿದ್ದ ಪಂಚಾಚಾರ್ಯರ ಮೆರವಣಿಗೆ ಗಾಂಧಿ ಚೌಕ ಎದುರುಗಡೆ ಬಂದಿತ್ತು. ಎಸ್. ಪಿ. ಯವರು ಸ್ವಾಮಿಗಳ ಬಳಿ ಹೋಗಿ "ನೀವು ಮೆರವಣಿಗೆ ಮುಂದುವರಿಸಬೇಡಿ, ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿದೆ" ಎಂದು ತಿಳಿಸಿದಾಗ ಆ ಇಬ್ಬರು ಪೀಠಾಧೀಶರು ಜೀಪಿನಿಂದ ಹಾರಿ ಓಡುತ್ತ ಹೋಗಿ ಕಾರಲ್ಲಿ ಕುಳಿತು ಪೋಲೀಸರ ರಕ್ಷಣೆಯಲ್ಲಿ ಬಸವ ಕಲ್ಯಾಣ ಬಿಟ್ಟು ಹೊರಟರು. ಪೋಲೀಸ್ ಅಧಿಕಾರಿಗಳ ವಿನಂತಿಯ ಮೇರೆಗೆ ಭಾಲ್ಕಿ-ಭಾತಂಬ್ರಾ ಶ್ರೀಗಳು ಆಮರಣ ಉಪವಾಸ ಹಿಂತೆಗೆದುಕೊಂಡರು.

ವೇದಿಕೆಯ ಬೆಂಕಿಗೂ ನಮಗೂ ಎಳ್ಳಷ್ಟೂ ಸಂಬಂಧವಿಲ್ಲ. ಬೆಳೆಯುತ್ತಿರುವ ಸಂಘಟನೆಯ ಹೆಸರನ್ನು ಕೆಡಿಸುವ ಏಕಮಾತ್ರ ಉದ್ದೇಶದಿಂದ ಬೆಂಕಿ ಹಚ್ಚಿದ ಆರೋಪವನ್ನು ನಮ್ಮ ಮೇಲೆ ಹಾಕುತ್ತಿದ್ದಾರೆ. ಪುನಃ ಕಾರ್ಯಕರ್ತರು ಒಗ್ಗೂಡಿದರು. ಎಲ್ಲ ಕಡೆ ಕಾರ್ಯಕರ್ತರು ಜಾಗೃತರಾದರು. ಪೋಲೀಸರ ದೌರ್ಜನ್ಯದ ವಿರುದ್ಧ ಪ್ರತಿಭಟಿಸಲು, ಬಂಧಿಸಿದ ಕಾರ್ಯಕರ್ತರನ್ನು ಬಿಡುಗಡೆ ಮಾಡುವಂತೆ ಒತ್ತಾಯಿ-ಸಲು ಎಲ್ಲ ಕಡೆ ಬಂದ್, ರಾಸ್ತಾ ರೋಕೊ ಚಳುವಳಿಗೆ ಕಾರ್ಯಕರ್ತರು ಸಿದ್ಧರಾದರು. ಇದನ್ನರಿತ ಪೋಲೀಸ್ ಅಧಿಕಾರಿಗಳು ದಿ. 2-6-95 ರಂದು ಚಿಟಗುಪ್ಪೆ ಪೋಲೀಸ್ ಠಾಣೆಗೆ ಬಂದು ಬೇಷರತ್ತಾಗಿ ನಮ್ಮನ್ನು ಬಿಡುಗಡೆ ಮಾಡಿದರು. ಹಲವಾರು ಕಡೆ ಧರ್ಮಗುರು ಬಸವಣ್ಣನವರಿಗೆ ಅವಮಾನ ಮಾಡಿದ ಅಟ್ಟಹಾಸ-ದಿಂದ ಬೀಗುತ್ತಿದ್ದ ಪಂಚಪೀಠಾಧೀಶರ ಅಹಂ ಅನ್ನು ಪ್ರತಿಭಟಿಸಿ ಅವರಿಗೆ ಬುದ್ಧಿ ಕಲಿಸಿದ್ದಕ್ಕಾಗಿ ಜನರಿಗೆ ಬಹಳ ಸಂತೋಷವಾಗಿದೆ. ರಾಷ್ಟ್ರೀಯ ಬಸವ ದಳದವ-ರನ್ನು ಜನರು ಅಭಿನಂದಿಸುತ್ತಿದ್ದಾರೆ.

ಗಣ ಪ್ರಮುಖ

ಬಸವಕುಮಾರ್ ಪಾಟೀಲ

ಪತ್ರಿಕಾ ಹೇಳಿಕೆ

೪. ಬಸವ ಕಲ್ಯಾಣ-ವಿಧ್ವಂಸಕ ಕೃತ್ಯಕ್ಕೆ ಬಸವ ದಳ ಕಾರಣವಲ್ಲ.

-ಬಸವಕುಮಾರ ಪಾಟೀಲ

ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರ ಬೀದರ ಜಿಲ್ಲೆಯ ಬಸವ ಕಲ್ಯಾಣದಲ್ಲಿ ಜೂನ್ ಒಂದನೆಯ ತಾರೀಖು ವೀರಶೈವ ಪಂಚಪೀಠಾಧೀಶರ ಕಾರ್ಯಕ್ರಮವು ನಡೆಯದೆ ರದ್ದಾದುದಕ್ಕೆ ರಾಷ್ಟ್ರೀಯ ಬಸವ ದಳ ಕಾರಣವಲ್ಲ.

ಸರಿಯಾಗಿ ವಿವರಗಳನ್ನು ತಿಳಿಯದ ಕೆಲವರು, ತಿಳಿದಿದ್ದರೂ ಸಹ ದುರುದ್ದೇಶದಿಂದ ರಾಷ್ಟ್ರೀಯ ಬಸವ ದಳದ ಹೆಸರು ಕೆಡಿಸಬೇಕೆಂಬ, ಮತ್ತೆ ಕೆಲವರು ಅಸಂಬದ್ಧ ಹೇಳಿಕೆ ಕೊಡುತ್ತಿದ್ದಾರೆ. ಬಸವ ಕಲ್ಯಾಣಕ್ಕೆ ಪಂಚಪೀಠಾಧೀಶರನ್ನು ಆಹ್ವಾನಿಸ-ಲಾಗುತ್ತಿದೆ ಎಂಬ ವಿಷಯ ತಿಳಿಯುತ್ತಲೇ ಬೀದರಿನ ರಾಷ್ಟ್ರೀಯ ಬಸವ ದಳ ಮತ್ತು ಇನ್ನಿತರ ಊರಿನ ಘಟಕಗಳವರು ಸಭೆ ಸೇರಿ ಚರ್ಚಿಸಿದರು. 1994ನೆಯ ಇಸವಿ ಜನವರಿ 10ರಂದು ಕೂಡಲ ಸಂಗಮಕ್ಕೆ ಆಗಮಿಸಿದ ಪಂಚಪೀಠಾಧೀಶರು ತಮ್ಮ ಅಡ್ಡಪಲ್ಲಕ್ಕಿ ಹಾಯುವುದಿಲ್ಲ ಎಂಬ ನೆಪ ಮಾಡಿ ಶರಣ ಮೇಳ ಉತ್ಸವ ಸಮಿತಿಯವರು ಕಟ್ಟಿಸಿದ್ದ ಬಸವ ಪಟ ಮತ್ತು ಸುಂದರ ಕಮಾನನ್ನು ಶಾಸಕ ಎಸ್. ಆರ್. ಕಾಶಪ್ಪನವರ ಮೂಲಕ ತಾವೇ ಪ್ರತ್ಯಕ್ಷ ಪಲ್ಲಕ್ಕಿಯಲ್ಲಿ ಕುಳಿತು ಕೆಡವಿಸಿದ್ದನ್ನು ಕುರಿತು ಚಿಂತನೆ ಮಾಡಿದರು. ಧರ್ಮಗುರು ಬಸವಣ್ಣನವರಿಗೆ ಅವಮಾನ ಮಾಡಿದ್ದು ಒಂದು ಘಟನೆಯಾದರೆ ವೀರಶೈವ ಮಹಾಸಭಾದ ಬೆಳಗಾಂ ಅಧಿವೇಶನದಲ್ಲಿ ವಯೋವೃದ್ಧ ಶತಾಯುಷಿ ಶ್ರೀ ನಿ.ಪ್ರ. ನಾಗನೂರು ಸ್ವಾಮಿಗಳಿಗೆ ತಮ್ಮ ಸಮಾನಕ್ಕೆ ಕುರ್ಚಿ ನೀಡದೆ ಅವಮಾನ ಮಾಡಿದ್ದು ಮತ್ತೊಂದು ಪ್ರಸಂಗವನ್ನು ಚರ್ಚಿಸಿದರು. ವಿಶ್ವಗುರು ಬಸವಣ್ಣನವರ ಕ್ರಾಂತಿಭೂಮಿ, ಕಾರ್ಯಕ್ಷೇತ್ರ ಬಸವ ಕಲ್ಯಾಣದಲ್ಲಿ ಇಂಥ ಘಟನೆಗಳ ಪುನರಾವರ್ತನೆ ಆಗಬಾರದೆಂದು ರಾಷ್ಟ್ರೀಯ ಬಸವ ದಳದ ಕಾರ್ಯಕರ್ತರು ಬಸವ ಕಲ್ಯಾಣದ ಸ್ವಾಗತ ಸಮಿತಿಯವರೊಡನೆ ಚರ್ಚಿಸಲು ನಿರ್ಧರಿಸಿದರು. ದಿ. 27-4-1995 ರಂದು ಶ್ರೀ ಬಸವೇಶ್ವರ ದೇವಾಲಯದಲ್ಲಿ ಸಭೆ ಸೇರಿ ಉಭಯಂತರೂ ಚರ್ಚಿಸಿದರು. ಆಗ ರಾಷ್ಟ್ರೀಯ ಬಸವ ದಳದವರು ಪಂಚಪೀಠಾಧೀಶರ ಉತ್ಸವ ಮಾಡುವವರಿಗೆ ಕೆಲವು ಷರತ್ತುಗಳನ್ನು ಹಾಕಿದರು.

ಅವೆಂದರೆ, ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರ, ಪ್ರಪ್ರಥಮ ವರ್ಣಾಂತರ ವಿವಾಹ ನಡೆದ ಕ್ರಾಂತಿಭೂಮಿ ಬಸವ ಕಲ್ಯಾಣದಲ್ಲಿ ಪಂಚಪೀಠಾಧೀಶರು,

೧. ಅಡ್ಡಪಲ್ಲಕ್ಕಿಯಲ್ಲಿ ಸಾಗಬಾರದು; ಜೀವಂತವಿರುವ ಮನುಷ್ಯ ಇನ್ನೊಬ್ಬರ ಹೆಗಲನ್ನೇರಿ ಮೆರೆಯುವುದು ಅಸಮಾನತೆಯ ಪ್ರತೀಕ. ಅವರು ಶ್ರೀ ಬಸವೇಶ್ವರ ದೇವಾಲಯದಲ್ಲಿ ಪೂಜೆ ಸಲ್ಲಿಸಿ, ಅಲ್ಲಿಂದ ಪರುಷ ಕಟ್ಟೆಯವರೆಗೆ ಪಾದಯಾತ್ರೆಯಲ್ಲಿ ಸಾಗಿ, ಅಲ್ಲಿಂದ ಜೀಪಿನಲ್ಲಿ ಮೆರವಣಿಗೆ ಮೂಲಕ ಹೋಗಬೇಕು. ಮೆರವಣಿಗೆಯಲ್ಲಿ ಕ್ಷೇತ್ರಾಧಿಪತಿ ಶ್ರೀ ಬಸವಣ್ಣನವರ ಭಾವಚಿತ್ರವನ್ನು ಅಲಂಕರಿಸಿ ಎಲ್ಲಕ್ಕೂ ಮುಂದೆ ಇಟ್ಟಿರಬೇಕು.

೨. ಕಾರ್ಯಕ್ರಮದ ಎರಡೂ ದಿವಸ ಸಭಾರಂಭಕ್ಕೆ ಮೊದಲು ಷಟಸ್ಥಲ ಧ್ವಜಾರೋಹಣ ಮಾಡಬೇಕು.

೩. ಬೀದರ ಜಿಲ್ಲೆಯ ಪ್ರಮುಖ ಸ್ವಾಮಿಗಳಾದ ಭಾಲ್ಕಿಯ ಪಟ್ಟದ್ದೇವರು, ಹುಲಸೂರಿನ ಸ್ವಾಮಿಗಳು, ಭಾತಂಬ್ರಾ ಮುಕ್ತಿಮಂದಿರದ ಸ್ವಾಮಿಗಳನ್ನು ಆಹ್ವಾನಿಸಬೇಕು.

೪. ವೇದಿಕೆಯ ಮೇಲೆ ಕ್ಷೇತ್ರಾಧಿಪತಿ ಬಸವಣ್ಣನವರ ಭಾವಚಿತ್ರ ಅಲಂಕರಿಸಿ ಇಡಬೇಕು.

೫. ವೇದಿಕೆಯ ಮೇಲೆ ಯಾವ ಭೇದ ಮಾಡದೆ ಎಲ್ಲ ಮಠಾಧೀಶರಿಗೂ ಸಮಾನ ಆಸನಗಳನ್ನು ಕೊಡಬೇಕು.

೬. ಮಾತಿನಿಂದಾಗಲೀ, ಕೃತಿಯಿಂದಾಗಲೀ ಕಾರ್ಯಕ್ರಮದ ಮಧ್ಯೆ ಕ್ಷೇತ್ರಾಧಿಪತಿ ಬಸವಣ್ಣನವರನ್ನು ಅಗೌರವಿಸುವ ಕೆಲಸ ಮಾಡಬಾರದು.

ಈ ಷರತ್ತುಗಳನ್ನು ಒಪ್ಪಿ ಪಾಲಿಸಿದರೆ ರಾಷ್ಟ್ರೀಯ ಬಸವ ದಳದವರು ಸಂಪೂರ್ಣವಾಗಿ ಸಹಕರಿಸಿ ದುಡಿಯಬೇಕು. ಉಲ್ಲಂಘನೆಯಾದರೆ ಅಹಿಂಸಾತ್ಮಕವಾಗಿ ಪ್ರತಿಭಟಿಸಬೇಕು. ಇದು ಸ್ವಾಗತ ಸಮಿತಿ ಮತ್ತು ರಾಷ್ಟ್ರೀಯ ಬಸವ ದಳದ ಬೀದರ ಜಿಲ್ಲೆಯ ಪ್ರಮುಖ ಪದಾಧಿಕಾರಿಗಳ ಮಧ್ಯೆ ಆದ ಒಪ್ಪಂದ.

ಪಂಚಪೀಠಾಧೀಶರು ಪಾದಯಾತ್ರೆ ಮಾಡದಿದ್ದಾಗಲೂ ತಾಳ್ಮೆ ವಹಿಸಿದ ಕಾರ್ಯಕರ್ತರು ಪಂಚಪೀಠದವರು ಒಂದು ಅಡಿ ಎತ್ತರದ ಕುರ್ಚಿ ಹಾಕಿಸಿಕೊಂಡು, ಇನ್ನಿತರ ಜಂಗಮ ಸ್ವಾಮಿಗಳಿಗೆ ಒಂದು ಅಡಿ ಕಮ್ಮಿ ಎತ್ತರದ ಕುರ್ಚಿ ಹಾಕಿಸಿದ್ದಲ್ಲದೆ ನಮ್ಮ ಸಮಕ್ಕೆ ಹೇಗೆ ಅವರಿಗೆ ಕೊಡಲು ಸಾಧ್ಯ ?! ಎಂದಾಗ ಘೋಷಣೆ ಕೂಗಲು ರಾಷ್ಟ್ರೀಯ ಬಸವ ದಳದವರು ಆರಂಭಿಸಿದರು ಎಂಬುದು ಗಮನಾರ್ಹ.

ದಿ : 1-6-1995 ರಂದು ಬೆಳಿಗ್ಗೆ 8 ಘಂಟೆಗೆ ಷಟಸ್ಥಲ ಧ್ವಜಾರೋಹಣದೊಡನೆ ಆರಂಭವಾಗಬೇಕಿದ್ದ ಸಮ್ಮೇಳನದಲ್ಲಿ ಮೊದಲೇ ಸ್ವಾಗತ ಸಮಿತಿಯವರಿಗೆ ಹಾಕಿದ ಷರತ್ತುಗಳು ಪೂರ್ಣವಾದರೆ ಭಾಗವಹಿಸಿ ಸಹಕರಿಸಲು, ಒಂದು ವೇಳೆ ಸ್ವಾಗತ ಸಮಿತಿಯವರಿಗೆ ಹಾಕಿದ ಷರತ್ತುಗಳು ಪೂರೈಸದಿದ್ದರೆ ಅಹಿಂಸಾತ್ಮಕ ಪ್ರದರ್ಶನ ನಡೆಸಿ ಪ್ರತಿಭಟನೆ ಸೂಚಿಸಲು ಸಹಸ್ರಾರು ಬಸವ ಭಕ್ತರು, ರಾಷ್ಟ್ರೀಯ ಬಸವ ದಳದ ಕಾರ್ಯಕರ್ತರು ಬೀದರ ಜಿಲ್ಲೆಯ ಎಲ್ಲೆಡೆಗಳಿಂದ, ಹೈದಾರಾಬಾದ, ಜಹಿರಾಬಾದ, ಕುಸನೂರು ಮುಂತಾದ ಆಂಧ್ರದ ಸ್ಥಳಗಳಿಂದ ಮಹಾರಾಷ್ಟ್ರದ ಉದಗೀರ, ಲಾತೂರುಗಳಿಂದೆಲ್ಲ ಸಹಸ್ರಾರು ಸಂಖ್ಯೆಯಲ್ಲಿ ಸಮಾವೇಶವಾಗಿದ್ದರು. ಧ್ವಜಾರೋಹಣಕ್ಕೆ ನಿಗದಿತವಾದ ಸಮಯಕ್ಕೆ ಪಂಚಪೀಠಾಧೀಶರು ಬರಲೇ ಇಲ್ಲ. ಮಧ್ಯಾಹ್ನ 2 ಘಂಟೆಗೆ ಮೆರವಣಿಗೆಗೆ ಸಿದ್ಧತೆ ನಡೆದಿತ್ತು. ಆಗಲೂ ಬರಲಿಲ್ಲ. ಅಡ್ಡಪಲ್ಲಕ್ಕಿಯಲ್ಲಿ ಕರೆತಂದರೆ ಮಾತ್ರ ಆಗಮಿಸುವರು. ಆದಕ್ಕೆ ಪುರಪ್ರವೇಶ ಮಾಡಲು ನಿರಾಕರಿಸುತ್ತಿರುವರು ಎಂದು ವದಂತಿ ಹಬ್ಬುತ್ತಿತ್ತು. ಆಗಮಿಸಲಿರುವ ಪಂಚಪೀಠದ ಸ್ವಾಮಿಗಳಿಗೆ ಉಳಿದವರಿಗಿಂತ ಒಂದು ಅಡಿ ಎತ್ತರದಲ್ಲಿ ಕುರ್ಚಿಗಳನ್ನು ಹಾಕಿ, ಬೀದರ ಜಿಲ್ಲೆಯ ಸ್ವಾಮಿಗಳಿಗೆ ಸಣ್ಣ ಕುರ್ಚಿಗಳನ್ನು ಒಂದು ಅಡಿ ಕೆಳಗೆ ಇಟ್ಟುದು ಸೇವಾಕಾರ್ಯ ನಿರತರಾಗಿದ್ದ ಕಾರ್ಯಕರ್ತರನ್ನು ಕೆರಳಿಸಿತು. ತಕ್ಷಣವೇ ಸ್ವಾಗತ ಸಮಿತಿಯವರನ್ನು ಕಂಡು ಚರ್ಚಿಸಲಾಯಿತು. ಅವರು ಒಪ್ಪಿದರೂ ಪೀಠಾಧೀಶರು ಒಪ್ಪದೆ, "ನಮ್ಮ ಸಮಾನಕ್ಕೆ ಬೇರೆ ಸ್ವಾಮಿಗಳನ್ನು ಕೂರಿಸಲು ಆದೀತೆ ?" ಎಂಬ ಮಾತು ರಾಷ್ಟ್ರೀಯ ಬಸವ ದಳದವರನ್ನು ನೋಯಿಸಿತು ಮತ್ತು ಸ್ವಾಗತ ಸಮಿತಿಯವರನ್ನೂ ಪೇಚಿಗೆ ಈಡುಮಾಡಿತು.

ಭಾರತ ದೇಶದಲ್ಲಿ ಸಮಾನತೆಯ ಕ್ರಾಂತಿಕಹಳೆ ಮೊಟ್ಟಮೊದಲು ಮೊಳಗಿದ ಬಸವ ಕಲ್ಯಾಣದಲ್ಲಿ ಅಡ್ಡಪಲ್ಲಕ್ಕಿ ನಡೆಯಬಾರದು ಮತ್ತು ಎಲ್ಲ ಜಂಗಮರಿಗೂ ಸಮಾನ ಸ್ಥಾನ ಸಿಗಬೇಕೆಂಬ ಮುಖ್ಯ ಷರತ್ತು ಉಲ್ಲಂಘನೆಯಾಗುವ ಸೂಚನೆ ಕಂಡು ಕಾರ್ಯಕರ್ತರು ಧಿಕ್ಕಾರ ಘೋಷಣೆ ಕೂಗತೊಡಗಿದರು. ಬಸವ ಕಲ್ಯಾಣದ ಸಮೀಪದ ತಡೋಳದಲ್ಲಿ ಬೀಡುಬಿಟ್ಟಿದ್ದ ಪೀಠಾಧೀಶರು ರಾತ್ರಿ ಏಳೂವರೆ ಗಂಟೆಗೆ ಆಗಮಿಸಿದರು. ತಕ್ಷಣ ಮೆರವಣಿಗೆಗಾಗಿ ಜೀಪಿನಲ್ಲಿ ಹತ್ತಿದರು. ಎಲ್ಲ ಸ್ವಾಮಿಗಳಿಗೂ ಸಮಾನ ಆಸನ ಇರಲೇಬೇಕೆಂಬ ಬೇಡಿಕೆಯ ಬಗ್ಗೆ ಸ್ವಾಗತ ಸಮಿತಿಯವರು ಎಷ್ಟು ಮನವೊಲಿಸಿದರೂ ಸ್ವಾಮಿಗಳು ಕೇಳದಾದಾಗ ರಾಷ್ಟ್ರೀಯ ಬಸವ ದಳದವರು ದಿಕ್ಕಾರ ಘೋಷಣೆ ಕೂಗತೊಡಗಿದರು. ಜೀಪಿನಲ್ಲಿ ಅವರು ಮೆರವಣಿಗೆ ಆರಂಭಿಸುತ್ತಲೇ ಬಸವ ದಳದವರು ಪ್ರತ್ಯೇಕವಾಗಿ ಪಥ ಸಂಚಲನ ಮಾಡುತ್ತ ಬಸವೇಶ್ವರ

ಚೌಕದಲ್ಲಿ ಪ್ರದರ್ಶನ ನಡೆಸಿದರು. ಇವರನ್ನು ಚದುರಿಸಲು ಪೋಲೀಸರು ವಿನಾಕಾರಣ ಲಾಠಿ ಪ್ರಹಾರ ಮಾಡಿದಾಗ ವಾತಾವರಣ ಕದಡಿತು. ಪ್ರಮುಖ ಕಾರ್ಯಕರ್ತರನ್ನು ಬಂಧಿಸಿ ವ್ಯಾನಿನಲ್ಲಿ ಕುಳ್ಳಿರಿಸಿಕೊಂಡು ದೂರದ ಠಾಣೆಗಳಿಗೆ ಕರೆದೊಯ್ಯಲಾಯಿತು. ಏನೊಂದೂ ತೊಂದರೆಯನ್ನೂ ಮಾಡದೆ ಅಹಿಂಸಾತ್ಮಕ ಪ್ರತಿಭಟನೆ ಮಾಡುತ್ತಿದ್ದ ಪ್ರಮುಖ ಕಾರ್ಯಕರ್ತರನ್ನು ಬಂಧಿಸುತ್ತಲೇ ಭಾಲ್ಕಿಯ ಹಿರೇಮಠದ ಶ್ರೀ ಬಸವಲಿಂಗಪಟ್ಟದ್ದೇವರು ಮತ್ತು ಭಾತಂಬ್ರಾಸ್ವಾಮಿಗಳು ತಾವು ಧರಣಿ ಕುಳಿತರು. ನಿರಪರಾಧಿ ಶರಣರನ್ನು ಬಂಧಿಸಿ ಒಯ್ದುದ್ದನ್ನು ಪ್ರತಿಭಟಿಸಿ, ತಮ್ಮನ್ನೂ ಬಂಧಿಸಬೇಕೆಂದು ಶ್ರೀಗಳ ಜೊತೆ ನೂರಾರು ಶರಣ–ಶರಣೆಯರು ಸತ್ಯಾಗ್ರಹ ಆರಂಭಿಸಿದರು.

ವಾತಾವರಣ ಉದ್ವಿಗ್ನಗೊಳ್ಳುತ್ತಿರುವುದನ್ನು ಕಂಡು ಸ್ವತಃ ಪೋಲೀಸ್ ವರಿಷ್ಠಾಧಿಕಾರಿಗಳೇ ಮೆರವಣಿಗೆಯಲ್ಲಿದ್ದ ಪಂಚಪೀಠಾಧೀಶರಲ್ಲಿ ಇಬ್ಬರು ಸ್ವಾಮಿಗಳನ್ನು ವಿನಂತಿಸಿಕೊಂಡು ವಾಹನಗಳಲ್ಲಿ ಕೂರಿಸಿಕೊಂಡು ಕರೆದೊಯ್ದರು. ಪೋಲೀಸರು ಲಾಠೀ ಪ್ರಹಾರದ ಮೂಲಕ ಜನರನ್ನು ಚದುರಿಸಿದರು. ಪರಿಸ್ಥಿತಿಯ ಉದ್ವಿಗ್ನತೆಯನ್ನು ಗಮನಿಸಿ 144 ನೆಯ ಕಲಮಿನ ಪ್ರಕಾರ ಪೋಲೀಸ್ ವರಿಷ್ಠಾಧಿಕಾರಿಗಳು ನಿಷೇಧಾಜ್ಞೆ ವಿಧಿಸಿ ಕಾರ್ಯಕ್ರಮವನ್ನು ರದ್ದು ಮಾಡಿದರು. ಇಂಥ ವಾತಾವರಣದಲ್ಲಿ ವೇದಿಕೆಗೆ ಯಾರೋ ಅಗ್ನಿ ಸ್ಪರ್ಶ ಮಾಡಿದ್ದಾರೆ. ವೇದಿಕೆಗೆ ಬೆಂಕಿ ಹತ್ತಿದಾಗ ರಾಷ್ಟ್ರೀಯ ಬಸವ ದಳದ ಪ್ರಮುಖ ಕಾರ್ಯಕರ್ತರು ಪೋಲೀಸರ ಬಂಧನದಲ್ಲಿದ್ದರೆಂಬುದು, ಉಳಿದ ಕಾರ್ಯಕರ್ತರು ಭಾಲ್ಕಿ ಮತ್ತು ಭಾತಂಬ್ರಾ ಶ್ರೀಗಳ ನೇತೃತ್ವದಲ್ಲಿ ಧರಣಿ ಸತ್ಯಾಗ್ರಹ ಮಾಡುತ್ತಿದ್ದರೆಂಬುದು ಎಲ್ಲರಿಗೂ ತಿಳಿದ ಸಂಗತಿ. ಹೀಗಾಗಿ ಯಾರೋ ದುಷ್ಕರ್ಮಿಗಳು ಮಾಡಿದ ಕೃತ್ಯವನ್ನು ರಾಷ್ಟ್ರೀಯ ಬಸವ ದಳದವರ ತಲೆಗೆ ಕಟ್ಟುವುದು ದುರುದ್ದೇಶದಿಂದ ಆಡುವ ಮಾತೇ ಸರಿ. ಇಲ್ಲವೇ ನಡೆದ ವಿವರ ತಿಳಿಯದವರು ಆಡುವ ನುಡಿಗಳು. ಇದನ್ನು ನಾವು ತೀವ್ರವಾಗಿ ಪ್ರತಿಭಟಿಸುತ್ತೇವಲ್ಲದೇ ನಿಜವನ್ನರಿಯದೇ ಆರೋಪಿಸಿದವರ ಬಗ್ಗೆ ಮಾನನಷ್ಟ ಮೊಕದ್ದಮೆ ಹೂಡಲಿದ್ದೇವೆ. ಏಕೆಂದರೆ ಈ ಆರೋಪವು ರಾಷ್ಟ್ರೀಯ ಬಸವ ದಳದ ವರ್ಚಸ್ಸಿಗೆ ಧಕ್ಕೆ ತರುವ ದುರುದ್ದೇಶದಿಂದ ಕೂಡಿದೆ. ಅನ್ಯಾಯವೆಂದು ಅಸತ್ಯವೆಂದು ಕಂಡುದನ್ನು ಪ್ರತಿಭಟಿಸುವ ಹಕ್ಕು ಸಂವಿಧಾನಾತ್ಮಕವಾಗಿದೆ, ಅಹಿಂಸಾತ್ಮಕವಾಗಿ ಘೋಷಣೆ ಕೂಗಿ ಪ್ರತಿಭಟಿಸುತ್ತಿದ್ದ ಕಾರ್ಯಕರ್ತರನ್ನು ಪೋಲೀಸರು ಬಂಧಿಸಿ ಕೊಂಡೊಯ್ದು ಎಷ್ಟೋ ಸಮಯದ ಬಳಿಕ ವೇದಿಕೆಗೆ ಬೆಂಕಿ ಹತ್ತಿದೆ ಎಂದಾಗ ಇದಕ್ಕೆ ರಾಷ್ಟ್ರೀಯ ಬಸವ ದಳದವರನ್ನು ಹೊಣೆ ಮಾಡುವುದು ಯಾವ ನ್ಯಾಯ ?

ಬೆಂಗಳೂರು–ವೀರಶೈವರ ಹೇಳಿಕೆ ದುರುದ್ದೇಶಪೂರಿತ–ಖಂಡನಾರ್ಹ

ಬೆಂಗಳೂರಿನಲ್ಲಿ ಜೂನ್ 5 ರಂದು ಕರೆದ ಪತ್ರಿಕಾ ಗೋಷ್ಠಿಯಲ್ಲಿ ಕೆಲವು ವೀರಶೈವ ಸಂಘ ಸಂಸ್ಥೆಗಳವರ ಪರವಾಗಿ ಬಿ. ಎಸ್. ಶಿವಣ್ಣ ಎಂಬುವವರು ಹೇಳಿಕೆ ನೀಡಿ ನಾವು ಅಂದರೆ ರಾಷ್ಟ್ರೀಯ ಬಸವ ದಳದವರು ಅವಮಾನವೀಯ ಕೃತ್ಯ ಮಾಡಿದ್ದೇವೆ ಎಂದಿದ್ದಾರೆ. ಅದು ಅವಮಾನವೀಯವಲ್ಲ, ಸಮಾನತೆಯ ಬೇಡಿಕೆ ಮುಂದಿಟ್ಟು ಮಾಡಿರುವ ಚಳುವಳಿ. ಜೀವಂತ ಮಾನವರು ಎಷ್ಟೇ ದೊಡ್ಡವರಿರಲಿ ಇನ್ನೊಬ್ಬರ ಹೆಗಲಿನ ಮೇಲೆ ಪಲ್ಲಕ್ಕಿಯನ್ನೇರಿ ಹೋಗುವ ಅಪೇಕ್ಷೆ ಏಕೆ ?. ಮೆರವಣಿಗೆ ಮಾಡಿಕೊಳ್ಳಲು ಜೀಪು, ಕಾರು ಮುಂತಾದ ವಾಹನಗಳಿಲ್ಲವೆ ?

ಅಖಿಲ ಭಾರತ ವೀರಶೈವ ಮಹಾಸಭಾದ ಉಪಾಧ್ಯಕ್ಷ ಆರ್. ಎಂ. ಬಿ. ಆರಾಧ್ಯರೂ ಈ ಹೇಳಿಕೆಯಲ್ಲಿ ಪಾಲುಗಾರರಾಗಿರುವುದು ವಿಷಾದನೀಯ. 1994 ರ ಜನವರಿ 10 ರಂದು ಹಾಡುಹಗಲಿನಲ್ಲಿಯೇ ಪಂಚಪೀಠಾಧೀಶರು ಪಲ್ಲಕ್ಕಿಯಲ್ಲಿ ಕುಳಿತು, ಶರಣ ಮೇಳ ಉತ್ಸವ ಸಮಿತಿಯವರು ಪ್ರತಿವರ್ಷದಂತೆ ಸುಂದರ ಕಮಾನೊಂದನ್ನು ಗುರು ಬಸವಣ್ಣನವರ ಭಾವಚಿತ್ರ ಸಹಿತವಾಗಿ ಕಟ್ಟಿಸಿದಾಗ, ಶಾಸಕ ಎಸ್. ಆರ್. ಕಾಶಪ್ಪನವರ ಮೂಲಕ ಸಹಸ್ರಾರು ಜನರ ಮುಂದೆ ಕೆಡವಿಸಿದಾಗ ಆ ಸ್ವಾಮಿಗಳ, ಶಾಸಕರ, ಉದ್ಧಟತನ ಖಂಡಿಸದ ಈ ಮಹಾಸಭೆಗೆ ಮಾತನಾಡುವ ನೈತಿಕ ಹಕ್ಕು ಎಲ್ಲಿದೆ ? ವೀರಶೈವ ಮಹಾಸಭಾ ಇರುವುದು ಇಡೀ ಸಮಾಜದ ಹಿತವನ್ನು ಕಾಯಲಿಕ್ಕೋ ಅಥವಾ ಪಂಚಪೀಠಾಧೀಶರ ಕೆಳಮಟ್ಟದ ಇಂಥ ಕೃತ್ಯಗಳನ್ನು ಸಮರ್ಥಿಸಿಕೊಳ್ಳಲಿಕ್ಕೊ ?

ವೀರಶೈವ ಧರ್ಮದ ಹೆಸರಿನಲ್ಲಿ ಬಸವ ದಳ ಸಮಾಜ ವಿರೋಧಿ ಕೆಲಸ ಮಾಡುತ್ತಿದೆ ಎಂಬ ಈ ವೀರಶೈವ ಸಂಘ ಸಂಸ್ಥೆಗಳ ಆರೋಪ ಖಂಡನೀಯ. ವೀರಶೈವ ಪದವನ್ನೇ ಒಳಸದಿರುವ ನಾವು ಆ ಧರ್ಮದ ಹೆಸರನ್ನೇಕೆ ದುರ್ಬಳಕೆ ಮಾಡಹೋಗುತ್ತೇವೆ. "ಅನೇಕ ಮುಗ್ಧ ಜನರನ್ನು ನಂಬಿಸಿ ಬಸವಣ್ಣನವರ ಹೆಸರಿನಲ್ಲಿ ಹಣ ಸಂಪಾದಿಸುವುದೇ ಇವರ ಉದ್ದೇಶ" ಎಂಬ ಗುರುತರ ಆರೋಪವನ್ನು ಈ ಹೇಳಿಕೆ ನೀಡಿದವರು ಮಾಡಿದ್ದಾರೆ. ರಾಷ್ಟ್ರೀಯ ಬಸವ ದಳಗಳು ಎಲ್ಲೂ ಹಣ ಸಂಗ್ರಹ ಮಾಡಿಲ್ಲ, ಮಾಡುತ್ತಿಲ್ಲ. ಚಿತ್ರದುರ್ಗ, ಗಂಗಾವತಿ, ಬೀದರ ಮುಂತಾದ ಕಡೆಗಳಲ್ಲಿ ಸಾಮೂಹಿಕ ಪ್ರಾರ್ಥನಾ ಮಂದಿರ, ಬಸವ ಮಂಟಪ ಕಟ್ಟಿ ಎಲ್ಲ ಜಾತಿ ಮತ ಪಂಥದವರನ್ನೂ ಬರಮಾಡಿಕೊಳ್ಳುತ್ತ, ನಾಡಿನ ಜನರ ಪ್ರಶಂಸೆಗೆ ಪಾತ್ರವಾಗಿವೆ. ಧರ್ಮಗ್ರಂಥ ಪ್ರಕಟಣೆಯ ಕಾರ್ಯವನ್ನಂತೂ ಇನ್ನೂ ಆರಂಭಿಸಿಯೇ ಇಲ್ಲ. ಸಾಮಾಜಿಕ, ವೈಚಾರಿಕ ಜಾಗೃತಿಯ ಕಾರ್ಯ ಹಮ್ಮಿಕೊಂಡ ರಾಷ್ಟ್ರೀಯ ಬಸವ

ದಳಗಳು ಅಡ್ಡಪಲ್ಲಕ್ಕಿ ನಿಷೇಧ, ಮಧ್ಯಪಾನ ನಿರೋಧ, ಅಸಮಾನತೆಯ ವಿರೋಧ, ದೇವದಾಸಿ ಪದ್ಧತಿಯ ನಿರ್ಮೂಲನ, ಸಾಹಿತ್ಯ ವಿಕೃತಿ ತಡೆ ಮುಂತಾದ ವಿಧಾಯಕ ಕಾರ್ಯಕ್ರಮ ಹಮ್ಮಿಕೊಂಡು ಜನಮನ್ನಣೆ ಗಳಿಸುತ್ತಿವೆ. ವ್ಯಾಪಕವಾಗಿ ಬೆಳೆಯುತ್ತಿರುವ ಶಿಸ್ತು ಬದ್ಧ ಸಂಘಟನೆಯಾದ ರಾಷ್ಟ್ರೀಯ ಬಸವ ದಳಕ್ಕೆ ಕಳಂಕ ತರಲೆಂದೇ ಅಗ್ನಿ ಸ್ಪರ್ಶಕ್ಕೆ ರಾಷ್ಟ್ರೀಯ ಬಸವ ದಳದವರೇ ಕಾರಣ ಎಂದು ಆರೋಪಿಸುವುದು ಕುಚೋದ್ಯತನದಿಂದ ಕೂಡಿದ ಮಿಥ್ಯಾರೋಪವಾಗಿದೆ.

ನಾವು ಶಾಂತಿಯುತ ಪ್ರತಿಭಟನೆ ನಡೆಸುವಾಗಲೇ ಒಮ್ಮೆ ಪೋಲಿಸರಿಂದ ಲಾಠಿ ಚಾರ್ಜ ಆಯಿತು, ನಂತರ ನಮ್ಮ ಬಂಧನವಾಗಿ ಪ್ರಮುಖ ಕಾರ್ಯಕರ್ತರನ್ನು ಬೇರೆ ಬೇರೆ ಪೋಲೀಸ್ ಠಾಣೆಗಳಿಗೆ ಒಯ್ದರು. ನಮ್ಮನ್ನು ಚಿಟಗುಪ್ಪಾ ಎಂಬಲ್ಲಿಗೆ ಒಯ್ದರು. ವೇದಿಕೆಗೆ ಬೆಂಕಿ ಹತ್ತಿದ ಸುದ್ದಿ ನಮಗೆ ತಿಳಿದುದೇ ಮರುದಿನ ಬೆಳಿಗ್ಗೆ. ಅಗ್ನಿ ಸ್ಪರ್ಶವಾದಾಗ ನಮ್ಮ ಕಾರ್ಯಕರ್ತರೂ ಅಲ್ಲಿರಲಿಲ್ಲ ಎಂಬುದು ಗಮನಾರ್ಹ ಸಂಗತಿ, ಪಂಚಪೀಠಾಧೀಶರು ಮತ್ತು ಅವರ ಅನುಯಾಯಿಗಳು ನಮ್ಮ ಕಾರ್ಯಕರ್ತರ ಮೇಲೆ ಮಿಥ್ಯಾರೋಪ ಮಾಡುವುದು ದುರುದ್ದೇಶದಿಂದ. ಅವರ ಮೆರವಣಿಗೆಗೆ ಬ್ಯಾಂಡಿನವರು ಮತ್ತು ಬೃಹತ್ ಸಂಖ್ಯೆಯಲ್ಲಿ ಪೋಲೀಸರು ಬಿಟ್ಟರೆ ಐವತ್ತು ಜನ ಸಹ ಇರಲಿಲ್ಲ; ಮಧ್ಯಾಹ್ನ 2 ಕ್ಕೆ ಆರಂಭವಾಗಬೇಕಾದ ಮೆರವಣಿಗೆಗೆ ಅವರು ಸಂಜೆ ವಿಳಾಗುತ್ತಾ ಬಂದರೂ ತಡೋಳದಿಂದ ಆಗಮಿಸಲೇ ಇಲ್ಲ. ಹೀಗಾಗಿ ಬಹು ಸಂಖ್ಯೆಯ ನಮ್ಮ ಕಾರ್ಯಕರ್ತರು ಪೀಠಾಧೀಶರ ಬರುವಿಕೆ ರದ್ದಾಯಿತೆಂದು ಭಾವಿಸಿ ತಮ್ಮ ತಮ್ಮ ಗ್ರಾಮಗಳಿಗೆ ತೆರಳುತ್ತಿದ್ದರು. ಮೆರವಣಿಗೆ, ಸಭೆ ಎರಡಕ್ಕೂ ಜನರು ಸೇರದೆ ಮುಖಭಂಗಿತರಾಗಲು ಇಷ್ಟವಿಲ್ಲದ ಪಂಚಪೀಠಾಧೀಶರ ಕಡೆಯವರೇ ಮುಖ ಉಳಿಸಿಕೊಳ್ಳಲು ವೇದಿಕೆಗೆ ಬೆಂಕಿ ಹಚ್ಚಿದರು ಎಂಬ ವದಂತಿಯೂ ಬಸವ ಕಲ್ಯಾಣದಲ್ಲಿ, ಬೀದರ ಜಿಲ್ಲೆಯಲ್ಲಿ ದಟ್ಟವಾಗಿ ಹಬ್ಬಿದೆ.

ಈ ವಿಧ್ವಂಸಕ ಕೃತ್ಯಕ್ಕೆ ಕಾರಣರಾರು ಎಂದು ತಿಳಿಯಲು ನಮಗೆ ಉತ್ಕಟ ಕುತೂಹಲವಿದೆ. ಈಗಾಗಲೇ ಪತ್ರಿಕೆಗಳಲ್ಲಿ ಬಂದ ಭಿನ್ನ ಭಿನ್ನ ವರದಿಗಳನ್ನು ಓದಿ ರಾಷ್ಟ್ರೀಯ ಬಸವ ದಳದ ಕೇಂದ್ರ ಸಮಿತಿಯ ಕಾರ್ಯಾಧ್ಯಕ್ಷೆ **ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ** ಯವರು ಸನ್ಮಾನ್ಯ ಗೃಹಮಂತ್ರಿಗಳಿಗೆ ಬೆಂಗಳೂರು ರಾಷ್ಟ್ರೀಯ ಬಸವ ದಳದ ಪ್ರತಿನಿಧಿಗಳ ಮೂಲಕ ತನಿಖೆಗೆ ಆಗ್ರಹಿಸಿ ಮನವಿ ನೀಡಿದ್ದಾರೆ.

ಇಂದು ನಾವಾಗಲೀ, ಯಾವುದೇ ವಿರಕ್ತಮಠಾಧೀಶರಾಗಲೀ ಪಂಚಾಚಾರ್ಯ ಪರಂಪರೆಯವರು ತಮ್ಮವೆಂದು ಹೇಳಿಕೊಳ್ಳುವ ಕಾಶೀ, ಕೇದಾರ, ಉಜ್ಜಯಿನಿ,

ಬಾಳೆಹೊನ್ನೂರು ಮುಂತಾದಲ್ಲಿಗೆ ದುರುದ್ದೇಶದಿಂದ ಅಲ್ಲಿಯ ವಾತಾವರಣ ಕದಡಲು, ಸಮಾಜ ಒಡೆಯಲು ಹೋಗಿ ಯತ್ನಿಸಿದ್ದುಂಟೆ ? ಪಂಚ ಪೀಠಾಧೀಶರು ಮೊದಲು ಎಂದೂ ಕಾಲಿಡದವರು 1994 ರ ಜನವರಿಯಲ್ಲಿ ಕೂಡಲ ಸಂಗಮಕ್ಕೆ ಬಂದು ಸ್ಥಳೀಯರ ಮಧ್ಯೆ ಒಡಕು ಹುಟ್ಟಿಸಿದರು. ಈಗ ಬಸವ ಕಲ್ಯಾಣಕ್ಕೂ ಬರಲು ಯತ್ನಿಸಿದರು. ಇಂಥ ಒಡೆದು ಆಳುವ ನೀತಿ ಅವರಿಗೆ ಏಕೆ ? ಬಸವ ಕಲ್ಯಾಣದಲ್ಲಿ ವೇದಿಕೆಗೆ ಬೆಂಕಿ ಹಚ್ಚಿದ ದುಷ್ಕೃತ್ಯವನ್ನೂ ನಮ್ಮ ಸಂಘಟನೆಯ ತಲೆಗೆ ಕಟ್ಟಲು ಯತ್ನಿಸಿದ್ದಲ್ಲದೆ ತಾವೂ ಇದೇ ರೀತಿ ಪ್ರತಿಕ್ರಿಯೆ ತೋರುವುದಾಗಿ ಹೇಳಿಕೆ ನೀಡಿದ ಮಹಂತ ಮಠದ ಅಧ್ಯಕ್ಷ ಎನ್. ಆರ್. ಪಂಡಿತಾರಾಧ್ಯರು ಗೂಂಡಾಗಿರಿಯನ್ನು ಪ್ರಚೋದಿಸುತ್ತಿದ್ದಾರೆ ಎಂದು ಹೇಳದೆ ಗತ್ಯಂತರವಿಲ್ಲ.

ಆದ್ದರಿಂದ ಬೆಂಗಳೂರಿನ ಬಿ. ಎಸ್. ಶಿವಣ್ಣ ಮತ್ತಿತರ ಕೆಲವು ವೀರಶೈವರು ಯಾವ ಸತ್ಯ ಸಂಗತಿಯನ್ನೂ ತಿಳಿಯದೆ, 30 ಸಂಸ್ಥೆಗಳು ತಮ್ಮ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟಿವೆ ಎಂದು ಲಿಖಿತ ಹೇಳಿಕೆಯಲ್ಲಿ ಅವರುಗಳೆಲ್ಲರ ಸಹಿಯೂ ಇಲ್ಲದೆ, ಆ ಎಲ್ಲ ಸಂಘ–ಸಂಸ್ಥೆಗಳ ಹೆಸರು ಸಹ ಇಲ್ಲದೇ ನಾವು ರಾಷ್ಟ್ರೀಯ ಭಾವೈಕ್ಯತೆಗೆ ಚ್ಯುತಿ ತರುವ ಕಾನೂನು ಭಂಗದ ಕೆಲಸದಲ್ಲಿ ನಿರತರಾಗಿದ್ದೇವೆಂದು ಹೇಳಿಕೆ ನೀಡಿರುವುದು ದಾರ್ಷ್ಟ್ಯದ ಮತ್ತು ಖಂಡನಾರ್ಹ ಸಂಗತಿ. ಇದನ್ನು ನಾವು ಖಂಡಿಸುತ್ತೇವೆ.

ಶರಣ. ಎನ್. ಪುಟ್ಟರುದ್ರಪ್ಪ,
ಕಾರ್ಯಾಧ್ಯಕ್ಷರು,
ರಾ. ಬ. ದಳ ಬೆಂಗಳೂರು ಘಟಕ
ಹಾಗೂ ಪ್ರಧಾನ ಕಾರ್ಯದರ್ಶಿ
ರಾ. ಬ. ದಳ ಕೇಂದ್ರ ಸಮಿತಿ.
ದಿನಾಂಕ : 11–6–1995

ಬಸವಕುಮಾರ್ ಪಾಟೀಲ
ಕಾರ್ಯಾಧ್ಯಕ್ಷರು,
ರಾ. ಬ. ದಳ ರಾಜ್ಯ ಘಟಕ
ಬೆಂಗಳೂರು.

[ಬೆಂಗಳೂರಿನಲ್ಲಿ ಪತ್ರಿಕಾಗೋಷ್ಠಿ ಕರೆದು ಗಣಪ್ರಮುಖ ಬಸವಕುಮಾರ್ ಪಾಟೀಲರು ಕೊಟ್ಟ ಪತ್ರಿಕಾ ಹೇಳಿಕೆ]

ವಿಶೇಷ ಸೂಚನೆ

ಕೆಲವು ಜನ ಶರಣ ಬಂಧುಗಳು ಪೂಜ್ಯ ಮಾತಾಜಿಯವರಿಗೆ ಬರೆಯಬೇಕಾದ ಪತ್ರಗಳನ್ನು ಕೂಡಲ ಸಂಗಮ, ಬೆಂಗಳೂರು, ಬಸವ ಗಂಗೋತ್ರಿ, ಕುಂಬಳಗೋಡು – ಹೀಗೆ ಮೂರು ವಿಳಾಸಗಳಿಗೆ ಬರೆಯುವ ಶ್ರಮ ತೆಗೆದುಕೊಳ್ಳುತ್ತಾರೆ. ಹಾಗೆ ಮಾಡುವ ಅಗತ್ಯವಿಲ್ಲ. ಬೆಂಗಳೂರಿನ ಬಸವ ಮಂಟಪದ ವಿಳಾಸಕ್ಕೆ ಬರೆದರೆ ಸಾಕು. ಇಲ್ಲಿಂದ ಪೂಜ್ಯ ಮಾತಾಜಿಯವರು ಇರುವ ಸ್ಥಳಕ್ಕೆ ಶೀಘ್ರವಾಗಿ ಕಳಿಸಲಾಗುವುದು. ಅಕಸ್ಮಾತ್ ಕೂಡಲ ಸಂಗಮದ ವಿಳಾಸಕ್ಕೆ ಬರೆದರೂ ಸಹ ಅಲ್ಲಿಂದಲೂ ಪೂಜ್ಯರು ಇರುವಲ್ಲಿಗೆ ಕಳಿಸಲಾಗುವುದು.

ಪೂಜ್ಯ ಮಾತೆ ನೀಲಾಂಬಿಕೆ, ಬಸವ ಮಂಟಪ,
2035, 2 ನೇ ಬ್ಲಾಕು, 20 ನೇ ಮೇನ್, ರಾಜಾಜಿನಗರ, ಬೆಂಗಳೂರು–560010.

೫. ಡಾ|| ಚಿದಾನಂದಮೂರ್ತಿಯವರ ಹೇಳಿಕೆ —

ಗುರು ಪೀಠ—ವಿರಕ್ತ ಪೀಠ

ಮಾನ್ಯರೇ,

ಇದೇ ಜೂನ್ ಒಂದನೇ ತಾರೀಖು ವೀರಶೈವ ಪಂಚ ಪೀಠಾಧಿಪತಿಗಳು ಭಾಗವಹಿಸಬೇಕಿದ್ದ ಬಸವ ಕಲ್ಯಾಣದ ಸಭೆಯು ಲಾಠಿ ಪ್ರಹಾರ, ಅಗ್ನಿಸ್ಪರ್ಶಗಳಲ್ಲಿ ಪರ್ಯವಸಾನವಾದುದು ಅತ್ಯಂತ ವಿಷಾದದ ಸಂಗತಿ. ಈ ಬಗೆಯ ಗಲಭೆಗಳು ಹಿಂದೆಯೂ ಆಗಿವೆ ಮತ್ತು ಮುಂದೆಯೂ ಬಹುಶಃ ಆಗಲಿವೆಯಾದ್ದರಿಂದ ಈ ಮುಂದಿನ ಮಾತುಗಳು ಅಗತ್ಯವಾಗಿವೆ.

ವೀರಶೈವ ಮಠಗಳನ್ನು ಸ್ಥೂಲವಾಗಿ ಗುರು ಪೀಠ ವಿರಕ್ತ ಪೀಠ ಎಂದು ಎರಡು ಒಗೆಯಾಗಿ ವಿಂಗಡಿಸಬಹುದು; ರಂಭಾಪುರಿ, ಶ್ರೀಶೈಲ ಇವೇ ಮೊದಲಾದ. "ಪಂಚ ಪೀಠ"ಗಳು ಮತ್ತು ಅವುಗಳ ಶಾಖಾ ಪೀಠಗಳೆಲ್ಲ ಗುರು ಪೀಠಗಳು. ಚಿತ್ರದುರ್ಗ, ಸಿದ್ಧಗಂಗೆ, ಇಳಕಲ್ ಮಠಗಳು ವಿರಕ್ತ ಪೀಠಗಳಿಗೆ ಕೆಲವು ಉದಾಹರಣೆಗಳು. ಗುರು ಪೀಠಗಳ ಪೂಜ್ಯರ ಕರ್ತವ್ಯಗಳು ಮುಖ್ಯವಾಗಿ ಹುಟ್ಟು, ಸಾವು, ಮದುವೆ, ಹಬ್ಬ, ದೀಕ್ಷೆಗಳಂತಹ ಸಂದರ್ಭಗಳಲ್ಲಿ ನಡೆಯುವ ಶಾಸ್ತ್ರಾಚರಣೆಗಳಿಗೆ ಸಂಬಂಧಿಸಿದ್ದು. ವಿರಕ್ತ ಪೀಠಗಳ ಪೂಜ್ಯರ ಕ್ಷೇತ್ರ ಮುಖ್ಯವಾಗಿ ಜ್ಞಾನ, ಅಧ್ಯಾತ್ಮಗಳಿಗೆ ಸಂಬಂಧಿಸಿದ್ದು.

ನಾನು ಹಿಂದೆಯೇ ಪ್ರತಿಪಾದಿಸಿರುವಂತೆ ಎರಡು ಬಗೆಯ ಮಠಗಳಿಗೂ ಕರ್ತವ್ಯ ಭೇದವಿದೆಯೇ ಹೊರತು ಉದ್ದೇಶ ಭೇದವಿಲ್ಲ; ಎರಡರ ಉದ್ದೇಶವೂ ಸಮಾಜದ ಒಳಿತೇ ಆಗಿದೆ. ಆ ಎರಡೂ ಬಗೆಯ ಮಠಗಳನ್ನು ವೀರಶೈವ ಸಮಾಜದ ಎರಡು ಕಣ್ಣುಗಳೆಂದೇ ನಾನು ಕರೆದಿದ್ದೇನೆ; ಗುರು ಪೀಠಗಳು ತಮ್ಮ ಆಚಾರ್ಯರೆಂದು ಭಾವಿಸುವ ರೇವಣ ಸಿದ್ಧ (ರೇಣುಕಾಚಾರ್ಯ), ಪಂಡಿತಾರಾಧ್ಯ, ಮರುಳಾರಾಧ್ಯ ಇವರೆಲ್ಲರೂ ವಿರಕ್ತ ಪೀಠಗಳು ಎತ್ತಿ ಹಿಡಿಯುವ ಬಸವ, ಅಲ್ಲಮ, ಸಿದ್ಧರಾಮರ ಸಮಕಾಲೀನರೆಂಬಲ್ಲಿ ಅನುಮಾನಗಳಿಲ್ಲ. ಪ್ರಾಚೀನತೆಯಲ್ಲೂ ಹೀಗೆ ಎರಡೂ ಬಗೆಯ ಮಠಗಳೂ ಸಮಾನ. ಹಿಂದಿನ ಕನ್ನಡ ಕವಿಗಳು ಎರಡೂ ಮಠಗಳ ಪೂಜ್ಯರನ್ನು ಸಮಾನ ಗೌರವದಿಂದ ಬಣ್ಣಿಸಿದ್ದಾರೆ. ಆದರೆ ಈ ಶತಮಾನದಲ್ಲಿ ಮಾತ್ರ ಗುರು ಪೀಠದವರು ತಾವು ಹೆಚ್ಚೆಂದು ಭಾವಿಸಿದ್ದಲ್ಲದೆ ಬಸವಣ್ಣನವರನ್ನು ಅಗೌರವದಿಂದ ಕಂಡರು, ಕಾಣುತ್ತಿದ್ದಾರೆ.

ವಾಸ್ತವವೆಂದರೆ, ವಿರಕ್ತ ಪೀಠದ ಶ್ರೀಗಳು ಆಧುನಿಕ ಸಮಾಜದ ಅಗತ್ಯಗಳಿಗೆ ಸ್ಪಂದಿಸಿದಂತೆ ಗುರು ಪೀಠದವರು ಸ್ಪಂದಿಸಿಲ್ಲ. ಒಂದು ಸತ್ಯವನ್ನು ನಾನು ಅನಿವಾರ್ಯವಾಗಿ ಹೇಳಲೇಬೇಕಾಗಿದೆ. ಎರಡೂ ಪೀಠದವರು ಸಮಾನರು ಎಂದು ಹೇಳಿದೆ. ತಾತ್ವಿಕವಾಗಿ ಆ ಮಾತು ನಿಜ; ತಾತ್ವಿಕವಾಗಿ ಎಲ್ಲ ಮನುಷ್ಯರೂ ಸಮಾನರಾದರೂ ಭಾರತೀಯ ಪರಂಪರೆಯಲ್ಲಿ ಎಲ್ಲ ಸಂಪತ್ತನ್ನು ಹೊಂದಿರುವ ಚಕ್ರವರ್ತಿಗಿಂತ ಏನೂ ಇಲ್ಲದ ಸನ್ಯಾಸಿ ಸ್ಥಾನಿಕನಾಗಿ ಮೇಲಿನವನು. ಚಕ್ರವರ್ತಿಯು ಸನ್ಯಾಸಿಗೆ ನಮಸ್ಕರಿಸಬೇಕು. ಆದರೆ ಸನ್ಯಾಸಿ ಚಕ್ರವರ್ತಿಗೆ ಅಲ್ಲ. ವಿರಕ್ತ ಪೀಠದ ಮಠಾಧೀಶರು ಹೆಸರೇ ಹೇಳುವಂತೆ ಸನ್ಯಾಸಿಗಳು. ಗುರು ಪೀಠದವರು ಕೆಲವು ಲೌಕಿಕ ಜವಾಬ್ದಾರಿ ಹೊತ್ತವರು. ಸ್ಥಾನಿಕವಾಗಿ ವಿರಕ್ತ ಪೀಠದವರು ಗುರು ಪೀಠದ ಪೂಜ್ಯರಿಗಿಂತ ಮೇಲಿನವರು. ಹೀಗಿದ್ದರೂ ವಿರಕ್ತ ಪೀಠದವರು ಎಂದೂ ತಮ್ಮ ಮೇಲ್ಮೆಯನ್ನು ತೋರ ಹೋಗದೆ, ರೇವಣ ಸಿದ್ಧ(ರೇಣುಕ)ರಿಗೆ ಅಗೌರವ ತೋರದೆ ಪ್ರಬುದ್ಧತೆಯನ್ನು ಮೆರೆದಿದ್ದಾರೆ.

ಈ ಕೆಲ ವಾಸ್ತವಗಳನ್ನು ಗಮನಿಸಿ, ಗುರು ಪೀಠದ ಶ್ರೀಗಳು ವಿರಕ್ತರ ಜೊತೆ ಸಮಾನ ಗೌರವದಿಂದ ನಡೆದುಕೊಂಡು ವೀರಶೈವ ಧರ್ಮಕ್ಕೆ ವಿಶ್ವ ವಿಖ್ಯಾತಿಯನ್ನು ತಂದ ಬಸವನ ಬಗ್ಗೆ ಅಪಚಾರದಿಂದ ನಡೆದುಕೊಳ್ಳದೆ ಇರುವುದು ಅಗತ್ಯ ಮಾತ್ರವಲ್ಲ. ಅನಿವಾರ್ಯವೆಂದು ಅವರಲ್ಲಿ ನಿವೇದಿಸಿಕೊಳ್ಳ ಬಯಸುತ್ತೇನೆ.

—ಡಾ. ಎಂ ಚಿದಾನಂದಮೂರ್ತಿ, ಬೆಂಗಳೂರು.

(ಕನ್ನಡ ಪ್ರಭಾ, ದಿ. 16–6–95, ಜನನಾಡಿ)

೬. ನನ್ನದೂ ಅದೇ ವಿಚಾರ

—ಮಾತಾಜಿ

ಸುಧಾ ಪತ್ರಿಕೆ – 18–6–1995, ಪುಟ–78, ಸುದ್ದಿ ಸ್ವಾರಸ್ಯ ವಿಭಾಗ

"ಒಂದು ಉರ್ದು ಪದ್ಯದ ಈ ಸರಳ ಚರಣ ನೋಡಿ :

ಯಾ ಖುದಾ ಈ ಜಗವನ್ನು ಉಳಿಸು.
ಖುದ್ದಾಗಿ ಬರಲಾಗದಿದ್ದರೆ
ಕಡೆಯ ಪಕ್ಷ ಒಬ್ಬ ಉತ್ತಮ
ಪ್ರವಾದಿಯನ್ನಾದರೂ ಕಳಿಸು.

ಹೀಗೆಂದು ಉರ್ದು ಕವಿ ಮೊಹಮ್ಮದ್ ಆಲ್ವಿ ಎಂಬುವವರು 17 ವರ್ಷಗಳ ಹಿಂದೆ ಬರೆದಿದ್ದರು. ಕಳೆದ ವರ್ಷ ಆ ಕವನ ಸಂಗ್ರಹ ಪ್ರಕಟವಾಗಿ, ಅದಕ್ಕೆ

ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯೂ ಬಂತು. ಈಗ ಮುಸ್ಲಿಮ್ ಧರ್ಮ ಭೀರುಗಳು ಕೆರಳಿದ್ದಾರೆ. "ನಮಗೆ ಮೊಹಮ್ಮದ್ (ಪೈಗಂಬರ್) ಒಬ್ಬರೇ ಪ್ರವಾದಿ. ಬೇರೊಬ್ಬ ಪ್ರವಾದಿ ಬೇಕೆಂದು ಬಯಸುವುದೂ ಧರ್ಮಲಂಡತನ" ಎಂದಿದ್ದಾರೆ. ಅಲ್ಲಿಯ ಸಾಮಾಜಿಕ ಬಹಿಷ್ಕಾರಕ್ಕೆ ಒತ್ತಾಯಿಸಿದ್ದಾರೆ. ಕವಿ ತನ್ನ ತಪ್ಪಿಗೆ ಪ್ರಾಯಶ್ಚಿತ ಮಾಡಿಕೊಂಡು ಮತ್ತೆ ಹೊಸದಾಗಿ ಇಸ್ಲಾಂ ಧರ್ಮಕ್ಕೆ ಸೇರಬೇಕೆಂದೂ, ಮತ್ತೊಮ್ಮೆ ತನ್ನ ಪತ್ನಿಯನ್ನು ಮದುವೆ ಮಾಡಿಕೊಳ್ಳಬೇಕೆಂದೂ ದಾರುಲ್ ಉಲೂಮ್ ಶಾಹೆ ಆಲಂ ಎಂಬ ಧರ್ಮಸಂಸ್ಥೆ ಒತ್ತಾಯಿಸಿದೆ. "ಯಾ ಖುದಾ, ನೀನೇ ಖುದ್ದಾಗಿ ಯಾಕೆ ಬರಬಾರದು?" ಈ ವಿವರ ಓದುತ್ತಲೇ ಮುಸ್ಲೀಮರು ಮತಾಂಧರು ಎಂದು ತೀಕ್ಷ್ಣ ಪ್ರತಿಕ್ರಿಯೆ ವ್ಯಕ್ತಪಡಿಸಲು ಹಿಂದೂ ಬುದ್ಧಿ ಜೀವಿಗಳು ಅವಸರಿಸುವುದು ಸಹಜ,

ಕವಿಯ ಈ ಆಶಯ, ಪ್ರಾರ್ಥನೆ ತಪ್ಪು ಎಂದು ನಾನೂ ಸಹ ಅಂದರೆ ನಿಮಗೆ ಖಂಡಿತಾ ಆಶ್ಚರ್ಯವಾಗುವುದು.

1. ಕವಿ ಮೊಹಮ್ಮದ್ ಅಲ್ವಿಗೆ ಇಸ್ಲಾಂ ಧರ್ಮದ ಮೂಲಭೂತ ನಂಬಿಕೆ 'ದೇವರು ಸ್ವತಃ ಬರುವುದಿಲ್ಲ' ಎಂಬುದು ತಿಳಿದಂತೆ ಕಾಣದು. ಸೈದ್ಧಾಂತಿಕ ತಿಳುವಳಿಕೆ ಇದ್ದರೂ ಏನೋ ಬರೆಯಬೇಕೆಂದು ಬರೆದಿರಬಹುದು. ಜಗತ್ತಿನ ಎಲ್ಲ ಸೇಶ್ವರವಾದಿ ಧರ್ಮಗಳೂ ದೇವರು ಸ್ವತಃ ಇಳಿದು ಬರುತ್ತಾನೆ ಎಂದು ನಂಬವು. ಕೇವಲ ವೈಷ್ಣವ ಮತ ಮಾತ್ರ ಹಾಗೆ ನಂಬುತ್ತದೆ.- ಸಚ್ಚಿದಾನಂದ ನಿತ್ಯ ಪರಿಪೂರ್ಣನು, ಸರ್ವಶಕ್ತನೂ ಆದ ದೇವನು ಸೀಮಿತರಾದ ತಾಯಿ-ತಂಡೆಯರ ಗರ್ಭದಲ್ಲಿ ಬರುವುದಿಲ್ಲ. ಆದ್ದರಿಂದ ಆ ಕವಿ ಆಹ್ವಾನಿಸಿದಂತೆಯಾಗಲೀ, ಸುಧಾದ ವಿಷಯ ಸಂಗ್ರಹಕಾರರು ಬರೆದಂತೆ ದೇವರು ಖುದ್ದಾಗಿ ಬರನು.
2. ಕಡೆಯ ಪಕ್ಷ ಒಬ್ಬ ಉತ್ತಮ ಪ್ರವಾದಿಯನ್ನಾದರೂ ಕಳಿಸು ಎಂಬ ಪ್ರಾರ್ಥನೆ ಸರಿಯೆ ? ಹಾಗಿದ್ದರೆ ಅವರು ಕಡೆಯ ಪ್ರವಾದಿ ಎಂದು ಒಪ್ಪುವ ಮೊಹಮ್ಮದ್ ಪೈಗಂಬರರು ಉತ್ತಮರಲ್ಲವೆ ? ಈ ಕಾರಣಕ್ಕೇ ಮುಸ್ಲೀಮರು ಸಿಟ್ಟಿಗೆದ್ದಿರಬಹುದು. ನಮ್ಮಲ್ಲೂ ಈ ದುರಭ್ಯಾಸವಿದೆ.

ಕಲ್ಯಾಣದಣ್ಣ ಬಾರೋ ಬಸವಣ್ಣ
ನೀ ಬರದಿರಲು ಜಗಕೆಲ್ಲ ಅಳಿಗಾಲವಣ್ಣ

ಎಂದು ಹಾಡಿದ್ದೂ ಹಾಡಿದ್ದೆ! ನಾನು ಒಮ್ಮೆ ಬರೆದಿದ್ದೆ, ಹಾಡುತ್ತಿದ್ದೆ.

ಕಾಣಲಾರೆಯ ಬಸವಾ ಧರ್ಮದೀ ಪರಿಯನು
ಕಂಡು ಬರದಿಹೆ ಏಕೆ ಕಾಪಿಡಲಿಕೆ ?

ಧರ್ಮವಿದು ಹಾಳಾಗಿ ಮರ್ಮವಿದು ಮರೆಯಾಗಿ
ಕರ್ಮವದು ಹಿರಿದಾಗಿ ಬಾ ಬಸವಾ ಬಾ ಬಸವಾ ॥

ನನಗೆ ಈಗ ಅನ್ನಿಸುತ್ತದೆ, ಹೀಗೆ ಕರೆಯುವುದು ತಪ್ಪು ಎಂದು. ಅವರು ಬಂದು ಮಾಡಬೇಕಾದುದೇನು ? ಅವರು ಒಂದು ಆದರ್ಶ ಜೀವನ ಬಾಳಿ, ಮಾದರಿಯಾಗಿ ತೋರಿಸಿ, ಜಗವು ಸರಿಯಾದ ಮಾರ್ಗದಲ್ಲಿ ಸಾಗಲು ಸಂದೇಶ ನೀಡಿ, ಸಾಹಿತ್ಯ ಕೊಟ್ಟು ಹೋದ ಮೇಲೆ ಈಗಿನವರು ಅಂದರೆ ನಾವು-ನೀವೆಲ್ಲ ಆ ತತ್ತ್ವದ ಬೆಳಕಿನಲ್ಲಿ ಮುನ್ನಡೆಯ ಬೇಕೇ ವಿನಾ, ಸದಾ ಕಾಲವು ನೀನೇ ಬಾ, ನೀನೇ ಬಾ ಎಂದು ಕರೆಯುವುದು ಶುದ್ಧ ತಪ್ಪು. ಆ ಮಹಾನ್ ವ್ಯಕ್ತಿಗಳು ಕೊಟ್ಟ ಸಂದೇಶ ಅಳವಡಿಸಿ ಕೊಳ್ಳೋಣ, ಪ್ರಚಾರ ಮಾಡೋಣ, ನಾವು ಅವರ ಸಂದೇಶವಾಹಕರಾಗೋಣ ಎಂಬ ನಂಬಿಕೆ, ಶರಣಾಗತಿ ಇರಬೇಕೇ ವಿನಾ ಆಚರಣೆಗೆ, ಪ್ರಚಾರಕ್ಕೆ ಪ್ರಯತ್ನಿಸದೆ, ನೀನೇ ಪುನಃ ಬಾ ಎನ್ನುವುದು ಸರಿಯಲ್ಲ-ತಾತ್ತ್ವಿಕವಾಗಿಯೂ ಸರಿಯಲ್ಲ, ಸ್ವಾವಲಂಬನೆಯ ದೃಷ್ಟಿಯಿಂದಲೂ ಸರಿಯಲ್ಲ.

ವಿಶ್ವಗುರು ಬಸವಣ್ಣನವರು ನಮ್ಮ ದೃಷ್ಟಿಯಲ್ಲಿ ಒಬ್ಬ ಪರಿಪೂರ್ಣ ಪ್ರವಾದಿ; ಪರಿಪೂರ್ಣ ಧರ್ಮವನ್ನು ಕೊಟ್ಟವರು. ಅವರನ್ನು ಮೀರಿಸುವ ಇನ್ನೊಬ್ಬ ಮಹಾಪುರುಷ ಇಲ್ಲ ಎಂಬುದು ನಮ್ಮ ನಂಬಿಕೆ ಮತ್ತು ಪ್ರತ್ಯಕ್ಷ ಅನುಭವವಾಗಿರುವಾಗ ಇನ್ನೊಬ್ಬರು ಎಂತು ಅವರ ಸ್ಥಾನಕ್ಕೆ ನಿಲ್ಲಬಲ್ಲರು ? ಈಗ ಅವರೇ ಬಂದರೂ (ಮುಕ್ತಾತ್ಮರಿಗೆ ಪುನರ್ಜನ್ಮವಿರದು) ಎರಡು ಜನ್ಮದಲ್ಲಿ ಯಾವುದು ಶ್ರೇಷ್ಠ ಎನ್ನಬೇಕು ? ಈಗಿನದು ಎಂದರೆ ಆಗ, ಆಗಿನದು ಅಪೂರ್ಣ ಎಂದಾಗುತ್ತದೆ, ಆಗಿನದು ಎಂದರೆ ಆಗ ಆ ಬಸವಣ್ಣನವರ ಸ್ಥಾನಕ್ಕೆ ಈಗಿನವರು ಏರಲಾರರು. ಆದ್ದರಿಂದ ಹನ್ನೆರಡನೆಯ ಶತಮಾನದ ಬಸವಣ್ಣನವರನ್ನೇ ನಮ್ಮ ಏಕೈಕ ಪ್ರವಾದಿ (ಕಾರಣಿಕ) ಎಂದು ತಿಳಿದು ಅವರು ನಡೆದು ನುಡಿದು ತೋರಿದ ಪಥದಲ್ಲಿ ನಾವು ಸಾಗಬೇಕು ಪುನಃ ಪುನಃ ಬಾ ಎಂದು ಕರೆಯಬಾರದು. ★

ಲಿಂಗಾಯತ ಧರ್ಮ ಮಹಾಸಭಾ [ಕೇಂದ್ರ]

ಲಿಂಗಾಯತ ಧರ್ಮದ ಮಹತ್ವವನ್ನು ಸ್ವಧರ್ಮೀಯರು–ಪರ ಧರ್ಮೀಯರು ಉಭಯತರಿಗೂ ಮಾಡಿಕೊಟ್ಟು, ಸಮಾಜ ಸಂಘಟನೆ ಮಾಡಬೇಕೆಂಬ ಉದ್ದೇಶ–ದಿಂದ ಲಿಂಗಾಯತ ಧರ್ಮ ಮಹಾಸಭಾ ಎಂಬ ಸಂಸ್ಥೆಯನ್ನು ಆರಂಭಿಸಬೇಕೆಂದು ಶರಣ ಮೇಳಕ್ಕೆ ಪೂರ್ವದಲ್ಲಿ ಚಿಂತಿಸಲಾಯಿತು. ನೋಂದಣಿ ಮಾಡಿಸಲು ಸಮಯವು ಬಹಳ ಕಡಿಮೆ ಇದ್ದ ಕಾರಣ, ಕರಪತ್ರಗಳನ್ನು ಸಿದ್ಧಪಡಿಸಿ ಶರಣ ಮೇಳದಲ್ಲಿ ಹಂಚಿದ್ದೇ ಅಲ್ಲದೆ, ದಿ. 14-1-1995 ರಂದು **ಪರಮ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳವರ** ದಿವ್ಯ ಹಸ್ತದಿಂದ ನಾಮಫಲಕವನ್ನು ಅನಾವರಣ ಮಾಡಿಸಿ, ವಿದ್ಯುಕ್ತವಾಗಿ ಸ್ಥಾಪಿಸಿ ಸದಸ್ಯತ್ವವನ್ನೂ ಜನರಿಂದ ಸ್ವೀಕರಿಸಲಾಯಿತು. ಲಿಂಗಾಯತ ಧರ್ಮ ಮಹಾ

ಸಭಾಕ್ಕೆ ಒಂದು ವಿಶ್ವಸ್ಥ ಮಂಡಳಿಯನ್ನು ರಚಿಸಿ, ಧ್ಯೇಯೋದ್ದೇಶಗಳನ್ನು ಖಚಿತ ಪಡಿಸಿ **ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು** ಮಂಗಳವಾರ ದಿ. 20-6-1995 ರಂದು ನೋಂದಾಯಿಸಿಕೊಟ್ಟಿದ್ದಾರೆ. ಇದಕ್ಕೆ ಪೂರಕವಾಗಿ ಕಾರ್ಯಕಾರಿ ಸಮಿತಿ, ಪ್ರಾಂತಿಯ ಸಮಿತಿಗಳನ್ನು ಸಹ ಮಾಡಲಾಗುತ್ತಿದೆ. ಜಿಲ್ಲಾವಾರು, ತಾಲ್ಲೋಕಾವಾರು ಸಮಿತಿಗಳನ್ನು ಮಾಡಿಕೊಂಡು ವಿವಿಧ ಸ್ಥಳಗಳಲ್ಲಿ ಲಿಂಗಾಯತ ಧರ್ಮ ಮಹಾಸಭೆಯ ಘಟಕಗಳನ್ನು ತೆರೆಯಬೇಕು ಎನ್ನುವವರು ಕೇಂದ್ರ ಕಾರ್ಯಾಲಯಕ್ಕೆ ಸಂಪರ್ಕಿಸಬಹುದು. ಅತ್ಯಗತ್ಯವಿರುವವರು ಲಿಂಗಾಯತ ಧರ್ಮ ಮಹಾಸಭೆಯ ಸ್ಥಳೀಯ ಘಟಕಗಳನ್ನು ನೋಂದಾಯಿಸಬಹುದು. ಅಗತ್ಯವೆನಿಸದವರು ನೋಂದಾಯಿತವಲ್ಲದ ಸಂಸ್ಥೆಯನ್ನಾಗಿಯೇ ಇರಿಸಿಕೊಂಡು ಕಾರ್ಯ ಮಾಡಬಹುದು. ವಿವರಗಳಿಗಾಗಿ ಆಸಕ್ತರು 10 ರೂ. ಎಂ. ಓ. ಮಾಡಿ ಬರೆಯಿರಿ.

ಶರಣ. ಕೊಂಡಜ್ಜಿ ಬಸಪ್ಪ
ಕಾರ್ಯದರ್ಶಿ

ಶರಣ. ಎನ್. ಪುಟ್ಟರುದ್ರಪ್ಪ
ಕಾರ್ಯಾಧ್ಯಕ್ಷರು

ವಿಳಾಸ : **ಲಿಂಗಾಯತ ಧರ್ಮ ಮಹಾಸಭಾ (ರಿ) ಕೇಂದ್ರ**
ಬಸವ ಮಂಟಪ, 2035, 20ನೇ ಮೇಯಿನ್, 2ನೇ ಬ್ಲಾಕು, ಕಾರ್ಡ್‌ರಸ್ತೆ,
ರಾಜಾಜಿನಗರ, ಬೆಂಗಳೂರು-560010 (ದೂರವಾಣಿ 3325335

ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸ ನಿಧಿ

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಕುಮಾರಿ ಅನಿತಾ ಎಂಬ ವಿದ್ಯಾರ್ಥಿನಿಗೆ ಪ್ರತಿಭೆ ಆಧಾರದ ಮೇಲೆ ಮೆಡಿಕಲ್ ಸೀಟು ಸಿಕ್ಕಾಗ ದಾನಿಗಳ ನೆರವಿನಿಂದ ಧನ ಸಹಾಯ ಮಾಡಿತು. ಅನಿತಾ ಇದೀಗ ಹೌಸ್ ಸರ್ಜನ್ ಆಗಿ ಮೈಸೂರಿನಲ್ಲಿದ್ದಾರೆ. 1994ನೆಯ ಸಾಲಿನಿಂದ ಹುನಗುಂದದ ಮಹಾಂತೇಶ ಹೂಲಗೇರಿ ಎಂಬ ವಿದ್ಯಾರ್ಥಿಯನ್ನು ಆಯ್ಕೆ ಮಾಡಿದ್ದು, ಬಳ್ಳಾರಿ ಮೆಡಿಕಲ್ ಕಾಲೇಜಿನಲ್ಲಿ ಈತನು ವಿದ್ಯಾಭ್ಯಾಸ ಮಾಡುತ್ತಿದ್ದಾನೆ. ಇದೀಗ ಅನೇಕ ದಾನಿಗಳು ಪ್ರೇರಿತರಾಗಿದ್ದು ವಿದ್ಯಾಭ್ಯಾಸಕ್ಕೆ ನೆರವು ನೀಡುವ ಒಂದು ಕಾಯಂನಿಧಿಯನ್ನು ಲಿಂಗಾಯತ ಧರ್ಮ ಮಹಾಸಭಾದ ಆಶ್ರಯದಲ್ಲಿ ಆರಂಭಿಸಬೇಕೆಂದು, ದಿ. 20–6–95 ರಂದು ನಿರ್ಧರಿಸಿದ್ದಾರೆ. ಈ ಯೋಜನೆಯಡಿಯಲ್ಲಿ

1. ಪ್ರತಿ ತಿಂಗಳೂ ಹಣ ಕಳಿಸುವುದು ಅಥವಾ
2. ವರ್ಷಕ್ಕೊಮ್ಮೆ ಇಷ್ಟು ಎಂದು ಕೊಡುವುದು. ಅಥವಾ
3. ತಮಗೆ ಅನುಕೂಲವಾದಷ್ಟು ಒಮ್ಮೆ ಕೊಡುವುದು

ಈ ರೀತಿ ಸಹಾಯ ಮಾಡಬಹುದು. ನಿಧಿಯ ಸಂಗ್ರಹ ಅನುಸರಿಸಿ ಬಡ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೆರವು ನೀಡಲು ಲಿಂಗಾಯತ ಧರ್ಮ ಮಹಾಸಭಾ ಯೋಜನೆ ಹಾಕಿಕೊಂಡಿದೆ. 80 ಜಿ. ಇನ್‌ಕಮ್ ಟ್ಯಾಕ್ಸ್ ರಿಯಾಯತಿ ಬೇಕಾದವರು ಪತ್ರ ಬರೆಯಿರಿ. ಡಿ.ಡಿ /ಚೆಕ್‌ಗಳು ಲಿಂಗಾಯತ ಧರ್ಮ ಮಹಾಸಭಾ, ಬೆಂಗಳೂರು ಎಂದು ಇರಲಿ.

—**ಎನ್. ಪುಟ್ಟರುದ್ರಪ್ಪ**

[8 ನೇ ಪುಟದಿಂದ ಮುಂದುವರಿದುದು]

ಎಂಬ ಕವಿವಾಣಿ (ಭೀ. ಹ. ಸೂರೇಬಾನ ಅವರ ರಚನೆ) ಸತ್ಯವಾಗಿ ತೋರಿತ್ತು. ಪೂಜ್ಯ ಅಪ್ಪಾಜಿ ಇಡೀ ತಮ್ಮ ಜೀವನದುದ್ದಕ್ಕೂ ಮಾಡಿದ ಕಾಯಕವೆಂದರೆ ಮಾನವರ ನೊಣದಂತಹ ಮನಸ್ಸನ್ನು ಜೇನ್ನೊಣವಾಗಿ ಮಾಡಲು ಯತ್ನಿಸಿದ್ದು. ನೊಣವು ಎಲ್ಲೆಂದರಲ್ಲೇ ಕೂಡ್ರುವಂತೆ, ಭಕ್ಷ್ಯ ಭೋಜ್ಯ ಮತ್ತು ಹೊಲಸು ಎರಡರ ಮೇಲೂ ಸಂಕೋಚವಿಲ್ಲದೆ ಕೂಡ್ರುವಂತೆ ಮನಸ್ಸು ಕೆಟ್ಟುದಕ್ಕೆ ಹಾತೊರೆಯುತ್ತದೆ. ಆದರೆ ಮನಸ್ಸು ಉನ್ಮನವಾಗಿ ಜೇನ್ನೊಣದಂತೆ ಆದಾಗ ದಿವ್ಯವಾದ ವಸ್ತುಗಳ ಮೇಲೆ ಮಾತ್ರ ಕೂರುತ್ತದೆ. ಆ ಅಭಿರುಚಿ ಬೆಳೆಸಲೆಂದೇ ಪೂಜ್ಯರು ಪ್ರವಚನ ಮಾಡುತ್ತಿದ್ದುದು.

ಪೂಜ್ಯರು ಅನುಭವ ಮಂಟಪವನ್ನು ಒಂದು ಜೇಂಗೂಡಿಗೂ ಶರಣರನ್ನು ಜೇನ್ನೊಣಗಳಿಗೂ ಹೋಲಿಸಿ ಒಂದು ಉದಾಹರಣೆ ಕೊಡುತ್ತಿದ್ದರು. ಅನುಭವ ಮಂಟಪ ಎಂಬ ಜೇಂಗೂಡಿನಲ್ಲಿ ಎಲ್ಲ ಜಾತಿ ಮತ ಪಂಥ ಪಂಗಡಗಳಿಂದ ಬಂದ ಶರಣರೆಂಬ ಜೇನ್ನೊಣಗಳು ತಮ್ಮ ತಮ್ಮ ಅನುಭಾವದ ಮಕರಂದ ಕೂಡಿಟ್ಟು ವಚನ ಸಾಹಿತ್ಯ ಎಂಬ ಜೇನುತುಪ್ಪವನ್ನು ಬಿಟ್ಟು ಹೋಗಿದ್ದಾರೆ. ಅದೇ ನಮ್ಮ ಬಹುದೊಡ್ಡ ಆಸ್ತಿ. ಬಸವಣ್ಣ ಎಂಬ ರಾಣಿಜೇನಿನ ನೇತೃತ್ವದಲ್ಲಿ ಎಲ್ಲ ಶರಣರೆಂಬ ಜೇನ್ನೊಣಗಳು ನೀಡಿದ ಅನುಭಾವದ ರಸಪಾಕವೇ ವಚನ ಸಾಹಿತ್ಯ.

ಸಾವಿರಾರು ಜೇನ್ನೊಣಗಳು ಪೂಜ್ಯ ಅಪ್ಪಾಜಿಗೆ ಹೊದ್ದಿಸಿದ್ದ ಮಾಲೆಗಳ ಮೇಲೆ ಹಾರಾಡಿ ಜನರ ಮೇಲೆ ಕೂರುತ್ತಿದ್ದರೂ ಒಬ್ಬರಿಗೂ ಕಚ್ಚಲಿಲ್ಲ. "ಹೂವಿನ ಅಂಗಡಿಯಲ್ಲೇ ರಾಶಿರಾಶಿ ಹೂವಿದ್ದರೂ ಹೀಗೆ ಬರುವುದಿಲ್ಲ. ಇಂಥ ದೃಶ್ಯ ಎಲ್ಲೂ ಕಂಡಿಲ್ಲ" ಎಂದೇ ಎಲ್ಲರ ಉದ್ಗಾರ. ಪೂಜ್ಯರ ಶರೀರವನ್ನು ಎತ್ತಿ ಒಯ್ಯುತ್ತಲೇ ಅವೆಲ್ಲವೂ ಕಣ್ಮರೆಯಾದವು.

"ಅಪ್ಪ ಬಸವಣ್ಣನವರು 63 ವರ್ಷ ಮಾತ್ರ ಬದುಕಿದರು ; ಅದಕ್ಕಿಂತ ಹೆಚ್ಚು ನಾನೇಕೆ ಇರಬೇಕು?" ಎಂದೊಮ್ಮೆ ಅಂದಾಗ, "ಅಂಥ ಮಹಾಗುರುವಿನ ತತ್ತ್ವ ಪ್ರಚಾರ ಮಾಡಲಿಕ್ಕೇ ಇರಬೇಕು" ಎಂದು ಅಂಥ ಅಪೇಕ್ಷೆಯನ್ನು ಖಂಡಿಸಿದ್ದೆವು. ಆದರೆ, ಯಾವ ವೈದ್ಯರೂ ತಮ್ಮನ್ನು ಉಳಿಸುವ ಯತ್ನ ಮಾಡಬಾರದೆಂದೋ ಏನೋ ಅಪ್ಪಾಜಿ ಕಣ್ಮುಚ್ಚಿ ಕಣ್ತೆರೆವಷ್ಟರಲ್ಲಿ ನಗುನಗುತ್ತಲೇ ಕಣ್ಮರೆಯಾದರು.

ಇಂದು ಉಳಿದಿರುವುದು ಅವರ ನೆನಪು ಮಾತ್ರ; ಅವರು ಎಲ್ಲರಲ್ಲಿ ಬೆಳೆಸಿರುವ ಆದರ್ಶಗಳು, ಅಂತರಂಗಕ್ಕೆ ತುಂಬಿರುವ ತ್ಯಾಗ ಎಂದೆಂದೂ ಚಿರಂತನ. ★

ಬಸವ ಧರ್ಮದ ವೀರ ಚೇತನ
ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು

—ಡಾ॥ ನಿತಿನಚಂದ್ರ ಹತ್ತಿಕಾಳ
ಗೌರವಾಧ್ಯಕ್ಷರು, ರಾಷ್ಟ್ರೀಯ ಬಸವ ದಳ
ರಾಜ್ಯ ಸಮಿತಿ, ಧಾರವಾಡ.

[ಅಸ್ಖಲಿತ ವಾಣಿ, ಅಸಾಧಾರಣ ವಾಕ್ಪಟುತ್ವ, ಆತ್ಮವಿಶ್ವಾಸ ತುಂಬಿದ ನಿಲುವು, ಸ್ಪಷ್ಟ, ತಾತ್ವಿಕ, ತಾರ್ಕಿಕ ವಿಚಾ-ಧಾರೆಯಿಂದ ಕೇಳುಗರನ್ನು ಮಂತ್ರಮುಗ್ಧ ಮಾಡುತ್ತಿದ್ದ ಪ್ರವಚನ ಪಟು **ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು** ಪ್ರವಚನ ಪಿತಾಮಹರೆಂಬ ಅನ್ವರ್ಥ ನಾಮ ಪಡೆದ ಶ್ರೀಗಳು ಇದೇ ಜೂನ 30 ರಂದು ಉರಿಯುಂಡ ಕರ್ಪೂರದಂತೆ ಲಿಂಗೈಕ್ಯರಾದರು. ಪೂಜ್ಯರ ಅಭಿಮಾನಿಗಳು ಇದೇ 30–7–1995 ರಂದು ಬೆಂಗಳೂರು ನಗರದ ಬಸವ ಗಂಗೋತ್ರಿಯಲ್ಲಿ ಲಿಂಗೈಕ್ಯರ ಸಂಸ್ಮರಣೋತ್ಸವವನ್ನು ಏರ್ಪಡಿಸಿ ಅಗಲಿದ ಚೇತನಕ್ಕೆ ನಮನಗಳನ್ನು ಸಲ್ಲಿಸುತ್ತಿದ್ದಾರೆ. ತನ್ನಿಮಿತ್ತ ಈ ಪರಿಚಯ ಲೇಖನ]

ಧಾರವಾಡದ ಕಡಪಾ ಮೈದಾನವೇ ಇರಲಿ, ಹುಬ್ಬಳ್ಳಿಯ ನೆಹರೂ ಮೈದಾನವೇ ಇರಲಿ, ಬಳ್ಳಾರಿಯ ಮುನಿಸಿಪಲ್ ಮೈದಾನವೇ ಇರಲಿ, ಮಂಗಳೂರಿನ ನೆಹರು ಮೈದಾನವೇ ಇರಲಿ ಸಂಜೆ 7 ಘಂಟೆಯಾಗುತ್ತಲೇ ಜನರು ತಮ್ಮೆಲ್ಲ ಕೆಲಸ–ಮನರಂಜನೆ ಬದಿಗೊತ್ತಿ ಮೈದಾನದೆಡೆಗೆ ಮಂತ್ರ ಮುಗ್ಧರಾಗಿ ಸಾಗುತ್ತಿದ್ದರು. ಅಂಥದೊಂದು ಸಭೆಯಿಂದಲೇ ಆ ಸಭೆಯನ್ನು ಆಕರ್ಷಿಸಿದ್ದ, ಧೀಮಂತವಾಣಿಯಿಂದಲೇ ಪ್ರಭಾವಿತನಾಗಿ ಅನುಯಾಯಿಯಾದವರಲ್ಲಿ ನಾನು ಒಬ್ಬ. ಪುರಾಣ–ಕೀರ್ತನ–ಪ್ರವಚನಗಳೆಂದರೆ ಬೇಸರದ ಬುಗ್ಗೆಗಳೆಂದು ಜನರು ಅದೂ ಯುವಜನತೆ ಭಾವಿಸಿ ಮೂಗೆಳೆಯುವ ಕಾಲದಲ್ಲಿ ಪೂಜ್ಯ ಲಿಂಗಾನಂದ ಸ್ವಾಮಿಗಳು ಪ್ರವಚನದ ಮೂಲಕವೇ ಜನರನ್ನು ಆಕರ್ಷಿಸಿದರು, ಚಿಂತನೆಗೆ ಪ್ರೇರೇಪಿಸಿದರು. ಅಸ್ಖಲಿತ–ವಾಣಿ, ಅಸಾಧಾರಣ ವಾಕ್ಪಟುತ್ವ, ಆತ್ಮವಿಶ್ವಾಸ ತುಂಬಿದ ನಿಲುವು, ಸ್ಪಷ್ಟ ತಾತ್ವಿಕ ಮತ್ತು ತಾರ್ಕಿಕ ವಿಚಾರಧಾರೆಯಿಂದ ಕೇಳುಗನನ್ನು ಮಂತ್ರ ಮುಗ್ಧ ಮಾಡುತ್ತಿದ್ದ ಪೂಜ್ಯ ಸ್ವಾಮೀಜಿ ಪ್ರವಚನ ಪಿತಾಮಹರೆಂಬ ಅನ್ವರ್ಥ ನಾಮ ಪಡೆದರು. ನಿಂತ ನೀರಾಗದೆ ಹರಿಯುವ ನದಿಯಾಗಿ ಕರ್ನಾಟಕ ರಾಜ್ಯದೆಲ್ಲೆಡೆ, ಗಡಿ ನಾಡಿನಲ್ಲಿಯೂ ಜ್ಞಾನವಾಹಿನಿಯಾಗಿ ಸಂಚರಿಸಿ ಧರ್ಮ ಜಾಗೃತಿಯನ್ನು ಉಂಟು ಮಾಡಿದರು. ಪೂಜ್ಯ ಸ್ವಾಮೀಜಿ ಇದೇ ಜೂನ್ 30 ರಂದು ಹಿರಿಯೂರಿನಲ್ಲಿ ಪ್ರವಚನ ಕಾಯಕದಲ್ಲಿ ನಿರತರಾಗಿರುವಾಗಲೇ, ಮಧ್ಯಾಹ್ನ ಸದ್ಭಕ್ತರೊಡನೆ ಮಾತನಾಡುತ್ತ ಕುಳಿತಿರುವಾಗಲೇ ಕ್ಷಣಾರ್ಧದಲ್ಲೇ ನಗುನಗುತ್ತಾ ಲಿಂಗೈಕ್ಯರಾದರು.

ಪೂಜ್ಯರ ಅಭಿಮಾನಿಗಳು ಇದೇ 30–7–1995 ರಂದು ಬೆಂಗಳೂರು ನಗರದ ಬಸವ ಗಂಗೋತ್ರಿಯಲ್ಲಿ ಲಿಂಗೈಕ್ಯರ ಸಂಸ್ಮರಣೋತ್ಸವವನ್ನು ಏರ್ಪಡಿಸಿ ಅಗಲಿದ ಚೇತನಕ್ಕೆ ನಮನಗಳನ್ನು ಸಲ್ಲಿಸುತ್ತಿದ್ದಾರೆ.

ಬಿಜಾಪುರ ಜಿಲ್ಲೆ ಬರಗಾಲದ ಜಿಲ್ಲೆ ಎಂದು ಹೆಸರಾದರೂ ಸಾಂಸ್ಕೃತಿಕ, ಧಾರ್ಮಿಕ ಸಂಪತ್ತಿನಲ್ಲಿ ಹಿಂದೆ ಬಿದ್ದಿಲ್ಲ. ಭಾರತದ ಮೊಟ್ಟ ಮೊದಲ ಸ್ವತಂತ್ರ ವಿಚಾರವಾದಿ ಬಸವಣ್ಣನವರನ್ನು ತನ್ಮೂಲಕ ವಚನ ಸಾಹಿತ್ಯಶ್ರೀಯನ್ನು ನೀಡಿತು. ಕಲ್ಯಾಣ ಕ್ರಾಂತಿಯ ನಂತರ ಅಂಥ ವಚನ ಸಾಹಿತ್ಯವು ಕಾನನದ ಅಡಗುತಾಣ ಸೇರಿ ಗುಪ್ತ–ಗಾಮಿನಿಯಾಯಿತು. ಮೂಢ ಭಕ್ತರ ಜಗುಲಿ ಕಟ್ಟೆಯನ್ನೇರಿ ಗಾಳಿ ಬೆಳಕು ಕಾಣ–ದಾಯಿತು. ಅಂಥ ಸನ್ನಿವೇಶದಲ್ಲಿ ಅದನ್ನು ಬೆಳಕಿಗೆ ತಂದ ವಚನ ಪಿತಾಮಹ ಲಿಂ॥ ಶರಣ. ಫ ಗು. ಹಳಕಟ್ಟಿಯವರು ಅದೇ ಬಿಜಾಪುರ ಜಿಲ್ಲೆಯವರೇ. ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ಮಣಿಗವಳ್ಳಿ (ಮನಗೂಳಿ) ಯ ಮಾಣಿಕ್ಯವಾಗಿ ಮಲ್ಲಪ್ಪ ಕಪ್ಪರದ ಮತ್ತು ಕಲ್ಲಮ್ಮನವರ ಚೊಚ್ಚಲು ಮಗನಾಗಿ ಜನಿಸಿದವರು ಸಂಗಮೇಶ.

ಬಡತನದ ಕುಲುಮೆಯಲ್ಲಿ ಬೆಂದರೂ ಸಾಹಸ ಮನೋಭಾವದ ವ್ಯಕ್ತಿಯಾಗಿ, ಕ್ರೀಡಾಪಟುವಾಗಿ, ಬುದ್ಧಿವಂತ ಮತ್ತು ಆದರ್ಶ ವಿದ್ಯಾರ್ಥಿಯಾಗಿ ಸಂಗಮೇಶ ಬಿಜಾಪುರ, ಬಾಗಲಕೋಟೆಗಳಲ್ಲಿ ಶಾಲಾ ಶಿಕ್ಷಣ ಮುಗಿಸಿ ಕಾಲೇಜು ಶಿಕ್ಷಣಕ್ಕೆ ಬೆಳಗಾಂವ ನಗರ ಸೇರಿದರು. ಆಗ ಬಿಜಾಪುರ ಜಿಲ್ಲೆಯಲ್ಲಿ ಹರಡಿದ್ದ ಕಮ್ಯುನಿಷ್ಟ ವಿಚಾರಧಾರೆಯ ಪಕ್ಕಾ ಅನುಯಾಯಿಯಾಗಿ ಕಾಮ್ರೇಡ್ ಆದ ಸಂಗಮೇಶ ಧಾರ್ಮಿಕ ಮೌಲ್ಯಗಳತ್ತ ಆಕರ್ಷಿತರಾದುದು ಬಿ. ಎ. ಆನರ್ಸ್ ಓದುವಾಗ ಫಿಲಾಸಫಿ ಅಧ್ಯಾ–ಪಕ ಡಾ॥ ರಾಜಗೋಪಾಲರಿಂದ. ನಾಸ್ತಿಕತ್ವದ ನೆಲೆಯ ಮೇಲೆ ನಿಂತು ಪ್ರಶ್ನಿಸಿ ದೇವರು–ಧರ್ಮಗಳನ್ನು ಅಲ್ಲಗಳೆಯುತ್ತಿದ್ದ ಸಂಗಮೇಶನನ್ನು ನಿಜ ದೇವರ ಕಲ್ಪನೆ ನೀಡಿ ಪರಿವರ್ತಿಸಿದವರು ಡಾ॥ ರಾಜಗೋಪಾಲರವರು. ಇದು ಸಂಗಮೇಶರ ಜೀವನದಲ್ಲಿ ಮಹತ್ವದ ತಿರುವು. ಕಾರ್ಲ್‌ಮಾರ್ಕ್ಸ್‌ನ ಭಾವಚಿತ್ರ ಸರಿದು ಕ್ರಾಂತಿಯೋಗಿ ಬಸವಣ್ಣನವರ ಚಿತ್ರ ಗೋಡೆಯನ್ನಲಂಕರಿಸಿತು.

ದಾರ್ಶನಿಕ ಅನುಭವ ಆಯ್ಕೆ

1955 ಏಪ್ರಿಲ್ 25, ಬಸವ ಜಯಂತಿ. ಪರೀಕ್ಷೆ ಬರೆದು ಮುಂಗಾಣದ ಭವಿಷ್ಯದ ಚಿಂತೆಯಲ್ಲಿ ಕುಳಿತ ಸಂಗಮೇಶನಿಗೆ **ಬಸವಣ್ಣನವರ ದರ್ಶನವಾಯಿತು. "ನೀನು ನನ್ನ ತತ್ತ್ವಗಳ ಪ್ರಚಾರಕ್ಕಾಗಿ ತ್ಯಾಗಜೀವನ ಸ್ವೀಕರಿಸಬೇಕೆಂಬ" ಆದೇಶವೂ** ಆಯಿತು. ಮಂತ್ರಮುಗ್ಧನಾದ ಸಂಗಮೇಶ ಮಾತುಕೊಟ್ಟದ್ದೂ ಆಯಿತು. ಸರಕಾರಿ ಪ್ರೌಢಶಾಲೆಯಲ್ಲಿ ಶಿಕ್ಷಕ ಹುದ್ದೆಯೂ ಸಿಕ್ಕಿತು. ಆದರೆ

ವಾಗ್ದಾನವು ಅಂತರಂಗದಲ್ಲಿ ಮೊರೆಯುತ್ತಿತ್ತು. ಅದೇ ಸನ್ನಿವೇಶದಲ್ಲಿ ಬಿಜಾಪುರದ ಜ್ಞಾನ ಯೋಗಾಶ್ರಮದ ಪೂಜ್ಯ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿಯವರಿಂದ ಇಷ್ಟಲಿಂಗ ದೀಕ್ಷೆಯಾಯಿತು. ಎಂ.ಎ ತತ್ತ್ವಜ್ಞಾನ ಓದಬೇಕೆಂಬ ಆಕಾಂಕ್ಷೆಯಿಂದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸೇರಿದರೂ ಆರ್ಥಿಕ ಅನಾನುಕೂಲತೆಯಿಂದ ಓದಲಾಗಲಿಲ್ಲ. ಅಷ್ಟರಲ್ಲಿ ಬಸವಣ್ಣನವರಿಗೆ ಕೊಟ್ಟ ವಾಗ್ದಾನದ ಮೊರೆತ ತೀವ್ರವಾಗಿ ಒಂದು ದಿನ ಸಂಗಮೇಶ ಜ್ಞಾನಸನ್ಯಾಸವನ್ನು ಸ್ವೀಕರಿಸಿದರು. 1956 ನೆಯ ಇಸವಿ ನವೆಂಬರ 19 ರಂದು ಕಾಷಾಯ ವಸ್ತ್ರಗಳನ್ನು ಧರಿಸಿದರು. ಈ ಹೊತ್ತಿಗಾಗಲೇ ವಚನ ಸಾಹಿತ್ಯದ ಆಳವಾದ ಅಧ್ಯಯನದಿಂದ ಇಷ್ಟಲಿಂಗದ ಮಹತ್ವ, ಅದರ ವೈಜ್ಞಾನಿಕತೆ ಮನದಟ್ಟಾಗಿ ಅದರ ಪ್ರಚಾರಕ್ಕೆಂದೇ ಮೀಸಲಿಟ್ಟ ಬದುಕಿನಿಂದ ಲಿಂಗಾನಂದ ಸ್ವಾಮಿಗಳೆಂದು ಹೆಸರಿಟ್ಟುಕೊಂಡು, ಕಾಷಾಯ ಧರಿಸಿ ಚರಜಂಗಮರಾಗಿ ಸಂಚರಿಸುತ್ತ ಧರ್ಮಪ್ರಚಾರಕ್ಕೆ ಅಣಿಯಾದ ಲಿಂಗಾನಂದ ಸ್ವಾಮಿಗಳು 1995 ಜೂನ 30 ರ ವರೆಗೆ ಅಖಂಡವಾಗಿ, ಅವಿಶ್ರಾಂತವಾಗಿ ಜ್ಞಾನಗಂಗೆಯಾಗಿ ಹರಿದಿದ್ದಾರೆ. ಸುತ್ತೂರು ಶಿವರಾತ್ರೀಶ್ವರ ಸ್ವಾಮಿಗಳಿಂದ 1961 ರ ಅಗಸ್ಟ 7 ನೆಯ ದಿನಾಂಕದಂದು ಕ್ರಿಯಾಸನ್ಯಾಸ ಅರ್ಥಾತ್ ಜಂಗಮ ದೀಕ್ಷೆ ಪಡೆದು ಸದ್ಗುರು ಲಿಂಗಾನಂದ ಸ್ವಾಮಿಗಳಾಗಿದ್ದಾರೆ.

ಕೂಡಲ ಸಂಗಮ ಕ್ಷೇತ್ರವನ್ನು ಸರ್ವಾಂಗೀಣವಾಗಿ ಬೆಳೆಸಬೇಕೆಂದು ಬಸವ ಧರ್ಮ ಪೀಠ ಟ್ರಸ್ಟ ಅನ್ನು 1987 ರಲ್ಲಿ ಸ್ಥಾಪಿಸಿದ ಸ್ವಾಮೀಜಿಯವರು 1992 ರಲ್ಲಿ ಬಸವ ಧರ್ಮದ ಮಹಾಜಗದ್ಗುರು ಪೀಠದ ಪ್ರಥಮ ಅಧಿಕಾರಿಯಾಗಿ ಪೀಠಾರೋಹಣ ಮಾಡಿದರು.

ಅಡಿಯ ಇಟ್ಟು ನಡೆದಲ್ಲೆಲ್ಲ
ದೀಪ ಹಚ್ಚಿ ಬಂದಿರಿ.
ಬಸವ ಭಾನು ಕ್ರಾಂತಿ ಉಷೆಯು
ಆಗಿ ಮುಂದೆ ನಡೆದಿರಿ.

ಎಂಬಂತೆ ಎಲ್ಲಿ ಹೋದಲ್ಲಿ ಜನರ ಮತಿಮನಗಳಲ್ಲಿನ ಅಜ್ಞಾನ ಕತ್ತಲೆಯ ಕಳೆಯಲು ಕಥಾ ಶೈಲಿಯನ್ನು ಹಿಡಿಯದೆ ಪಾರಂಪರಿಕ ಅಧ್ಯಾತ್ಮ, ಆಧುನಿಕ ವಿಜ್ಞಾನಗಳೆರಡನ್ನೂ ಸಮರಸಗೊಳಿಸಿದರು. ಅವರ ಜ್ಞಾನ ಭಂಡಾರದ ಆಳ-ಹರಹುಗಳು ವಿಸ್ತೃತ. ಧರ್ಮ-ಆಧ್ಯಾತ್ಮ-ವಿಜ್ಞಾನ-ಮನೋವಿಜ್ಞಾನ-ತರ್ಕ-ಲೋಕಜ್ಞಾನ ಇವು ಕೇಳುಗನ ಮುಂದೆ ಹೊಸಲೋಕವೊಂದನ್ನು ತೆರೆದಿಡುತ್ತಿದ್ದವು. ಪೂಜ್ಯರ ಪ್ರವಚನ ವಿಶ್ವಕೋಶವೊಂದನ್ನು ತೆರೆದಿಟ್ಟಂತೆ ಆಗುತ್ತಿತ್ತು. ಒಂದು ಊರಿನಲ್ಲಿ 40 ದಿವಸಗಳಿಂದ 60 ದಿವಸಗಳವರೆಗೆ ದಿನಾಲೂ ಎರಡು ತಾಸು ನಿರರ್ಗಳವಾಗಿ

ಪ್ರವಚನವಾದರೂ ಒಳಗಣ ವಿಷಯ ಪುನರಾವರ್ತನೆಯಾಗುತ್ತಿರಲಿಲ್ಲ. ಹೀಗಾಗಿ ಒಂದು ದಿನ ಆಕಸ್ಮಿಕವಾಗಿಯಾಗಲೀ, ಉದ್ದೇಶಪೂರ್ವಕವಾಗಿಯಾಗಲೀ ಬಂದ ಕೇಳುಗ ಇನ್ನೆಂದೂ ತಪ್ಪಿಸುತ್ತಿರಲಿಲ್ಲ. ಅದಕ್ಕೆಂದೇ ಪೂಜ್ಯ ಸ್ವಾಮೀಜಿ ಹೇಳುತ್ತಿದ್ದರು."ನೀವು ಒಂದು ದಿನ ಕರೆತನ್ನಿ. ನಂತರ ಅವರು ಎಂದೂ ತಪ್ಪದೇ ಬರುವಂತೆ ಮಾಡುವುದು ನನ್ನ ಜವಾಬ್ದಾರಿ." ಅಹುದು, ಒಮ್ಮೆ ಕೇಳಿ ಪೂಜ್ಯರ ಜ್ಞಾನ ವೈಭವ ದರ್ಶಿಸಿದ ವ್ಯಕ್ತಿ ಮತ್ತೆಂದೂ ತಪ್ಪಿಸುತ್ತಿರಲಿಲ್ಲ. ಉಳಿದ ಅನೇಕ ಗುರುಗಳಂತೆ ಪ್ರಶ್ನೆ ಕೇಳಿದಾಗ ಬೇಸರಿಸದೆ, ಹಿಂಜರಿಯದೆ, ಕೋಪಗೊಳ್ಳದೆ ಲೀಲಾಜಾಲವಾಗಿ ಉತ್ತರಿಸುತ್ತಿದ್ದರು. ಸಂವಾದಕ್ಕೆ ಜನರನ್ನು ಆಹ್ವಾನಿಸುತ್ತಿದ್ದರು. ಧಾರ್ಮಿಕ-ತಾತ್ವಿಕ ಸಂದೇಹಗಳನ್ನು ನಿವಾರಣೆ ಮಾಡಿ ಕಳಿಸುತ್ತಿದ್ದರು. ಪೂಜ್ಯ ಸ್ವಾಮಿಗಳು ಒಂದು ಹೊಸ ವಿಧಾನದ ಪ್ರಾಯೋಜಕರಾಗಿ ಪ್ರವಚನ ಕಾಯಕದಲ್ಲಿ ಯಶಸ್ವಿಯಾದರು. ಜನರು ವೈಚಾರಿಕತೆಯ ನೆಪದಲ್ಲಿ ನಾಸ್ತಿಕತೆಯ ಹಾಳುಭಾವಿಯೊಳಕ್ಕೆ ಜಾರುವರೆಂಬ ಕಟುಸತ್ಯವನ್ನು ಅರಿತು ಅದೇ ವೈಚಾರಿಕತೆಯ ಹಿನ್ನೆಲೆಯಲ್ಲಿಯೇ ಧರ್ಮದ ಅಗತ್ಯ ಕುರಿತು ವೈಜ್ಞಾನಿಕವಾಗಿ ಪ್ರತಿಪಾದಿಸಿದರು. ಯಾವುದೇ ಗುಡಿ, ಮಠ-ಮಂದಿರಗಳಲ್ಲಿ ಪ್ರವಚನ ಮಾಡದೇ ನಗರಗಳಲ್ಲಿದ್ದ ಸಾರ್ವಜನಿಕ ಮೈದಾನಗಳಲ್ಲಿ ಪ್ರವಚನ ಆರಂಭಿಸುತ್ತಿದ್ದುದು ಪೂಜ್ಯರ ವಿಶೇಷ. ಮುಖ್ಯಕಾರಣ, ಗುಡಿ-ಮಠಗಳಿಗೆ ಬರುವವರು ಧಾರ್ಮಿಕ ಶ್ರದ್ಧಾವಂತರೇ ಇರುವರು. ಅವರಿಗೆ ಪುನಃ ಬೋಧೆ ಮಾಡುವುದರಲ್ಲಿ ವಿಶೇಷವೇನಿದೆ ? ಎಂದೆಂದೂ ಧರ್ಮದ ಬಗ್ಗೆ ಚಿಂತನೆ ಮಾಡದವರೂ ಧರ್ಮದತ್ತ ಆಸಕ್ತರಾಗಬೇಕಾದರೆ ಜ್ಞಾನಬೋಧೆಗೆ ಸಾರ್ವಜನಿಕ ಸ್ಥಳಗಳೇ ಸರಿ. ಪೂಜ್ಯರ ಈ ಲೆಕ್ಕಾಚಾರ ಸಂಪೂರ್ಣ ಸಫಲವಾಯಿತು. ಮುಮುಕ್ಷುಗಳು ಜಾತಿಮತಪಂಥ ಧರ್ಮ ಭೇದವಿಲ್ಲದೆ ಪೂಜ್ಯರ ಜ್ಞಾನದಾಸೋಹ ಶಾಲೆಯಲ್ಲಿ ನಿತ್ತಿಯ ಊಟವನ್ನುಂಡು ಧನ್ಯತಾ ಭಾವ ಹೊಂದಿದರು.

ಜನರೆಡೆಗೆ ಧರ್ಮ

ಜನರು ಧರ್ಮದ ಕಡೆಗೆ ಬರದಾಗ ಧರ್ಮವನ್ನೇ ಜನರ ಕಡೆಗೆ ಒಯ್ಯಬೇಕು ಎಂಬುದು **ಪೂಜ್ಯ ಶ್ರೀ ಜಗದ್ಗುರು ಲಿಂಗಾನಂದ ಸ್ವಾಮಿಗಳ** ಮಹಾನ್ ಮಂತ್ರವಾಗಿತ್ತು. ಯಾರೇನೂ ಆಹ್ವಾನಿಸಬೇಕೆಂದೇನಿಲ್ಲ. ಬಾಜಾಭಜಂತ್ರಿಗಳೊಡನೆ ಸ್ವಾಗತಿಸಬೇಕೆಂದಿಲ್ಲ. ಏಕಾಂಗಿಯಾಗಿ, ತಮ್ಮದೇ ಆದ ಸಿಬ್ಬಂದಿಯೊಡನೆ ಬರುತ್ತಿದ್ದರು. ಯಾರೂ ಉಚಿತವಾಗಿ ಕೊಡದೆ ಇದ್ದರೇ ಬಾಡಿಗೆ ಮನೆಯೊಂದನ್ನು ತೆಗೆದುಕೊಂಡು ಮೈದಾನವೊಂದರಲ್ಲಿ ಪ್ರವಚನ ಆರಂಭಿಸುತ್ತಿದ್ದರು.ಹೂವಿನ ತೋಟವಿದ್ದಲ್ಲಿಗೆ ಜೇನ್ನೊಣಗಳು ಧಾವಿಸುವಂತೆ ಮುಮುಕ್ಷುಗಳು, ಸತ್ಯಾನ್ವೇಷಕರು ಪೂಜ್ಯರ ವಾಣಿಯನ್ನು ಕೇಳಲು ಧಾವಿಸುತ್ತಿದ್ದರು. ಏಕಾಂಗಿಯಾಗಿ ಬಂದ ಗುರುಗಳನ್ನು

ಪ್ರವಚನ ಮುಗಿಸಿ ಬೀಳ್ಕೊಡುವಾಗ ಜನರು ಕಿಕ್ಕಿರಿದು ಸೇರುತ್ತಿದ್ದರು. ಕಿಂದರಿ
ಜೋಗಿಯಂತೆ ಪೂಜ್ಯ ಸ್ವಾಮಿಗಳು ಜನರನ್ನು ಆಕರ್ಷಿಸುತ್ತಿದ್ದರು. ದಿ. 2-7-95
ರಂದು ನಡೆದ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಗದುಗಿನ ಜಗದ್ಗುರುಗಳಾದ ಡಾ॥
ಸಿದ್ಧಲಿಂಗ ಸ್ವಾಮಿಗಳು ಮುಕ್ತಕಂಠದಿಂದ ಪ್ರಶಂಸಿಸುತ್ತ He came, he
saw, he conquered ಎಂದು ಹೇಳಿ ಪ್ರವಚನದ ಪ್ರಭಾವವನ್ನು ಕೊಂಡಾಡಿ
ದರು. ಪೂಜ್ಯ ಲಿಂಗಾನಂದ ಸ್ವಾಮಿಗಳ ಪ್ರವಚನಗಳು ಕೇಳುಗರನ್ನು ಆತ್ಮ
ನಿರೀಕ್ಷಣೆಗೆ ಒಡ್ಡಿ, ಆಂತರಿಕ ಪರಿವರ್ತನೆಗೆ ಪ್ರೇರೇಪಿಸುತ್ತಿದ್ದವು.

ಶಿಷ್ಯರ ತಂಡ

ಪೂಜ್ಯರ ಪ್ರವಚನ ಶೈಲಿಯನ್ನು ಅಳವಡಿಸಿಕೊಂಡು ಅದೇ ಸತ್ಕಾಯಕ
ದಲ್ಲಿ ಮುಂದುವರಿದಿರುವ ಅಸಂಖ್ಯಾತ ಶಿಷ್ಯವೃಂದದಲ್ಲಿ ಪೂಜ್ಯ ಶ್ರೀ ಜಗದ್ಗುರು
ಮಾತೆ ಮಹಾದೇವಿಯವರು ಅಗ್ರಗಣ್ಯರು. ಧಾರವಾಡದಲ್ಲಿ ಪ್ರಪ್ರಥಮ ಮಹಿಳಾ
ಜಗದ್ಗುರು ಪೀಠ ಸ್ಥಾಪಿಸಿ ಪೂಜ್ಯ ಲಿಂಗಾನಂದ ಮಹಾಸ್ವಾಮಿಗಳು ಮೊಟ್ಟ
ಮೊದಲನೆಯ ಸ್ತ್ರೀ ಜಗದ್ಗುರುವನ್ನಾಗಿ ಪೂಜ್ಯ ಮಾತೆ ಮಹಾದೇವಿಯವರನ್ನು
ಮಾಡಿದುದು ಧಾರ್ಮಿಕ ಜಗತ್ತಿನ ಒಂದು ವಿಕ್ರಮ. ಪೂಜ್ಯ ಮಾತೆಯವರು
ಅಪ್ರತಿಮ ಕಾರ್ಯಸಾಧಕರಾಗಿ ಕೀರ್ತಿಶಾಲಿಗಳಾಗಿರುವುದು ಎಲ್ಲರೂ ಅರಿತ ಸತ್ಯ-
ವಾಗಿದೆ. ಪೂಜ್ಯ ಲಿಂಗಾನಂದ ಮಹಾಸ್ವಾಮಿಗಳ ಪಾರ್ಥಿವ ಶರೀರವನ್ನು ಸಮಾಧಿ
ಗಿಡುವ ಮುನ್ನ ದಿ. 2-7-1995 ರಂದು ಬಸವ ಧರ್ಮ ಸಂಸತ್ ಸದಸ್ಯರು,
ರಾಷ್ಟ್ರೀಯ ಬಸವ ದಳಗಳವರು ಸೇರಿ ಬಸವ ಧರ್ಮದ ಮಹಾಜಗದ್ಗುರು ಪೀಠದ
ಎರಡನೆಯ ಅಧಿಕಾರಿಯನ್ನಾಗಿ ಪೂಜ್ಯ ಮಾತೆಯವರನ್ನು ಮತ್ತು ಸದ್ಗುರು ಮಾತೆ
ಗಂಗಾದೇವಿಯವರನ್ನು ಆಯ್ಕೆ ಮಾಡಿ ಘೋಷಿಸಿದಾಗ ಇಡೀ ಸಭೆಯು ಒಕ್ಕೊರಲಿನ
ಜಯಘೋಷ ಮಾಡಿ ಸ್ವಾಗತಿಸಿತು.

ಅಮರ ಚೇತನ

ಹಿರಿಯೂರು ನಗರದಲ್ಲಿ ಪ್ರವಚನವು ದಿನ ನಿತ್ಯ ಸಂಜೆ 7 ರಿಂದ 8-30 ರ
ವರೆಗೆ ಸಾಗಿತ್ತು. ದಿ. 30-6-1995 ರಂದು ಪೂಜ್ಯ ಗುರುಗಳು ಪ್ರಸಾದ
ಸ್ವೀಕರಿಸಿ ಆರಾಮವಾಗಿ ಅಡ್ಡಾಡುತ್ತ ಬಂದು ಕುರ್ಚಿಯ ಮೇಲೆ ಕುಳಿತರು.
ದರ್ಶನಕ್ಕೆ ಬಂದ ಶರಣರು ಹಣ್ಣು ಕೊಟ್ಟು ನಮಸ್ಕರಿಸಿದರು. ಮರುದಿನದ
ಪ್ರವಚನ ಕಾರ್ಯಕ್ರಮಕ್ಕೆ ವಿಶೇಷ ಅತಿಥಿಗಳಾಗಿ ಪೂಜ್ಯ ಶ್ರೀ ಜಗದ್ಗುರು ಮಾತೆ
ಮಹಾದೇವಿಯವರು ಬರುವುದು ಸಂಭ್ರಮದ ವಿಷಯವಾಗಿ ಸ್ವಾಗತಕ್ಕೆ ಸಿದ್ಧತೆ
ನಡೆದಿತ್ತು. ಬಂದ ಭಕ್ತರು ಅದನ್ನು ಪ್ರಸ್ತಾಪಿಸುವಾಗಲೇ, 'ಅಹುದು ಮಾತಾಜಿ
ಯವರ ಪ್ರವಚನ ಬಹಳ ಚೆನ್ನಾಗಿರುತ್ತದೆ' ಎಂದು ಹೇಳಿ, ನಗು ನಗುತ್ತಿರುವಾಗಲೇ

ಅರೆಕ್ಷಣದಲ್ಲಿ ಪ್ರಾಣಪಕ್ಷಿ ಹಾರಿಹೋಯಿತು. 'ಬಸವಾ' ಎಂಬುದೇ ಕಡೆಯ ನುಡಿ-
ಯಾಯಿತು. ಎಲ್ಲರೂ ದಿಗ್ಭ್ರಾಂತರಾಗಿ ನಿಂತು ಬಿಟ್ಟರು. ಹೀಗೆ ಪೂಜ್ಯ ಸ್ವಾಮೀಜಿ
ತಾವೂ ನಗುತ್ತ, ಇನ್ನಿತರರನ್ನು ನಗಿಸುತ್ತ ಭೌತಿಕ ಜಗತ್ತನ್ನು ತೊರೆದರು. ಇಂದು
ಸ್ಥೂಲ ಶರೀರದ ಮೂಲಕ ಅವರಿಲ್ಲ. ಆದರೆ ವಾಙ್ಮಯ ಶರೀರಿಯಾಗಿ ಅವರಿದ್ದಾರೆ.
ಪ್ರವಚನಗಳ ಮೂಲಕ ನೀಡಿದ ಸಂದೇಶ, ಕಲಿಸಿದ ಸಂಸ್ಕೃತಿಯ ರೂಪದಲ್ಲಿ ಬಸವ
ಭಕ್ತರ ಮನೆಯಲ್ಲಿದ್ದಾರೆ. ದೃಶ್ಯ-ಶ್ರಾವ್ಯ ಸುರುಳಿಗಳ ಮೂಲಕ, ಧ್ವನಿ ಸುರುಳಿಯ
ಮೂಲಕ ಅಮರ ಚೇತನರಾಗಿದ್ದಾರೆ.

ಸಾಧನೆ

ಓರ್ವ ವ್ಯಕ್ತಿ ಸತ್ಸಂಕಲ್ಪದಿಂದ ಹೊರಟಾಗ ಏನೆಲ್ಲವನ್ನೂ ಸಾಧಿಸಲು ಸಾಧ್ಯ
ಎಂಬುದಕ್ಕೆ ಪೂಜ್ಯ ಶ್ರೀ ಲಿಂಗಾನಂದ ಸ್ವಾಮೀಜಿಯವರ ಬದುಕೇ ಸಾಕ್ಷಿ. ಇಂದು
ಅವರ ಮೇಧಾವಿ ಶಿಷ್ಯರು, ಸದ್ಭಕ್ತರು ಎಲ್ಲರೂ ಸಹಾಯಕರಾಗಿ ಆ ಸಾಧನೆ-
ಯಾಗಿದ್ದರೂ ಮೊದಲ ಸಂಕಲ್ಪ ಪೂಜ್ಯ ಸ್ವಾಮೀಜಿಯವರದು ಎಂಬುದರಲ್ಲಿ
ಸಂದೇಹವಿಲ್ಲ. ವಿಶ್ವಕಲ್ಯಾಣ ಮಿಷನ್ ಒಂದು ಬೃಹತ್ ಸಂಸ್ಥೆಯಾಗಿ ಬೆಳೆದಿದ್ದು,
ನೂರಾರು ಧಾರ್ಮಿಕ ಗ್ರಂಥಗಳನ್ನು ಪ್ರಕಟಿಸಿದೆ. ಆಡಿಯೊ-ವಿಡಿಯೋ ಕೆಸೆಟ್ಟು
ಗಳನ್ನು ಸಿದ್ಧಪಡಿಸಿದೆ. ನಾಡಿನಾದ್ಯಂತ ವಿಶ್ವಧರ್ಮ ಪ್ರವಚನಗಳನ್ನು ಏರ್ಪಡಿಸು-
ವುದೇ ಅಲ್ಲದೇ ವಾಹನಗಳನ್ನು ಕೊಟ್ಟು ಧರ್ಮ ಪ್ರಚಾರಕರನ್ನು ಹಳ್ಳಿ ಹಳ್ಳಿ
ಗಳಿಗೂ ಸಾಹಿತ್ಯ ಪ್ರಚಾರಕ್ಕೆಂದು ಕಳಿಸುತ್ತಿರುತ್ತದೆ. ಬೆಂಗಳೂರು-ಮೈಸೂರು
ಹೆದ್ದಾರಿಯಲ್ಲಿ ಬೆಂಗಳೂರಿನಿಂದ 21 ಕಿ. ಮೀ ದೂರದಲ್ಲಿರುವ ಬಸವ ಗಂಗೋತ್ರಿ
ಎಂಬಲ್ಲಿ 101 ಅಡಿ ಎತ್ತರದ ಐಕ್ಯಮಂಟಪ ಮಾಡಿ, ಅದರಲ್ಲಿ 65 ಅಡಿ ಎತ್ತರದ
ಶ್ರೀ ಬಸವಣ್ಣನವರ ಮೂರ್ತಿಯನ್ನು ನಿರ್ಮಿಸುವ ಯೋಜನೆಯನ್ನು ಹಮ್ಮಿ
ಕೊಂಡಿದೆ.

ಪೂಜ್ಯ ಸ್ವಾಮೀಜಿಯವರು 1987 ರಲ್ಲಿ ಬಾಗಲಕೋಟೆಗೆ ವಿಶ್ವಧರ್ಮ
ಪ್ರವಚನ ಮಾಡಲು ಬಂದು, ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ
ಸಂಗಮವು ಯಾವುದೇ ಬೆಳವಣಿಗೆ ಹೊಂದದೆ ಇರುವುದು ನೋಡಿ, ಬಸವ
ಧರ್ಮ ಪೀಠ ಟ್ರಸ್ಟ್ ಅನ್ನು ರಚಿಸಿ ಕಾರ್ಯೋನ್ಮುಖರಾದರು. 8 ವರ್ಷಗಳ
ಅವಧಿಯಲ್ಲಿ ಈ ಸಂಸ್ಥೆಯು ಬೆಳೆದಿರುವ ವೇಗವನ್ನು ಗಮನಿಸಿದರೆ ಆಶ್ಚರ್ಯವಾ
ಗದೇ ಇರದು. 50 ಕೋಣೆಗಳ ಅತಿಥಿಗೃಹ, 16 ಜನ ಶರಣರ ಸುಂದರ ಮೂರ್ತಿ-
ಮಂಟಪಗಳು, ಶ್ರೀ ಬಸವೇಶ್ವರ ಧ್ಯಾನಮಂಟಪ ಒಂದೆ ಎರಡೇ. ನೋಡಿದರೆ
ಮೈ ಮನಪುಳಕಗೊಳ್ಳುತ್ತವೆ. ಪ್ರತಿವರ್ಷವೂ ಜನವರಿ 12 ರಿಂದ 15 ರ ವರೆಗೆ
ನಡೆಯುವ ಶರಣ ಮೇಳವಂತೂ ಒಂದು ಅದ್ಭುತ ಪ್ರಸಂಗ. 1931 ನೆಯ ಇಸವಿ
ಸೆಪ್ಟಂಬರ 14 ಗಣೇಶ ಚೌತಿಯಂದು ಜನಿಸಿದ ಸ್ವಾಮೀಜಿ 64 ವರ್ಷಗಳನ್ನು
ಪೂರೈಸಲಿದ್ದರು. ಸಮಾಜಕ್ಕೆ, ಭಕ್ತವೃಂದಕ್ಕೆ ಅವರ ಇರುವು, ಮಾರ್ಗದರ್ಶನ

ಇನ್ನೂ ಅವಶ್ಯಕ ಎನಿಸುವಾಗಲೇ ಅವರು ಮರ್ತ್ಯದ ಬಾಳ್ವೆಗೆ ಮಂಗಲ ಹಾಡಿದ್ದು ಅಪಾರ ನಷ್ಟವನ್ನುಂಟು ಮಾಡಿದೆ. ಇದೆಲ್ಲ ದೇವಲೀಲೆ. ಸೃಷ್ಟಿಕರ್ತನ ಆದೇಶವನ್ನು ಮೀರುವವರಾರು?. **ಪೂಜ್ಯ ಶ್ರೀ ಮಹಾ ಜಗದ್ಗುರು ಲಿಂಗಾನಂದ ಸ್ವಾಮಿಗಳು** ನಮ್ಮಂತಹ ಅಸಂಖ್ಯಾತರ ಹೃದಯಗಳಲ್ಲಿ ನೆಟ್ಟ ಆದರ್ಶ ಮೌಲ್ಯಗಳ ಸಸಿಗಳನ್ನು ಬೆಳೆಸುವ ಸಂಕಲ್ಪದೊಡನೆ ಅಗಲಿದ ಅವರ ಆತ್ಮಕ್ಕೆ ಚಿರಶಾಂತಿ ಕೋರೋಣ.

★★

— ಜಗದ್ಗುರು ಲಿಂಗಾನಂದರು ಲಿಂಗೈಕ್ಯರಾದ ಸಮಯ —

ಲಿಂಗಾನಂದ ಜಗದ್ಗುರುವೆ, ನಿಮ್ಮ ಸ್ಮರಣೆ ಮಾಡುವೆ
ನಿಮ್ಮಂತ್ಯಕ್ರಿಯದ ದರ್ಶನಕೆ ಸಂಗಮಕೆ ಬಂದಿರುವೆ ||ಪ||

ಹೃದಯ ಕಮಲದಲ್ಲಿ ನಿಮ್ಮ ನೆನಹು ತುಂಬಿರುವೆ
ಜ್ಞಾನದಾರುತಿ ನಿಮಗೆ ನಿರುತವು ಬೆಳಗುವೆ ||ಅ ಪ.||

ನಿಮ್ಮ ಊರು ಗುಡದಿನ್ನಿ ಬೀಳ್ಗಿ ತಾಲೂಕಿನಲ್ಲಿಹುದು
ನಿಮ್ಮ ತಾಯಿ ತವರೂರು ಮನಗೂಳಿಯಾಗಿಹುದು ।
ಮನಗೂಳಿಯೋಳ್ ಪ್ರಾಥಮಿಕ ಅಭ್ಯಾಸ ಮುಗಿಸಿದಿರಿ
ಹೆಚ್ಚಿನ ಅಭ್ಯಾಸವನ್ನು ಶಹರದೊಳ್ ಮುಗಿಸಿರುವಿರಿ ||೧||

ನಿಮ್ಮ ಮೊದಲಿನ ಹೆಸರು ಸಂಗಮೇಶ ಎಂದಿತ್ತು
ಪರಬ್ರಹ್ಮ ಜ್ಞಾನ ಪಡೆದು ಲಿಂಗಾನಂದ ನೀವಾದಿರಿ ।
ಕಪ್ಪರದ ಲಿಂಗವಂತ ಮನೆತನದೊಳ್ ಜನಿಸಿದಿರಿ
ಬಸವ ತತ್ತ್ವ ಜಗಕೆ ಬೀರಿ ಜಗದ್ಗುರು ನೀವಾದೀರಿ ||೨||

ಅಧ್ಯಾತ್ಮ ತತ್ವದೊಳು ಪರಿಣತರು ನೀವಾದಿರಿ
ಸಂಗಮದೊಳ್ ಬಸವ ಧರ್ಮ ಪೀಠವನ್ನು ಸ್ಥಾಪಿಸಿದಿರಿ ।
ಎಂಟುವರ್ಷ ಶರಣ ಮೇಳ ಸಂಗಮದೊಳ್ ನಡಿಸಿದಿರಿ
ಲಕ್ಷಾಟ್ಲಿ ಶರಣರು ಬರುವಂತೆ ಮಾಡಿದಿರಿ ||೩||

ಬಸವ ಧರ್ಮ ಪೀಠಕ್ಕೆ ಮೊದಲಿನ ಜಗದ್ಗುರು ಆದಿರಿ
ಹನ್ನೆರಡು ತಿಂಗಳು ಪ್ರವಚನದಲ್ಲೇ ನೀವ್ ಶ್ರಮಿಸಿದಿರಿ ।
ಜನರ ತನು–ಮನಗಳನ್ನು ನೀವು ಗೆದ್ದಿರುವಿರಿ
ಪ್ರವಚನ ಮಾಡುತ ನೀವು ಲಿಂಗೈಕ್ಯರಾದಿರಿ ||೪||

ಸಂಗನ ಶರಣರ ಕಿಂಕರ
ಧರ್ಮಣ್ಣ ಪಾಟೀಲ, ಕೂಡಲ ಸಂಗಮ,

[ಬರೆದವರು ಬಾಲ್ಯದಿಂದಲೂ ಪೂಜ್ಯ ಅಪ್ಪಾಜಿಯವರನ್ನು ನೋಡಿದ್ದ ವಯೋವೃದ್ಧ ಪ್ರಾಥಮಿಕ ಶಾಲಾ ಶಿಕ್ಷಕರು.]

ಅಗಲಿದ ಮಹಾಜಗದ್ಗುರುವಿಗೆ ಅಂತಿಮ ನಮನ

- ವಿಜಯಾನಂದರು
ಗಣನಾಯಕ ಮತ್ತು ಪ್ರಧಾನ ಕಾರ್ಯದರ್ಶಿ
ರಾಷ್ಟ್ರೀಯ ಬಸವದಳ, ರಾಜ್ಯ ಸಮಿತಿ
ಬೆಂಗಳೂರು.

ದಿ. 13-1-1992 ಬಸವ ಧರ್ಮದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವ ದಿನ. ಅಂದು ಒಂದು ಬಹುದೊಡ್ಡ ಕೊರತೆ ನೀಗಿತ್ತು. ಒಂದು ಚರಿತ್ರಾರ್ಹ ಘಟನೆ ನಡೆದಿತ್ತು. ಅದುವೇ ಬಸವ ಧರ್ಮದ ಮಹಾಜಗದ್ಗುರು ಪೀಠ ಸ್ಥಾಪನೆ. ಲಿಂಗಾಯತ ಸಮಾಜದಲ್ಲಿ ಮಠ-ಪೀಠಗಳಿಗೆ ಕೊರತೆಯಿಲ್ಲ; ಆದರೆ ಲಿಂಗಾಯತ ಧರ್ಮದ ಕೇಂದ್ರಶಕ್ತಿ, ಧರ್ಮಗುರು ಬಸವಣ್ಣನವರ ಹೆಸರಿನಲ್ಲಿ ಒಂದೂ ಪೀಠವಾಗಲಿ, ಮಠವಾಗಲೀ ಇರಲಿಲ್ಲ. ಎಲ್ಲವೂ ಸ್ಥಾನಿಕ ಸಂಪ್ರದಾಯಗಳನ್ನು ಪ್ರತಿನಿಧಿಸುವ ಹೆಸರುಗಳೆ, ಮಠಗಳೆ. ಲೋಕವನ್ನು ಬೆಳಗುವ ಭಾಸ್ಕರನನ್ನು ಮರೆತು ಕೋಣೆಯಲ್ಲಿ ಉರಿಯುವ ಕೊಳವೆ ದೀಪವನ್ನೇ ಭುವನಜ್ಯೋತಿ ಎಂದಂತೆ. ಲಿಂಗವಂತ ಸಮಾಜದಲ್ಲಿ ಇರುವ ಉಪಪಂಗಡಗಳು ಗುರುತುಳಿಯದಂತೆ ಒಂದಾಗಿ ಅಖಂಡ ಶರಣ ಸಮಾಜ ರಚನೆಯಾಗಬೇಕೆಂಬ ಬಸವಾದಿ ಪ್ರಮಥರ ಆಶೋತ್ತರಕ್ಕೆ ವಿರುದ್ಧವಾಗಿ ಒಳಜಾತಿಗಳಿಗೆ ಒಂದೊಂದು ಪೀಠ, ಹಲವಾರು ಮಠಗಳು. ಧರ್ಮಗುರು ಬಸವಣ್ಣನವರ ಆಶೋತ್ತರದ ಸಾಕಾರವಾದ ಒಂದು ಪ್ರಾತಿನಿಧಿಕ ಪೀಠವಿರಲಿಲ್ಲ. ಇಂಥ ಒಂದು ಕೊರತೆಯನ್ನು ಬಸವ ಧರ್ಮ ಸಂಸತ್ ಸದಸ್ಯರ ಮತ್ತು ರಾಷ್ಟ್ರೀಯ ಬಸವ ದಳಗಳವರ ಪ್ರಾತಿನಿಧಿಕ ಸಭೆಯಲ್ಲಿ ಪ್ರಸ್ತಾಪಿಸಿ, ಬಸವ ಧರ್ಮದ ಮಹಾಜಗದ್ಗುರು ಪೀಠ ಒಂದರ ರೂಪುರೇಷೆಯನ್ನು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಪ್ರಸ್ತಾಪಿಸಿದಾಗ ಎಲ್ಲರಿಗೂ ಮೈಪುಳಕಗೊಂಡು, ಹರ್ಷೋದ್ಗಾರಗಳು ಚಿಮ್ಮಿ ಬಂದವು. ಒಕ್ಕೊರಲಿನಿಂದ ಅನುಮೋದನೆ ಮಾಡಿದುದೇ ಅಲ್ಲದೆ ಅದಕ್ಕೆ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿಯವರೇ ಸೂಕ್ತರೆಂದು ಈಗಾಗಲೇ ಅನಭಿಷಿಕ್ತ ಜಗದ್ಗುರುವಾಗಿರುವ ಅವರು ಪೀಠಾಧೀಶರಾಗುವುದು ಅತ್ಯಂತ ಅರ್ಥಪೂರಿತ ವೆಂದು ಎಲ್ಲರೂ ಧ್ವನಿಗೂಡಿಸಿದರು.

"ಹಿಂದೆ ಹತ್ತು ಮುಂದೆ ಹನ್ನೊಂದು" ಎಂಬ ವರ್ಷವು ಮಹತ್ವದ್ದೇನೋ ಎಂಬಂತೆ, ಆದಿ ಶರಣರ ಕಾಲಜ್ಞಾನದ ನುಡಿಯಂತೆ, 13-1-92ರಂದು ಬಸವ ಧರ್ಮದ ಮಹಾಜಗದ್ಗುರು ಪೀಠವು ಸ್ಥಾಪನೆಯಾಗಿ, ಅದರ ಪ್ರಥಮ

ಪೀಠಾಧೀಶರಾಗಿ ಪೂಜ್ಯ ಶ್ರೀ ಲಿಂಗಾನಂದ ಮಹಾಸ್ವಾಮೀಜಿಯವರು ಪೀಠಾರೋಹಣ ಮಾಡಿದರು. ಅಂದು ಬಸವ ಭಕ್ತರು ಒಕ್ಕೊರಲಿನಿಂದ ಹಾಡಿದರು:

ಜೈ ಗುರುವೆ ಜೈ ಗುರುವೆ ಲಿಂಗಾನಂದ ಗುರು ಜೈಜೈ
ಹಾಡುವೆವು ನಾವು ಸಂತೋಷದಿಂದ
ಶರಣರ ಬಳಗಕ್ಕೆ ಪರಮಾನಂದ
ಬಸವ ಧರ್ಮದ ಪೀಠ ಏರುತ್ತಲಿಂದು
ತಂದಿರೆಲ್ಲರಿಗೆ ಚಂದದಾನಂದ ॥
ಬಸವ ಮಹಾಮನೆಯ ಕಟ್ಟಿದಿರಿ ತಾವು
ಬಸವ ಭಕ್ತರಿಗೆಲ್ಲ ದೊರೆಕಿತು ತಾವು
ನಾವೆಲ್ಲ ಕೂಡಿ ಜಯಘೋಷ ಮಾಡಿ
ನಲಿವೆವು ನಿಮ್ಮನ್ನು ಹಾಡಿಕೊಂಡಾಡಿ ॥

(ರಚನೆ - ಅನ್ನಪೂರ್ಣಮನ್ನಾಪುರ)

ಬಸವ ಧರ್ಮೀಯರಿಗೆ ಒಂದು 'ಮೆಕ್ಕಾ' ಸಿಕ್ಕಿತ್ತು ಕೂಡಲ ಸಂಗಮದ ಆಯ್ಕೆಯಿಂದ, 'ಹಜ್' ದೊರೆತಿತ್ತು ಶರಣ ಮೇಳದ ಪರಿಕಲ್ಪನೆಯಿಂದ, ಇದೀಗ ಒಂದು ವ್ಯಾಟಿಕನ್ ತರಹ, ಪೋಪ್ ತರಹ ಮಹಾಮನೆ ಮಹಾಮಠ ಮತ್ತು ಬಸವ ಧರ್ಮದ ಮಹಾಜಗದ್ಗುರುವು ದೊರೆತಿದ್ದರು. ಎಲ್ಲರಿಗೂ ಪ್ರಿಯವಾದ ವಸ್ತುಗಳನ್ನು ತನಗಾಗಿ ಆಯ್ಕೆ ಮಾಡಿಕೊಳ್ಳುವುದು ಪರಮಾತ್ಮನ ಹವ್ಯಾಸವೇನೊ?! ಧರ್ಮಪಿತ ಬಸವಣ್ಣನವರು ಹೇಳಿಲ್ಲವೇ "ನಿಷ್ಪತ್ತಿ ಹಣ್ಣಾಗಿ, ತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ ಕೂಡಲ ಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ" ಎಂಬುದಾಗಿ, ಹಾಗೆಯೇ ನಮಗೆಲ್ಲ, ಬಸವ ಧರ್ಮ - ಲಿಂಗವಂತ ಸಮಾಜದ ಏಳಿಗೆಯ ದೃಷ್ಟಿಯಿಂದ ಇನ್ನೂ ಬೇಕು, ಇನ್ನೂ ಅವಶ್ಯ ಎನ್ನುವಾಗಲೇ ವಿಶ್ವಗುರು ಬಸವಣ್ಣನವರ ಅಚ್ಚು ಮೆಚ್ಚಿನ ಕಂದನನ್ನು ಲಿಂಗದೇವನು ಎತ್ತಿಕೊಂಡು ಬಿಡುವುದೆ?

ದಿ. 30-6-1995ರಂದು ಮಧ್ಯಾಹ್ನ 2-30ಕ್ಕೆಲ್ಲ ಹಿರಿಯೂರಿನಿಂದ ಪೂಜ್ಯ ಮಹಾಜಗದ್ಗುರುಗಳು ಕ್ರಿಯಾ ವಿಶ್ರಾಂತಿಯನ್ನೈದಿ, ಲಿಂಗದೇವನಲ್ಲಿ ಲೀನವಾದ ವಾರ್ತೆ ಬರಸಿಡಿಲಿನಂತೆ ಎರಗಿದಾಗ ನಮಗೆಲ್ಲ ಸಹಿಸಿಕೊಳ್ಳುವುದೇ ಕಷ್ಟಸಾಧ್ಯವಾಯಿತು. ಧಾರವಾಡದಲ್ಲಿ ಕಾರ್ಯಕ್ರಮ ನಿಮಿತ್ತ ಹೋಗಿ ತಂಗಿದ್ದ ಪೂಜ್ಯ ಶ್ರೀ ಜಗದ್ಗುರು ಮಾತಾಜಿಯವರಿಗೆ ತಿಳಿಸುವುದೂ ನಮ್ಮ ಪಾಲಿಗೆ

ಬಂದಿತು. ಬೆಂಗಳೂರಿನಿಂದ ನಾವೆಲ್ಲ ಧಾವಿಸಿದೆವು. ಸುದ್ದಿ ತಿಳಿದು ಸ್ವಲ್ಪ ಹೊತ್ತಿನಲ್ಲೇ ಚಿತ್ರದುರ್ಗದ ಮುರುಘಾಮಠದ ಪೂಜ್ಯ ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಶಿವಮೂರ್ತಿ ಸ್ವಾಮೀಜಿಯವರು ಆಗಮಿಸಿ, ಮಾಲಾರ್ಪಣೆ ಮಾಡಿ, ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳ ಕಾರ್ಯಬಾಹುಳ್ಯವನ್ನು ಕೊಂಡಾಡಿ, "ಪೂಜ್ಯ ಮಾತಾಜಿಯವರು ನಿರುತ್ಸಾಹಿತರಾಗುವುದು ಬೇಡ. ಅವರು ಕೈಗೊಂಡ ಎಲ್ಲ ಕಾರ್ಯಗಳಿಗೆ ಬಸವ ಗುರುವಿನ ಶ್ರೀರಕ್ಷೆ, ನಮ್ಮೆಲ್ಲರ ಬೆಂಬಲ ಸದಾ ಇದೆ. ವಿಚಾರ ಭಿನ್ನಾಭಿಪ್ರಾಯಗಳಿದ್ದರೂ ಬಸವ ಪಥಿಕರೆಲ್ಲ ಒಟ್ಟಾಗಿ ಕಾರ್ಯಮಾಡುವಾ" ಎಂದು ನೆರೆದಿದ್ದ ಶರಣ ಸಮೂಹದ ಮುಂದೆ ಮಾತನಾಡಿ ನಿರ್ಗಮಿಸಿದರು. ಜನರ ಮಹಾಪೂರವು ದರ್ಶನಕ್ಕೆ ಆಗಮಿಸತೊಡಗಿತು. ಫೋನ್ ಲೈನ್‌ಗಳು ಸರಿಯಿಲ್ಲದಿದ್ದಾಗ ವೈರ್‌ಲೆಸ್ ಮೂಲಕ ಆರಕ್ಷಕ ಇಲಾಖೆಯವರು ಎಲ್ಲೆಡೆಗೆ ಸುದ್ದಿತಲ್ಪಿಸಲು ಪ್ರಯತ್ನಿಸಿದರು. ಪೂಜ್ಯ ಮಾತಾಜಿಯವರು ಬಂದಾಗ ರಾತ್ರಿ ಒಂದು ಗಂಟೆ. ಸಮಾಧಿಯನ್ನು ಎಲ್ಲಿ ಮಾಡಬೇಕು ಎಂಬ ಆಣತಿಗಾಗಿ ಕಾಯುತ್ತಿದ್ದೆವು. ಕೂಡಲ ಸಂಗಮದಲ್ಲಿ ಅಪ್ಪ ಬಸವಣ್ಣನವರ ಸನ್ನಿಧಿಯಲ್ಲಿ, ಬಸವ ಗುರುವಿನ ಹೃದಯದ ನಂದಾದೀಪವಾಗಿ ಜೀವನವಿಡೀ ಉರಿದ ಈ ನಂದಾದೀವಿಗೆ, ಅಲ್ಲಿಯೇ ಪ್ರಕೃತಿ ಕಾಯವನ್ನು ವಿಲೀನಗೊಳಿಸಬೇಕೆಂಬ ಅಪೇಕ್ಷೆ ವ್ಯಕ್ತಪಡಿಸಿದುದನ್ನು ಪೂಜ್ಯ ಮಾತಾಜಿ ಅಭಿವ್ಯಕ್ತಗೊಳಿಸಿದರು. ಚಿತ್ರದುರ್ಗ ಮತ್ತು ಚಳ್ಳಕೆರೆಯ ಶರಣ ಬಂಧುಗಳ ಅಪೇಕ್ಷೆಯ ಮೇರೆಗೆ ಪೂಜ್ಯ ಗುರುಗಳ ಪಾರ್ಥಿವ ಶರೀರವನ್ನು ಕೊಂಡೊಯ್ದಾಗ ಎರಡೂ ಊರಿನವರು ಭವ್ಯ ಸ್ವಾಗತ - ಬೀಳ್ಕೊಡುಗೆ ನೀಡಿದರು. ಪಾದಯಾತ್ರೆಯಲ್ಲಿ ಸಾಗಿ ಬಂದು ಅಗಲಲಾರದ ಹೃದಯದಿಂದ, ಶೋಕ ತಪ್ತರಾಗಿ ಕಳಿಸಿಕೊಟ್ಟರು. ಮಧ್ಯೆ ನಾಯಕನಹಟ್ಟಿಯ ಶರಣ ಬಂಧುಗಳೂ ತಮ್ಮ ಊರಿಗೆ ಕರೆತಂದು ದರ್ಶನ ಮಾಡಿಸಬೇಕೆಂಬ ಆಸೆ ಪೂರೈಸಲಾಯಿತು. ಪೂಜ್ಯ ಅಪ್ಪಾಜಿಯವರೊಡನೆ ಕೂಡಲ ಸಂಗಮವನ್ನು ತಲ್ಪಿದಾಗ ರಾತ್ರಿ ಒಂದುಗಂಟೆ. ಆಗಲೇ ಜನರು ಎಲ್ಲೆಡೆಯಿಂದಲೂ ಧಾವಿಸಿಬಿಟ್ಟಿದ್ದರು. ಮಹಾರಾಷ್ಟ್ರ, ಆಂಧ್ರ, ತಮಿಳು ನಾಡುಗಳಿಂದ, ಕರ್ನಾಟಕದ ಮೂಲೆ ಮೂಲೆಯಿಂದೆಲ್ಲ ಸಂಗಮಿಸಿದ್ದು ಶರಣ ಮೇಳದ ನೆನಪನ್ನೇ ತರುತ್ತಿತ್ತು.

ಶರಣ ಮೇಳದಲ್ಲಿ ಹೇಗೆ ಶರಣ ಕಾರ್ಯಕರ್ತರು ಒಂದೊಂದು ಕೆಲಸ ಹಂಚಿಕೊಂಡು ಮಾಡುವರೋ, ಹಾಗೆ ಅವರವರು ಬಂದು ಆವರವರ ಕೆಲಸವಹಿಸಿಕೊಂಡು ಕಾರ್ಯೋನ್ಮುಖರಾಗಿ ಬಿಟ್ಟಿದ್ದರು. ಶರಣ ಸಹೋದರರಾದ ಬಸವಕುಮಾರ್ ಪಾಟೀಲರು ಚಿತ್ರದುರ್ಗಕ್ಕೇ ಬಂದು ನಮ್ಮೊಡನೆ ಹೆಗಲುಗೊಟ್ಟಿದ್ದರು. ನಾವು ಬರುವಷ್ಟರಲ್ಲಿ ಡಾ॥ ನಿತೀನಚಂದ್ರ ಹತ್ತೀಕಾಳ,

ಹೈದ್ರಾಬಾದಿನ ಶರಣ ಸುಭಾಷ್ ಪಾಟೀಲ ಮುಂತಾದ ಗಣನಾಯಕರು ಮಹಾಮನೆಯಲ್ಲಿ ವಿವಿಧ ಸಿದ್ಧತೆ ನಡೆಸಿದ್ದರು. ಬಸವ ಧರ್ಮಪೀಠ - ಶರಣಮೇಳಗಳು ಒಂದು ಧಾರ್ಮಿಕ ತೌರನ್ನು, ಅಣ್ಣ ತಮ್ಮ- ಅಕ್ಕತಂಗಿಯರ ಧಾರ್ಮಿಕ ಪಡೆಯನ್ನೇ ನಿರ್ಮಿಸಿವೆ. ಹೀಗಾಗಿ ಈಗ ನಾವು ಯಾರೂ ಒಂಟಿಯಲ್ಲ; ಯಾವ ಅನಾಥ ಪ್ರಜ್ಞೆಯೂ ನಮ್ಮನ್ನೀಗ ಕಾಡುತ್ತಿಲ್ಲ. ಇಂಥ ಸುಭದ್ರತೆಯ ಮನೋಭಾವ ಒದಗಿಸಿದವರು ಪೂಜ್ಯ ಅಪ್ಪಾಜಿ. ಪೂಜ್ಯ ನಿಜಗುಣಾನಂದ ಸ್ವಾಮಿಗಳು, ಶರಣ ಶಿವಣ್ಣ ಶಿರೂರು ಮುಂತಾದವರು ಅಪ್ಪಾಜಿಗೆ ಸ್ನಾನಮಾಡಿಸಿದರು; ಅಲಂಕರಿಸಿ ದರ್ಶನಕ್ಕೆ ಕುಳ್ಳಿರಿಸಿದರು. ಜನರು ದರ್ಶನಕ್ಕೆ ಮಹಾಪೂರದಂತೆ ಧಾವಿಸುತ್ತಿರುವಂತೆಯೇ ಜೇನ್ನೊಣಗಳು ಧಾವಿಸಿ ಪೂಜ್ಯ ಅಪ್ಪಾಜಿಗೆ ಹಾಕಿದ್ದ, ಹೊದ್ದಿಸಿದ ಹೂಮಾಲೆಗಳ ಮೇಲೆ ಕುಳಿತು, ಲೀಲಾನಂದದಲ್ಲಿ ಹಾರಾಡುತ್ತ ಆನಂದಿಸುವುದು ನಮಗೆಲ್ಲ ಪವಾಡ ಸದೃಶವೆನಿಸುತ್ತಿತ್ತು. ''ಇದು ಏನೋ ಸಾಂಕೇತಿಕ! ನಾನು ಎಷ್ಟು ಜನ ಸ್ವಾಮಿಗಳಿಗೆ, ಸಾಮಾನ್ಯರಿಗೆ ಅಂತಿಮ ಸಂಸ್ಕಾರ ಮಾಡಿಸಿದ್ದೇನೆ. ಎಲ್ಲೂ ಇಂಥ ಜೇನಿನ ಹಿಂಡು ನೋಡಲಿಲ್ಲ.'' ಎಂದು ಶಿವಣ್ಣನವರು ಉದ್ಗರಿಸುತ್ತಲಿದ್ದರು. ನಾವಾದರೂ ಅವುಗಳನ್ನು ಆನಂದಭಾವದ ಹಾರಾಟಕ್ಕೆ ಬಿಟ್ಟೆವೇ ವಿನಾ ಓಡಿಸಲಿಲ್ಲ. ಮಹಾತ್ಮರ ಸನ್ನಿಧಿಯಲ್ಲಿ ಕ್ರೂರ ಮೃಗಗಳು ಕ್ರಿಮಿಕೀಟಗಳು ಸಹ ತಮ್ಮ ಸ್ವಭಾವಗುಣ ಕಳೆದುಕೊಂಡು ಶಾಂತಸ್ವಭಾವ ಹೊಂದುವವು ಎಂಬುದನ್ನು ಪ್ರತ್ಯಕ್ಷ ಕಂಡೆವು. ಸಾವಿರಾರು ಜೇನ್ನೊಣಗಳು ಅಪ್ಪಾಜಿಯ ಸುತ್ತ ಹಾರಾಡುತ್ತಿದ್ದರೂ ನಮಸ್ಕರಿಸುತ್ತಿದ್ದ ಒಬ್ಬರನ್ನಾದರೂ ಕಚ್ಚಲಿಲ್ಲ.

ಪೂಜ್ಯ ಮಾತಾಜಿಯವರು ಸ್ನಾನ - ಇಷ್ಟಲಿಂಗಾರ್ಚನೆ ಪೂರೈಸಿಕೊಂಡು ಬಂದು, ಪೂಜ್ಯ ಅಪ್ಪಾಜಿಯವರ ಎಡಗೈಗೆ ಶಿವದಾರದ ಸೂತ್ರಕಟ್ಟಿ, ತಾವೂ ಸೂತ್ರ ಧರಿಸಿ ಪೂಜ್ಯರ ಇಷ್ಟಲಿಂಗಕ್ಕೆ ಅರ್ಚನೆ ಪೂರೈಸಿ ತೀರ್ಥವನ್ನು ನೀಡಿದರು; ಪಾರ್ಥಿವ ಶರೀರದ ಮೇಲೆ ತೀರ್ಥವನ್ನು ಪ್ರೋಕ್ಷಿಸಿದರು. ಇದೇನು ದೇವಲೀಲೆಯೋ! ಪೂಜ್ಯ ಮಾತಾಜಿಯವರು ''ಬಸವ ಧರ್ಮ ಸಂಸ್ಕಾರಗಳು''. ಎಂಬ ಮಹತ್ವಪೂರ್ಣ ಕೃತಿ ರಚನೆ ಮಾಡಿ, 14-1-95ರಂದು ಬಿಡುಗಡೆ ಮಾಡಿದರು. ಅದೇ ಗ್ರಂಥವನ್ನಾಧರಿಸಿ ಪೂಜ್ಯ ಗುರುಗಳ ಅಂತಿಮ ಸಂಸ್ಕಾರವನ್ನು ಅವರೇ ಪೂರೈಸುವಂತಾಯಿತು. ಶರಣ ಪೂಜೆಯ ಮಾಡಿರಿ, ಹೂವ ಸೂರ್‍ಯಾಡೋಣ, ಬೆಳಗಿರಿ ಬೆಳಗಿರಿ ಆರತಿ ಬೆಳಗಿರಿ ಹಾಡುಗಳು ಅತ್ಯಂತ ಹೃದಯ ಸ್ಪರ್ಶಿಯೂ, ಅರ್ಥಗರ್ಭಿತವೂ ಆಗಿರುವವಲ್ಲದೆ ಎಲ್ಲರ ಮನಸ್ಸನ್ನು ಮಿಡಿಯುತ್ತವೆ. ಜಯತು ಜಯತು ಲಿಂಗಾನಂದ ಸದ್ಗುರುವೆ ಎಂಬ ಮಂಗಲ ಗೀತೆಯನ್ನು ಎಲ್ಲ ಶರಣರು ಧ್ವನಿಗೂಡಿಸಿ ಹಾಡಿ ಮಂಗಲ ಮಾಡಿದಾಗ ಜನರಿಗೆ ದುಃಖವು ಒತ್ತರಿಸಿಬಂದಿತು.

ನಂತರ ಪುಷ್ಪಾಂಜಲಿ ಮಾಡಿ, ಎಲ್ಲ ಮಹಾಸ್ವಾಮಿಗಳೂ ಪತ್ರೆ - ಪುಷ್ಪಗಳನ್ನು ಪೂಜ್ಯ ಅಪ್ಪಾಜಿಯವರ ಮೇಲೆ ವೃಷ್ಟಿಸಿದರು. ಈ ಕಾರ್ಯಕ್ರಮದಲ್ಲಿ ಭಾಗಿಗಳಾದ ಮಠಾಧಿಪತಿಗಳೆಂದರೆ ಗದುಗಿನ ತೋಂಟದಾರ್ಯ ಮಠದ ಪೂಜ್ಯ ಶ್ರೀ ನಿ ಪ್ರ ಡಾ|| ಸಿದ್ಧಲಿಂಗ ಮಹಾಸ್ವಾಮಿಗಳು, ಇಳಕಲ್ ಚಿತ್ತರಗಿ ಸಂಸ್ಥಾನ ಮಠದ ಪೂಜ್ಯ ಶ್ರೀ ನಿ ಪ್ರ ಮಹಾಂತ ಸ್ವಾಮಿಗಳು, ಶ್ರೀ ಶೈಲದ ಜಗದ್ಗುರು ಸಾರಂಗಧರ ದೇಶೀಕೇಂದ್ರ ಮಹಾಸ್ವಾಮಿಗಳು, ಗುಳೇದ ಗುಡ್ಡದ ಜಗದ್ಗುರು ಬಸವರಾಜ ಸ್ವಾಮಿಗಳು, ಪೂಜ್ಯ ಶ್ರೀ ಸದ್ಗುರು ಸದಾನಂದ ಪ್ರಭು ಸ್ವಾಮಿಗಳು, ಭಾಲ್ಕಿಯ ಹಿರೇಮಠದ ಪೂಜ್ಯ ಶ್ರೀ ಮ.ಘ.ಚ. ಬಸವಲಿಂಗಪಟ್ಟಾಧ್ಯಕ್ಷರು, ಗುರುಬಸವೇಶ್ವರ ಸಂಸ್ಥಾನಮಠ ಹುಲ್ಸೂರಿನ 'ಪೂಜ್ಯ ಶ್ರೀ ನಿ ಪ್ರ ಶಿವಾನಂದ ಸ್ವಾಮಿಗಳು, ಸತ್ತಿಯ ಶ್ರೀ ಬಸವಲಿಂಗಸ್ವಾಮಿಗಳು, ಯರಗಟ್ಟಿಯ ಪೂಜ್ಯ ಶ್ರೀ ನಿ ಪ್ರ ಮಹಾಂತ ಸ್ವಾಮಿಗಳು ಮರೇಗುದ್ದಿಯ ರಾಜಶೇಖರ ದೇಶಿಕೇಂದ್ರ ಸ್ವಾಮಿಗಳು, ಕೆ.ಆರ್. ಪೇಟೆಯ ಶ್ರೀ ಚಂದ್ರಶೇಖರ ಸ್ವಾಮಿಗಳು. ಸಿಂದಗಿಯ ಶ್ರೀ ಶಾಂತವೀರ ಸ್ವಾಮಿಗಳು, ಬಿದರ ಕುಂದಿಯ ಶಿವಕುಮಾರ ಸ್ವಾಮಿಗಳು, ರೇಕುಳಗಿ ಬಸವಾನಂದ ಸ್ವಾಮಿಗಳು, ಕಾದರವಳ್ಳಿಯ ವಶಿಷ್ಠಾಶ್ರಮದ ಮಹೇಶ್ವರ ಶ್ರೀಗಳು, ಪೂಜ್ಯ ಶ್ರೀ ಶಿವಯ್ಯ ಸ್ವಾಮಿಗಳು, ಜ್ಞಾನಯೋಗಾಶ್ರಮದ ಶ್ರೀ ಶ್ರದ್ಧಾನಂದ ಸ್ವಾಮಿಗಳು ಅವರ ಸಹಚರರು, ಶ್ರೀ ಶಾಂತಗಂಗಾಧರ ಸ್ವಾಮಿಗಳು ಇನ್ನೂ ಮುಂತಾಗಿ ಅನೇಕರು ಆಗಮಿಸಿದ್ದರು.

ಶ್ರದ್ಧಾಂಜಲಿ ಮತ್ತು ಉತ್ತರಾಧಿಕಾರಿಯ ಆಯ್ಕೆ

ಪುಷ್ಪಾಂಜಲಿಯ ನಂತರ ಪೂಜ್ಯ ಗುರುಗಳಿಗೆ ಶ್ರದ್ಧಾಂಜಲಿ ಕಾರ್ಯಕ್ರಮ. ಗಣನಾಯಕ ಶರಣ ಬಸವ ಕುಮಾರ್ ಪಾಟೀಲರು ಸಭಾ ನಿರ್ವಹಣೆ ಮಾಡಿದರು. ಶ್ರೀಶೈಲ ಸಾರಂಗಧರೇಶ್ವರ ಜಗದ್ಗುರುಗಳು, ಸತ್ತಿಯ ಬಸವಲಿಂಗಸ್ವಾಮಿಗಳು, ಭಾಲ್ಕಿ ಶ್ರೀ ಮ.ಘ.ಚ. ಬಸವಲಿಂಗಪಟ್ಟಾಧ್ಯಕ್ಷರು, ಶ್ರೀಗುರು ಬಸವೇಶ್ವರ ಮಠದ ಶಿವಾನಂದ ಸ್ವಾಮಿಗಳು, ಶ್ರೀ ಶ್ರದ್ಧಾನಂದ ಸ್ವಾಮಿಗಳು, ಶ್ರೀ ಶಾಂತಗಂಗಾಧರ ಸ್ವಾಮಿಗಳು ಮಾತನಾಡಿ ಪೂಜ್ಯ ಶ್ರೀ ಲಿಂಗಾನಂದ ಮಹಾಸ್ವಾಮಿಗಳ ವಾತ್ಸಲ್ಯ, ಶಿಷ್ಯರನ್ನು ತರಬೇತಿಗೊಳಿಸಿದ ರೀತಿ, ಧೈರ್ಯ ಛಲವಂತಿಕೆ ಕುರಿತು ವಿವರಿಸಿದರು. ಭಾಲ್ಕಿಯ ಬಸವಲಿಂಗ ಪಟ್ಟದ್ದೇವರು ಶ್ರೀ ಚನ್ನಬಸವ ಪಟ್ಟದ್ದೇವರ ಶಿಷ್ಯರಾಗಿ ಉತ್ತರಾಧಿಕಾರಿಯಾಗಿದ್ದರೂ, 8ನೆಯ ತರಗತಿಯಲ್ಲಿದ್ದಾಗ ಕೇಳಿದ ಅಪ್ಪಾಜಿಯವರ ಪ್ರವಚನ ತಮ್ಮನ್ನು ಧರ್ಮದತ್ತ ಸೆಳೆಯಿತು; ಬಸವ ಧರ್ಮದಲ್ಲಿ ಆಳವಾದ ಶ್ರದ್ಧೆ ಹುಟ್ಟಿಸಿತು. ಭಾಲ್ಕಿಯ ಹಿರೇಮಠಕ್ಕೆ ಆಯ್ಕೆಯಾದ ನಂತರ ಒಂದು ವರ್ಷ ಪೂಜ್ಯ ಲಿಂಗಾನಂದ ಅಪ್ಪಾಜಿಯವರ ಸನ್ನಿಧಿಯಲ್ಲಿ ಪಡೆದ ತರಬೇತಿ ತಮ್ಮನ್ನು ತಾತ್ವಿಕವಾಗಿ ಗಟ್ಟಿಗೊಳಿಸಿತು ಎಂದು ಸ್ಮರಿಸಿಕೊಂಡರು. ಬಸವ ಧರ್ಮ

ಸಮ್ಮೇಳನಕ್ಕೆ ಮೇ ತಿಂಗಳಲ್ಲಿ ಬೆಂಗಳೂರಿಗೆ ಬಂದಾಗ ತಮ್ಮ ಎರಡೂ ಪಕ್ಕಗಳಲ್ಲಿದ್ದ ಭಾಲ್ಕಿಯ ಹಿರೇಮಠ ಮತ್ತು ಹುಲಸೂರು ಮಠದ ಶ್ರೀಗಳ ಕೈಹಿಡಿದು, "ನೀವಿಬ್ಬರೂ ಬೀದರ ಜಿಲ್ಲೆಯ ಲಿಂಗಾಯತ ಸಮಾಜದ ಅವಳಿ - ಜವಳಿ ಮಕ್ಕಳಿದ್ದಂತೆ. ಚೆನ್ನಾಗಿ ಧರ್ಮಪ್ರಚಾರ ಮಾಡಿರಿ. ಬೀದರ ಜಿಲ್ಲೆ ಬಸವ ಭಕ್ತಿಯ ಭೂಮಿ; ಅದನ್ನು ಚೆನ್ನಾಗಿ ರಕ್ಷಿಸಿರಿ." ಎಂದುದನ್ನು ಸ್ಮರಿಸಿಕೊಂಡರು.

ಪೂಜ್ಯ ಶ್ರೀ ಮಹಾಂತ ಸ್ವಾಮೀಜಿಯವರು ಮಾತನಾಡಿ, "ಪೂಜ್ಯ ಲಿಂಗಾನಂದ ಮಹಾಜಗದ್ಗುರುಗಳದು ಸ್ಮರಣಾರ್ಹ ಕೊಡುಗೆ. ಅವರು ಹೋದಲ್ಲೆಲ್ಲ ಧರ್ಮ ಜಾಗೃತಿ ಮಾಡಿದರು, ಬಸವ ಭಕ್ತಿಯ ಬೀಜ ಬಿತ್ತಿದರು. ಜನ - ಮಾನಸದಲ್ಲಿ ಪರಿವರ್ತನೆ ತಂದರು; ಬಸವ ಸಾಮ್ರಾಜ್ಯವನ್ನು ಕಟ್ಟಿದರು; ಒಂದು ಹೊಸಯುಗವನ್ನೇ ನಿರ್ಮಿಸಿದರು. ಯಾವ ಎಡರು - ತೊಡರುಗಳನ್ನು ಲೆಕ್ಕಿಸದೆ ದಿಗ್ಗಜವಾಗಿ ಮುನ್ನಡೆದರು. ಅವರು ತಂದ ಪರಿವರ್ತನೆ, ಮಾಡಿದ ಸಂಘಟನೆ, ಗೈದ ಧರ್ಮಜಾಗೃತಿ ಅಪೂರ್ವ. ಇದು ಮುಂದಿನ ಜನಾಂಗಕ್ಕೆ ಇತಿಹಾಸವಾಗಿ ದಾಖಲಾಗುತ್ತದೆ. ಪೂಜ್ಯ ಲಿಂಗಾನಂದ ಮಹಾಸ್ವಾಮಿಗಳು ಚಾರಿತ್ರಿಕ ವ್ಯಕ್ತಿಯಾಗಿ ನಿಲ್ಲುತ್ತಾರೆ" ಎಂದು ಹೇಳಿದರು.

ಗದುಗಿನ ತೋಂಟದಾರ್ಯ ಮಠದ ಜಗದ್ಗುರು ಡಾ|| ಸಿದ್ಧಲಿಂಗ ಸ್ವಾಮಿಗಳು ಅತ್ಯಂತ ಸ್ಫುಟವಾಗಿ, ಪರಿಣಾಮಕಾರಿಯಾಗಿ ಮಾತನಾಡಿದರು.

"ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು ಇಷ್ಟು ಬೇಗನೆ ನಮ್ಮನ್ನು ಅಗಲುತ್ತಾರೆ ಎಂದು ಯಾರೂ ಊಹಿಸಿರಲಿಲ್ಲ. ಔಪಚಾರಿಕವಾಗಿ ಹೇಳುವುದಲ್ಲ. ಇದು ನಿಜಕ್ಕೂ ತುಂಬಲಾರದ ನಷ್ಟ. ಇದು ಅತ್ಯಂತ ಮಹತ್ವದ ಸಮಯವಾಗಿತ್ತು. 'ಉಕ್ಕು' (ಏರಿಕೆ) ಬಂದ ಕಾಲ; ಬಸವ ಧರ್ಮದ ಏರಿಕೆಯ ಕಾಲ, ಈಗ ಅವರ ಅಗತ್ಯ ಬಹಳವಾಗಿತ್ತು. ನಾವು ಪೂರ್ಣವಾಗಿ ನಿರಾಶರಾಗಬೇಕಾಗಿಲ್ಲ. "ಸಮರ್ಥ ವ್ಯಕ್ತಿಯನ್ನಾಗಿ ಪೂಜ್ಯ ಮಾತಾಜಿಯವರನ್ನು ಸಿದ್ಧಪಡಿಸಿ ಹೋಗಿದ್ದಾರೆ. ನಾವು ನೀವೆಲ್ಲರೂ ಅವರ ಕೈಗಳನ್ನು ಬಲಪಡಿಸಬೇಕು; ಸಹಕರಿಸಬೇಕು".

ಪೂಜ್ಯ ಸ್ವಾಮಿಗಳು ಹುಟ್ಟು ಹೋರಾಟಗಾರರು, ಛಲವಂತರು, ಧ್ಯೇಯವಾದಿಗಳು. ಸತ್ಯವೆಂದು ತೋರಿದ್ದನ್ನು ಎಂದೂ ಯಾರಿಗೂ ಅಂಜಿ ಮುಚ್ಚಿಡುತ್ತಿರಲಿಲ್ಲ. ನಿರ್ಭೀತವಾಗಿ ಸತ್ಯವನ್ನು ಪ್ರತಿಪಾದಿಸುತ್ತಿದ್ದರು. ಅನೇಕರು ಪರಧರ್ಮೀಯರು, ವಿದೇಶೀಯರು ನಮ್ಮ ಮಠಕ್ಕೆ, ಸಂದರ್ಶನಕ್ಕೆ ಬರುತ್ತಾರೆ. ನಮ್ಮ ಧರ್ಮವು ಸ್ತ್ರೀ - ಪುರುಷರ ಸಂಪೂರ್ಣ ಸಮಾನತೆಯನ್ನು ಪ್ರತಿಪಾದಿಸಿದೆ ಎಂದರೆ ಯಾವುದಾದರೂ ಪ್ರತ್ಯಕ್ಷ ನಿದರ್ಶನವಿದೆಯೆ? ಎನ್ನುತ್ತಾರೆ. ಅಂದು

ಅಕ್ಕನಾಗಲಾಂಬಿಕೆ, ಗುಡ್ಡಾಪುರದ ದಾನಮ್ಮ ಮುಂತಾದವರು ದೀಕ್ಷೆ ಮಾಡುತ್ತಿದ್ದರು ಎಂಬುದನ್ನು ಕೇಳಿದ್ದೇವೆ; ಕಾವ್ಯಗಳಲ್ಲಿ ಓದಿದ್ದೇವೆ. ಈಗ ಯಾರು? ಪೂಜ್ಯ ಮಾತೆಯವರ ಉದಾಹರಣೆಯನ್ನು ಧೈರ್ಯದಿಂದ ಹೇಳುತ್ತೇವೆ. ಒಂದು ವೇಳೆ ಇಂಥ ವ್ಯಕ್ತಿ ಇಲ್ಲದಿದ್ದರೆ ಯಾರ ಹೆಸರು ಹೇಳಬೇಕಿತ್ತು? ಎಂದು ಅನ್ನಿಸುತ್ತೆ. ಇಂಥ ವ್ಯಕ್ತಿಯನ್ನು ಮಹಿಳಾಗುರು ಪೀಠಕ್ಕೆ ಏರಿಸಿದ ಧೀಮಂತರು ಶ್ರೀ ಲಿಂಗಾನಂದ ಜಗದ್ಗುರುಗಳು.

ನೆಪೋಲಿಯನ್ ಬೋನೋಪಾರ್ಟ್ ಮಹಾಸಾಹಸಿ; ಅವನ ಬಗ್ಗೆ ಹೀಗೆ ವರ್ಣನೆ ಇದೆ. (He Came, he saw, he conquerred) ಎಂದು ಪೂಜ್ಯ ಸ್ವಾಮೀಜಿ ಹಾಗೆಯೆ! ಪ್ರವಚನಕ್ಕೆಂದು ಬರುತ್ತಿದ್ದರು, ಬರುವಾಗ ಏಕಾಂಗಿ ತಮ್ಮ ಅದ್ಭುತ ಆತ್ಮಬಲ, ವಾಕ್ ಪ್ರತಿಭೆ, ವಿದ್ವತ್ತಿನಿಂದ ಜನರನ್ನು ಆಕರ್ಷಿಸಿ, ಸೆರೆ ಹಿಡಿಯುತ್ತಿದ್ದರು. ಅವರ ಪ್ರವಚನಕ್ಕೆ ಜನರು ಕಿಕ್ಕಿರಿದು ಸೇರಿ ಮಂತ್ರಮುಗ್ಧರಾಗುತ್ತಿದ್ದರು. ಪ್ರವಚನದ ಪ್ರಭಾವದೊಡನೆ ಬಸವ ಸಾಮ್ರಾಜ್ಯವನ್ನು ವಿಸ್ತರಿಸುತ್ತಿದ್ದರು. ಬೀಳ್ಕೊಡುವಾಗ ಅವರ ಅಭಿಮಾನಿಗಳು ಅನುಯಾಯಿಗಳು ಸಹಸ್ರಾರು.

ಸ್ವಾಮಿಗಳು ಹುಟ್ಟು ಹೋರಾಟಗಾರರು ಎಂದು ಹೇಳಿದ್ದೇನೆ. ಅವರು ಸನ್ಯಾಸ ತಗೊಂಡಾಗ ಲಿಂಗಾಯತ ಸಮಾಜ ಜಾಗೃತಗೊಂಡಿರಲಿಲ್ಲ. ಜಡ ಸಂಪ್ರದಾಯವಾದಿಗಳು ಬಹಳ ಕಿರುಕುಳಕೊಟ್ಟರು. ಆದರೆ ಸ್ವಾಮಿಗಳು ಧೈರ್ಯಗೆಡಲಿಲ್ಲ.

ವೀರನಾದರೆ ವೈರಿಗಳು ಮೆಚ್ಚಬೇಕು.
ವ್ರತಿಯಾದರೆ ಅಂಗನೆಯರು ಮೆಚ್ಚಬೇಕು.
ಜಂಗಮವಾದರೆ ಭಕ್ತರು ಮೆಚ್ಚಬೇಕು.

ಎಂದು ಚಿನ್ಮಯಜ್ಞಾನಿ ಚನ್ನಬಸವಣ್ಣನವರು ಹೇಳುವಂತೆ, ಸ್ವತಂತ್ರವಾಗಿ ಬೆಳೆದ ಧೀರರಾದ ಇವರು ಯಾರನ್ನೂ ಓಲೈಸಲು ಹೋಗಲಿಲ್ಲ. ಯಾವ ಮಠಾಧಿಪತಿಗಳು, ಶ್ರೀಮಂತರು, ರಾಜಕೀಯ ಮುಖಂಡರನ್ನು ಆಶ್ರಯಿಸಲಿಲ್ಲ. ಬಸವಣ್ಣನವರು ಹೇಗೆ ಜನ ಸಾಮಾನ್ಯರ ಬಳಿಗೆ ಹೋಗಿ, ಜನಶಕ್ತಿಯನ್ನು ಕ್ರೋಢೀಕರಿಸಿದರೋ ಹಾಗೆ ಇವರು ಪ್ರವಚನದ ಮೂಲಕ ನೇರವಾಗಿ ಜನರ ಬಳಿಗೆ ಹೋದರು; ಜನಶಕ್ತಿಯನ್ನು ಕ್ರೋಢೀಕರಿಸಿದರು. ನಿಜ ಜಂಗಮವಾಗಿ ಭಕ್ತರು ಮೆಚ್ಚುವಂತೆ ಬಾಳಿದರು. ನಿಜವಾದ ಜನತೆಯ (ಜನಪ್ರೀತಿಯ) ಜಗದ್ಗುರುವಾದರು. ಇದಕ್ಕೆ ಇಂದು ಆಗಮಿಸಿರುವ ನೀವೇ ಸಾಕ್ಷಿ. ಅವರು ಹಳಸಿದ

ಊಟ ಮಾಡಲಿಲ್ಲ. ಸ್ವಯಂಶಕ್ತಿಯಿಂದ ಜನಮನ್ನಣೆ ಪಡೆದುಕೊಂಡರು; ಬಿಸಿ ಅನ್ನವನ್ನುಂಡರು.

ಜನಾಂಗ ನಿರ್ಮಾಣದ ಮಹಾನ್ ಕಾರ್ಯಮಾಡಿದರು, ರಾಷ್ಟ್ರೀಯ ಬಸವದಳದ ಪರಿಕಲ್ಪನೆ ಬಹು ಸುಂದರ ಇದರಿಂದ ಕಾರ್ಯಕರ್ತರ ಪಡೆಯು ತಯಾರಾಯಿತು. ಶರಣ ಮೇಳ, ಸಮ್ಮೇಳನದಂತಹ ಬೃಹತ್ ಕಾರ್ಯವನ್ನು ನಿರಾಯಾಸವಾಗಿ ನೆರವೇರಿಸುವ ಜನ ತಯಾರಾಗಿದ್ದಾರೆ. ಪ್ರವಚನದ ಪ್ರಭಾವ ಮಸುಳಿಸದಂತೆ, ಅದು ಜೀವಂತವಿದ್ದು ಶಾಶ್ವತ ಪ್ರಭಾವ ಬೀರುವಂತೆ ರಾಷ್ಟ್ರೀಯ ಬಸವ ದಳಗಳು ಕೆಲಸ ಮಾಡುತ್ತಿವೆ. ಪೂಜ್ಯ ಲಿಂಗಾನಂದ ಮಹಾಜಗದ್ಗುರುಗಳ ಮತ್ತೊಂದು ಕಾರ್ಯ ಪ್ರತಿಭಾನ್ವೇಷಣೆ. ಎಲ್ಲರಲ್ಲೂ ಈ ಸಾಮರ್ಥ್ಯ ಇರದು. ಕುವೆಂಪುರವರಲ್ಲಿ ಆ ಅಸಾಧಾರಣ ಪ್ರತಿಭೆ ಇತ್ತು. ಡಾ॥ ದೇ.ಜ. ಗೌ, ಡಾ॥ ಸು.ಜ.ನಾ ರಂತಹ ಪ್ರತಿಭಾವಂತರನ್ನು ಗುರುತಿಸಿ, ಆಯ್ದು ತೆಗೆದು ಬೆಳೆಸಿದರು. ಅದೇ ರೀತಿ ಸಾಮಾನ್ಯ ವ್ಯಕ್ತಿಯಾಗಿ ಬಂದ ಮಾತೆಯವರಲ್ಲಿರುವ ಪ್ರತಿಭೆ ಗುರುತಿಸಿದರು. ಇವರನ್ನು ಕಡೆಗಣಿಸಿದ್ದರೆ ಇಂಥ ವ್ಯಕ್ತಿಯನ್ನು ಸಮಾಜವು ಹೊಂದಬಹುದಿತ್ತೆ? ಆ ಧೈರ್ಯ ಎಲ್ಲರಿಗೂ ಇರದು. ದೊಡ್ಡವರಾದ ಮೇಲೆ ಯಾರಾದರೂ ಗುರುತಿಸಬಹುದು. ಗೌರವಿಸಬಹುದು. ಈ ಗುಣ ಗ್ರಾಹಕತ್ವದಿಂದಲೇ ಲಿಂಗಾನಂದ ಸ್ವಾಮಿಗಳು ಬಹು ಎತ್ತರದವರಾಗುತ್ತಾರೆ. ಹಿಡಿದ ಧ್ಯೇಯವನ್ನು ಮುಟ್ಟುವತನಕ ಹಿಮ್ಮೆಟ್ಟದೆ ಸಾಗುವ ಧೀಮಂತಿಕೆ ಅವರ ರಕ್ತಗತ ಗುಣವಾಗಿತ್ತು.

ಪೂಜ್ಯ ಮಾತಾಜಿಯವರು ಈಗ ನಿರಾಶರಾಗಬೇಕಾಗಿಲ್ಲ; ಧೈರ್ಯಗುಂದಬೇಕಾಗಿಲ್ಲ. ಪೂಜ್ಯ ಲಿಂಗಾನಂದ ಮಹಾಸ್ವಾಮಿಗಳು ಇವರನ್ನು ಒಬ್ಬಂಟಿಯನ್ನಾಗಿ ಮಾಡಿ ಹೋಗದೆ ಒಂದು ಬೃಹತ್ ಸಾಂಘಿಕ ಶಕ್ತಿಯನ್ನು ಬಿಟ್ಟುಹೋಗಿದ್ದಾರೆ. ರಾಷ್ಟ್ರೀಯ ಬಸವದಳಗಳ ಶಕ್ತಿಯನ್ನು, ಅಪಾರ ಬಸವ ಭಕ್ತರ ಬೆಂಬಲವನ್ನು ಬಿಟ್ಟು ಹೋಗಿದ್ದಾರೆ. ಆದ್ದರಿಂದ ಮೊದಲಿನ ಧೈರ್ಯ - ಉತ್ಸಾಹಗಳಿಂದಲೇ ಇವರು ಗುರಿಯತ್ತ ಸಾಗಬೇಕು. ನಮ್ಮೆಲ್ಲರ ಸಹಾಯ - ಸಹಕಾರ - ಪ್ರೋತ್ಸಾಹ ಎಂದೆಂದಿಗೂ ಇವರೊಡನೆ ಇವೆ. ಪೂಜ್ಯ ಸ್ವಾಮೀಜಿ ಯಾವ ರೋಗ - ರುಜಿನ, ನರಳಿಕೆ ಇಲ್ಲದೆ ನಗುನಗುತ್ತಾ ಹೋಗಿರುವುದು ಅವರ ವ್ಯಕ್ತಿತ್ವವನ್ನು ಪ್ರತಿನಿಧಿಸುತ್ತದೆ. ಅವರಿಲ್ಲದ್ದರಿಂದ ಮಾರ್ಗದರ್ಶನವಿಲ್ಲವಾಯಿತಲ್ಲ ಎಂದು ಕೊರಗದೆ ಇಂದು ಅವರ ಆತ್ಮಕ್ಕೆ ಚಿರಶಾಂತಿ ಕೋರೋಣ.'' ಪೂಜ್ಯ ಶ್ರೀ ನಿ.ಪ್ರ. ಜಗದ್ಗುರು ಡಾ॥ ಸಿದ್ದಲಿಂಗ ಸ್ವಾಮಿಗಳವರ ಒಂದೊಂದು ಮಾತು ಬಹಳ ಜನರ ಮೇಲೆ ಪರಿಣಾಮಬೀರಿದವು.

ವಿವಿಧ ರಾಜ್ಯಗಳ ಪರವಾಗಿ ಕೆಲವು ಶರಣರು ಶ್ರದ್ಧಾಂಜಲಿ ಸಲ್ಲಿಸಿದರು. ಆಂಧ್ರದ ಪರವಾಗಿ ಶರಣ ಪರ್ವತಪ್ಪ ಕೋರವಾರ, ಮಹಾರಾಷ್ಟ್ರ ಪರವಾಗಿ ಶರಣ. ಶಿವಕುಮಾರ ಹಸರುಗುಂಡೆ, ತಮಿಳುನಾಡಿನ ಪರವಾಗಿ ಶರಣ ಶಿವಮಣಿ ಶಿವಪ್ಪಮಾತನಾಡಿದರು. ಗಣನಾಯಕ ಬಸವ ಕುಮಾರ ಪಾಟೀಲರು ಬೆಳಗಿನ ಜಾವದಲ್ಲೇ ಬಸವ ಧರ್ಮ ಸಂಸತ್ ಸದಸ್ಯರ ಮತ್ತು ರಾಷ್ಟ್ರೀಯ ಬಸವ ದಳದ ಕೇಂದ್ರ ಸಮಿತಿಯ ತುರ್ತುಸಭೆ ಕರೆದಿದ್ದು, ಪೂಜ್ಯ ಮಹಾಜಗದ್ಗುರುಗಳ ಪಾರ್ಥಿವ ಶರೀರವನ್ನು 'ಲಿಂಗದ ಗೂಡಿ'ಗೆ ಇಡುವ ಮುನ್ನವೇ ಉತ್ತರಾಧಿಕಾರಿಗಳ ಆಯ್ಕೆ ಆಗ ಬೇಕು ಎಂದಾಗ ನೆರೆದವರೆಲ್ಲರು ಪೂಜ್ಯ ಮಾತಾಜಿಯವರಿಗಿಂತಲೂ ಸಮರ್ಥರು ಯಾರು? ಅವರೇ ಉತ್ತರಾಧಿಕಾರಿಯಾಗಲಿ ಎಂದು ಒಕ್ಕೊರಲಿನಿಂದ ನುಡಿದರು. ಡಾ॥ ನಿತೀನ ಚಂದ್ರ ಹತ್ತೀಕಾಳರವರು ಇದನ್ನು ಅನುಮೋದಿಸಿ, ದೃಢೀಕರಿಸಿದರು. ಅದೇ ಸಂಗತಿಯನ್ನು ಬಸವಕುಮಾರ್ ಅವರು ಈಗ ಪ್ರಸ್ತಾಪಿಸಿದರು - ''ಶರಣ ಬಂಧುಗಳೇ, ಪರಮಪೂಜ್ಯ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ ಸಾಧನೆ ಅಪಾರ, ಅಪೂರ್ವ. ಲಿಂಗವಂತ ಧರ್ಮೀಯರಿಗೆ ಒಂದು ಧಾರ್ಮಿಕ ನೆಲೆಯನ್ನು ಒದಗಿಸಿಕೊಟ್ಟ ಪುಣ್ಯಚೇತನರು. ಅವರು ಇಂದು ನಮ್ಮನ್ನು ಅಗಲಿದ್ದಾರೆ. ಈ ಗುರು ಪೀಠವನ್ನು ತನ್ಮೂಲಕ ಸಮಾಜವನ್ನು ಮುನ್ನಡೆಸಿಕೊಂಡು ಹೋಗಲು ಉತ್ತರಾಧಿಕಾರಿಯ ಆಯ್ಕೆ ಆಗಬೇಕಾಗಿದೆ. ಪೂಜ್ಯ ಮಾತಾಜಿಯವರೇ ಪೂಜ್ಯ ಲಿಂಗಾನಂದ ಮಹಾಜಗದ್ಗುರುಗಳ ಉತ್ತರಾಧಿಕಾರಿಣಿಯಾಗಿ, ಗುರುಗಳು ಆರಂಭಮಾಡಿದ ಮಹಾಕಾರ್ಯವನ್ನು ಮುಂದುವರಿಸಿಕೊಂಡು ಹೋಗಬೇಕೆಂದು ಎಲ್ಲ ಬಸವ ಧರ್ಮ ಸಂಸತ್ ಸದಸ್ಯರ ಇಚ್ಛೆ.'' ಎಂದು ಘೋಷಿಸಿದಾಗ ಎಲ್ಲರೂ ಜಯಘೋಷಮಾಡಿ ಈ ಆಯ್ಕೆಯನ್ನು ಸ್ವಾಗತಿಸಿದರು. ದುಃಖದ ಮಧ್ಯದಲ್ಲೂ ಹರ್ಷೋದ್ಗಾರ ಮಾಡಿದರು. ಆಗ ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರು, ಪೂಜ್ಯ ಲಿಂಗಾನಂದ ಮಹಾಜಗದ್ಗುರುಗಳ ಪಾರ್ಥಿವ ಶರೀರದ ತಲೆಯ ಮೇಲಿದ್ದ ರುದ್ರಾಕ್ಷಿ ಕಿರೀಟವನ್ನು ಎತ್ತಿ ತಂದು, ಅನೇಕ ಪೂಜನೀಯರು ಮತ್ತು ಗಣ್ಯರ ಕೈಲಿ ಮುಟ್ಟಿಸಿ, ಗದುಗಿನ ಜಗದ್ಗುರುಗಳಿಗೂ ಕಿರೀಟವನ್ನು ಹಿಡಿಯಲು ಕೋರಿ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ತಲೆಯ ಮೇಲಿಟ್ಟರು. ಆನಂದ - ದುಃಖಗಳೆರಡೂ ಜನರಿಗೆ ಉಮ್ಮಳಿಸಿ ಬಂದು ಅದರ ಮಧ್ಯದಲ್ಲೂ

ಜಯ ಗುರು ಬಸವೇಶ ಹರಹರ ಮಹಾದೇವ
ವಿಶ್ವಗುರು ಬಸವೇಶ್ವರ ಮಹಾತ್ಮಾಕೀ ಜೈ
ಪೂಜ್ಯ ಶ್ರೀಮನ್ ನಿರಂಜನ ಮಹಾ ಜಗದ್ಗುರು ಲಿಂಗಾನಂದ
ಸ್ವಾಮೀಜೀ ಕಿ ಜೈ

ಪೂಜ್ಯ ಶ್ರೀ ಮಹಾ ಜಗದ್ಗುರು ಮಾತೆ ಮಹಾದೇವೀಕಿ ಜೈ

ಎಂದು ಉದ್ಘಾಟಿಸಿದರು. ಪೂಜ್ಯ ಮಾತಾಜಿಯವರು ಭಾವೋದ್ವಿಗ್ನರಾಗಿ ವಿಶ್ವಗುರು ಬಸವಣ್ಣನವರ ಭಾವಚಿತ್ರಕ್ಕೆ ವಂದಿಸಿ, ''ತಂದೆ, ನಿನ್ನ ಸಂಕಲ್ಪ ಪೂರೈಕೆಗಾಗಿ ನನಗೆ ಎಲ್ಲ ಶಕ್ತಿ - ಉತ್ಸಾಹಗಳನ್ನು ಕೊಡು. ನನ್ನದೆನ್ನುವುದೇನೂ ಇಲ್ಲ. ನನ್ನ ಸಮಸ್ತ ಜೀವನವೇ ನಿನ್ನ ಅಡಿಗೆ ಸಮರ್ಪಿತವಾಗಿದೆ. ನಿನ್ನ ಸಂದೇಶ ಪ್ರಚಾರವೊಂದೇ ನನ್ನ ಜೀವಿತದ ಧ್ಯೇಯ.'' ಎಂದು ನುಡಿದರು. ನಂತರ ಪೂಜ್ಯ ಗುರುಗಳಿಗೆ ವಂದಿಸಿ, '' ನೀವು ಕೈಗೊಂಡ ಮಣಿಹವನ್ನು, ಪೂರೈಸುವ ಒಲವನ್ನು, ಛಲವನ್ನು, ಬಲವನ್ನು ಕೊಡಿರಿ. 'ಬಸವಾದಿ ಪ್ರಮಥರ ಆಶೋತ್ತರ ಪೂರೈಸಲು ಬಂದವರು. ನೀವು.' ಎಂದು ನೀವು ನನ್ನನ್ನು ಕಂಡಾಕ್ಷಣ ಅಂದಿರಿ. ಅಂದಿನಿಂದಲೂ ನಾನು ಅದೇ ಮಹಾನ್ ಕಾಯಕದಲ್ಲಿ ಸಾಗಿಬಂದಿದ್ದೇನೆ. ಇನ್ನು ಮುಂದಾದರೂ ನೀವು ಆರಂಭಿಸಿದ ಮಹಾನ್ ಕಾರ್ಯವನ್ನು ಮುಂದುವರಿಸುವೆ. ಚೈತನ್ಯ ಸ್ವರೂಪಿಗಳಾಗಿರುವ ತಾವು ಅಂತರ್ ಪ್ರೇರಣೆಯಾಗಿ ಮಾರ್ಗದರ್ಶನ ಮಾಡಿರಿ.'' ಎಂದು ಪ್ರಾರ್ಥಿಸಿದರು ''. ನಂತರ ಪೂಜ್ಯ ಮಾತಾಜಿಯವರು ಆಶೀರ್ವಚನ ಮಾಡಿದರು. ''ಸೃಷ್ಟಿಕರ್ತನನ್ನು ಸ್ಮರಿಸಿ ಧರ್ಮಗುರು ಬಸವಣ್ಣನವರನ್ನು ಸ್ಮರಿಸಿ, ದೀಕ್ಷಾಗುರುಗಳಾದ ಲಿಂಗೈಕ್ಯ ಪೂಜ್ಯ ಲಿಂಗಾನಂದ ಮಹಾಸ್ವಾಮೀಜಿಯವರನ್ನು ಸ್ಮರಿಸಿ, ಪೂಜ್ಯರಾದ ಶ್ರೀ ನಿ.ಪ್ರ. ತೋಂಟದಾರ್ಯ ಮಠದ ಜಗದ್ಗುರು ಡಾ|| ಸಿದ್ಧಲಿಂಗ ಮಹಾಸ್ವಾಮೀಜಿಯವರೇ, ಪೂಜ್ಯ ಶ್ರೀ ನಿ. ಪ್ರ. ಮಹಾಂತ ಸ್ವಾಮೀಜಿಯವರೇ, ಶ್ರೀ ಶೈಲ ಸಾರಂಗಮಠದ ಜಗದ್ಗುರುಗಳವರೇ, ಭಾಲ್ಕಿಯ ಹಿರೇಮಠದ ಮತ್ತು ಹುಲ್ಸೂರು ಗುರುಬಸವೇಶ್ವರ ಸಂಸ್ಥಾನ ಮಠದ ಪೂಜ್ಯರೇ, ಇನ್ನಿತರ ಎಲ್ಲ ಸ್ವಾಮೀಜಿಯವರೇ, ನಾಡಿನ ಎಲ್ಲೆಡೆಯಿಂದ ಬಂದಿರುವ ಗಣ್ಯರೇ ಹಾಗೂ ಶರಣ ಬಂಧುಗಳೇ ತಮ್ಮೆಲ್ಲರಿಗೂ ಶರಣು ಶರಣಾರ್ಥಿ.'

ಈ ಸಂದರ್ಭದಲ್ಲಿ ನಾನೇನೂ ಮಾತನಾಡುವುದು ಅಗತ್ಯವಿಲ್ಲ. ಇಲ್ಲಿಯವರೆಗೆ ಅನೇಕ ಪೂಜ್ಯರು ಮತ್ತು ಗಣ್ಯರು ಲಿಂಗೈಕ್ಯರಾದ ಗುರೂಜಿಯವರ ಗುಣಗಾನ ಮಾಡಿದ್ದಾರೆ; ಅವರ ಸಾಧನೆಗಳನ್ನು ಬಣ್ಣಿಸಿದ್ದಾರೆ. ಪೂಜ್ಯರು ವಾಙ್ಮಯ ತಪಸ್ವಿ; ಪ್ರವಚನವು ಪೂಜ್ಯರಿಗೆ ಒಂದು ವ್ರತವಾಗಿತ್ತು; ಪವಿತ್ರ ಕಾಯಕವಾಗಿತ್ತು, ಅದುವೇ ಒಂದು ತಪಸ್ಸಾಗಿತ್ತು ಆರಂಭದ ದಿನಗಳಲ್ಲಿ ಯೋಗಾಭ್ಯಾಸಕ್ಕೆ ಬಹಳ ಮಹತ್ವ ನೀಡುತ್ತಿದ್ದರು, ಕಾಲಾನಂತರದಲ್ಲಿ ಚಿಂತನೆ ರೂಢಿಸಿಕೊಂಡಿದ್ದರು. ಕುಳಿತಲ್ಲಿ ನಿಂತಲ್ಲಿ ಪ್ರಸಾದ ಸ್ವೀಕರಿಸುವಾಗ ಸಹಿತ ಚಿಂತನೆ ಮಾಡುತ್ತ ಅಮೂಲ್ಯ ವಿಚಾರಗಳನ್ನು ಸ್ಫುರಣವಾಗಿ ಹೇಳುತ್ತಿದ್ದರು. ಮಿಂಚಿನಂತೆ ಮಾಡುವ ಚಿಂತನವನ್ನು ಅವರು ಹೇಳಿದ್ದನ್ನು ಗ್ರಹಿಸುವ ಶಿಷ್ಯರು ಇಲ್ಲ ಎನ್ನುತ್ತಿದ್ದರು, ನಾನು ತಕ್ಷಣವೇ ಗ್ರಹಿಸಿ ಬರೆದುಬಿಡುತ್ತಿದ್ದೆ. ಆ ರೀತಿ ಗ್ರಹಣ ಶಕ್ತಿ ಯಾಗಲೀ ಬರವಣಿಗೆ ಯಾಗಲೀ

ಪೂಜ್ಯ ಅಪ್ಪಾಜಿಯವರ ಬಳಿ ಸೇವಾಕಾರ್ಯದಲ್ಲಿ ನಿರತರಾಗಿದ್ದವರಲ್ಲಿ ಇರಲಿಲ್ಲ. ಪ್ರವಚನ ಒಂದು ಯೋಗ, ತಪಸ್ಸು ಇದು ಸಮಷ್ಟಿಯೋಗ. ಧ್ಯಾನದಲ್ಲಿ ವ್ಯಕ್ತಿ ತಾನಷ್ಟೇ ಆನಂದವನ್ನು ಹೊಂದುವನು. ಪ್ರವಚನದಲ್ಲಿ ಅದರ ಮೂಲಕ ಆ ಆನಂದವನ್ನು ತಾನು ಹೊಂದುವುದಲ್ಲದೆ ಇತರರಿಗೂ ಹಂಚುವನು. ಹೀಗಾಗಿ ಅದರ ಮೂಲಕ ನನಗೆ ಅಪಾರ ಆನಂದ ಹೊಂದುತ್ತೇನೆ'' ಎನ್ನುತ್ತಿದ್ದರು. ಪೂಜ್ಯ ಅಪ್ಪಾಜಿ ಪ್ರಾಣಬಿಟ್ಟುದು ಮಧ್ಯಾಹ್ನ 2 ಗಂಟೆಗೆ. ಧಾರವಾಡದಲ್ಲಿ ನನಗೆ ಸುದ್ದಿ ತಲ್ಪಿದ್ದು ನಾಲ್ಕುಗಂಟೆಗೆ. ಕೆಲವು ಕಡೆಗೆ ಸುದ್ದಿ ಕಳಿಸಿ ಕೂಡಲ ಸಂಗಮಕ್ಕೆ ಹೋಗಿ ಮಾಡಬೇಕಾದ ಸಿದ್ಧತೆ ಬಗ್ಗೆ ಶಿವಣ್ಣ - ಸುಬ್ಬಣ್ಣ - ಗಣಾಚಾರಿ ಮುಂತಾದ ಶರಣರಿಗೆ ಹೇಳಿ, ಹುಬ್ಬಳ್ಳಿಯಲ್ಲಿ ಕಲ್ಯಾಣಪ್ಪನವರ ಮನೆಗೆ ಧಾವಿಸಿ, ಪತ್ರಿಕೆಗಳಿಗೆ ಸುದ್ದಿ ನೀಡಿ ಹೊರಟು ಬಂದು ಹಿರಿಯೂರು ಸೇರಿದಾಗ ರಾತ್ರಿ ಒಂದು ಗಂಟೆ. ಜನರು ಒಳಹೊರಗೆ ಸೇರಿದ್ದರು. ಮಂಚದ ಮೇಲೆ ಪೂಜ್ಯ ಅಪ್ಪಾಜಿಯವರನ್ನು ಮಲಗಿಸಲಾಗಿತ್ತು. ಮೈಮೇಲೆಲ್ಲ ಘಮಘಮಿಸುವ ಗುಂಡು ಮಲ್ಲಿಗೆ ಮತ್ತೆ ಮೊಲ್ಲೆ ಹೂವಿನ ಹಾರ. ಕಣ್ಣುರೆಪ್ಪೆ ಮುಚ್ಚಿದ್ದರೂ ಒಳಗೆ ದೃಷ್ಟಿ ಮೇಲ್ಮುಖವಾಗಿ ಭ್ರೂಮಧ್ಯಕ್ಕೆ ನಿಂತಂತಿತ್ತು. ಮುಖದ ಮೇಲೆ ಅಪೂರ್ವ ಕಾಂತಿ ಚಿಮ್ಮುತ್ತಿತ್ತು. ಗುಲಾಬಿ ವರ್ಣ ಮಿಶ್ರಿತವಾದ ಬಣ್ಣ ಪೂಜ್ಯರದು. ಅದೀಗ ಇನ್ನಷ್ಟು ಕಾಂತಿಯುಕ್ತವಾಗಿ, ಕಾಂತಿಕಿರಣಗಳು ಚರ್ಮದಿಂದ ಹೊಮ್ಮುವಂತೆ ಭಾಸವಾಗುತ್ತಿತ್ತು. ಯಾವುದೇ ಕ್ಷಣಕ್ಕೆ ಕಣ್ದೆರೆದು ಬಿಡಬಹುದು. ಗಾಢ ನಿದ್ರೆಯಲ್ಲಿರಬೇಕು ಎಂಬ ಅನಿಸಿಕೆ ನನಗುಂಟಾಗಿತ್ತು. ಪ್ರಾಣಪಕ್ಷಿ ಹಾರಿಹೋಗುವ ಮುನ್ನ ಮನವಾರೆ ನಕ್ಕ ಉಲ್ಲಾಸ ಇನ್ನೂ ಮುಖದ ಮೇಲೆ ಮೌನವಾಗಿ ನಲಿಯುತ್ತಿತ್ತು. ಇಂಥ ಸಂತೋಷದ ಸಾವಿಗಾಗಿ ನಾವು ಹರ್ಷಿಸಬೇಕೇ ಅಥವಾ ಇಂಥ ಮಹಾಚೇತನವನ್ನು ಕಳೆದುಕೊಂಡುದಕ್ಕಾಗಿ ದುಃಖಿಸಬೇಕೇ?' ನಮಗೆ ದುಃಖವಾಗುತ್ತಿದೆ. ಅದು ಮುಕ್ತಾಯಕ್ಕನ ದುಃಖ, ಲೌಕಿಕವಲ್ಲದ ಅಲೌಕಿಕ ದುಃಖ, ಅಲ್ಲಮ ಪ್ರಭುವು ಅಳುತ್ತಿರುವ ಮುಕ್ತಾಯಕ್ಕನನ್ನು ಕಂಡು ಕೇಳಿದರು.

ಅಂಗೈಯ ಒಳಗೊಂಡು ಅರಳ್ದ ತಲೆಯ ಹಿಡಿದುಕೊಂಡು
ಕಂಗಳ ಮುತ್ತ ಪವಣಿಸುವಾಕೆ ನೀನಾರು ಹೇಳಾ?

ಮುಖದ ಮೇಲೆ ಜ್ಞಾನಿಯ ತೇಜಸ್ಸಿದೆ; ಆದರೆ ಜೊತೆಗೆಯೇ ಕಣ್ಣೀರು ಅಜ್ಞಾನದ ಪ್ರತೀಕವಾಗಿದೆ; ಇದು ಹೇಗೆ? ಮುಕ್ತಾಯಕ್ಕ ಹೇಳುವಳು:

''ನನ್ನ ಲೌಕಿಕ ಅಣ್ಣ ಹೋದನೆಂದು ನಾನು ದುಃಖಿಸುತ್ತಿಲ್ಲ; ಮಾರ್ಗದರ್ಶನ ಮಾಡುತ್ತಿದ್ದ ಅಲೌಕಿಕ ಗುರುವು ಹೋದನೆಂದು ಅಳುತ್ತಿರುವೆ.''

ಈಗ ನನ್ನ ಪರಿಸ್ಥಿತಿಯಾದರೂ ಹಾಗೆಯೇ ಆಗಿದೆ. 'ಗಹನವಾದ ತಾತ್ತ್ವಿಕ ವಿಚಾರ ಚರ್ಚಿಸುತ್ತಿದ್ದೆವು. ವಚನಗಳನ್ನೂ ವಿಶ್ಲೇಷಿಸುತ್ತಿದ್ದೆವು. ಈಗ ಯಾರ ಸಲಹೆ ಪಡೆಯಬೇಕು.' ಎಂದೇ ನನ್ನ ಚಿಂತೆ, ಆದರೂ ನಾನು ಧೈರ್ಯಗೆಟ್ಟಿಲ್ಲ. ಧರ್ಮಪಿತ ಬಸವಣ್ಣನವರು ಪ್ರೇರಕ ಶಕ್ತಿಯಾಗಿ ಮಾರ್ಗದರ್ಶನ ಮಾಡುವಂತೆ, ಪೂಜ್ಯ ಅಪ್ಪಾಜಿಯವರೂ ಚೈತನ್ಯ ಸ್ವರೂಪಿಯಾಗಿ ಮಾರ್ಗದರ್ಶನ ಮಾಡುವರೆಂದು ನಂಬಿ, ನನ್ನ ಮನ - ಬುದ್ಧಿಗಳನ್ನು ಜಾಗೃತಗೊಂಡ ಸ್ಥಿತಿಯಲ್ಲಿ ತೆರೆದು ಇಟ್ಟಿರುತ್ತೇನೆ.

ಹತಾಶರಾಗಿ, ದುಃಖಿಸುತ್ತ ಕೂಡ್ರುವದರಲ್ಲಿ ಪ್ರಯೋಜನವಿಲ್ಲ. ಸ್ವಲ್ಪ ಅನಾಥಭಾವ ಕಾಡುತ್ತಿರಬಹುದು. ಧರ್ಮಪಿತ ಬಸವಣ್ಣನವರು ಗಡಿಪಾರಾಗಿ ನಿರ್ಗಮಿಸುವಾಗ ಹೇಳಿದರು, ''ಸತ್ಯದ ದಾರಿ ಹೂವಿನದಲ್ಲ, ಮುಳ್ಳುಕಲ್ಲಿನದು, ನಾನು ಕೈಗೊಂಡ ಕಾರ್ಯವನ್ನು ಮುಂದುವರಿಸಿರಿ'' ಎಂದು. ಹೊರಡುವ ಮುನ್ನ ಅವರು ನೀಡಿದ ಆದೇಶದನುಸಾರ ಶರಣರು ವಚನ ಸಾಹಿತ್ಯ ರಕ್ಷಣೆಗಾಗಿ ಪ್ರಾಣವನ್ನು ಪಣಕ್ಕಿಟ್ಟು ಹೋರಾಡಿದರು.

ನಾನು ಪೂಜ್ಯ ಗುರುಗಳ ಸಂಕಲ್ಪ ಪೂರೈಸಲು ಸದಾ ಕಂಕಣ ಬದ್ಧಳಾಗಿದ್ದೆ. ಲೋಕದ ಕಣ್ಣಿಗೆ ಸಾಮಾನ್ಯ ಹುಡುಗಿಯಂತಿದ್ದ ನನ್ನನ್ನು ಕಂಡಾಗ, 'ನೀವು ಸಾಮಾನ್ಯರಲ್ಲ ಬಸವಾದಿ ಪ್ರಮಥರ ಆಶೋತ್ತರ ಪೂರೈಸಲು ಬಂದವರು. ನಾನು ಅರವಿಂದಾಶ್ರಮಕ್ಕೆ ಹೋದಾಗ ಅಲ್ಲಿಯ ಪೂಜ್ಯ ಶ್ರೀ ಮಾತೆಯವರನ್ನು ಕಂಡು, ದೇವರಲ್ಲಿ ಬೇಡಿಕೊಂಡೆ; ಅನುಭವ ಮಂಟಪಕ್ಕೆ ಅಕ್ಕ ಬಂದಂತೆ, ಅರವಿಂದ ಆಶ್ರಮಕ್ಕೆ ಮಾತೆಯವರು ಬಂದಂತೆ, ಅಕ್ಕಮಹಾದೇವಿಯ ಪ್ರತಿ ರೂಪವಾದ ಓರ್ವ ತಾಯಿಯನ್ನು ಕೊಡು' ಎಂದು. ಆ ಸಂಕಲ್ಪ ಇಂದು ಸಿದ್ಧಿಸಿದೆ. ನಾನು ಅಕ್ಕನ ಪ್ರವಚನ ಹೇಳಿ ಆ ತಾಯಿಯ ಸೇವೆ ನಿಷ್ಠೆಯಿಂದ ಮಾಡಿದೆ. ಅದಕ್ಕೆ ನಿಮ್ಮ ರೂಪದಲ್ಲಿ ಆ ತಾಯಿ ಬಂದಿದ್ದಾಳೆ.''

ಈ ಪದಗಳು ನನಗೆ ಬಹಳ ಭಾರ ಎನ್ನಿಸಿದರೂ, ಪೂಜ್ಯ ಗುರುಗಳ ಸಂಕಲ್ಪ ಪೂರೈಸಬೇಕೆಂಬ ಶ್ರದ್ಧೆ - ನಿಷ್ಠೆ ಇತ್ತು. ಒಂದು ಸಮಾಧಾನ ನನಗಿದೆ. ಅದೆಂದರೆ ಪೂಜ್ಯ ಅಪ್ಪಾಜಿಯವರ ವಾಣಿಯನ್ನು ಆಡಿಯೋ ಕೆಸೆಟ್ಟು ಮೂಲಕ, ವೀಡಿಯೋ ಕೆಸೆಟ್ಟುಗಳ ಮೂಲಕ ಗ್ರಹಿಸಿ, ರಕ್ಷಿಸಲಾಗಿದೆ. ಅವರ ಸಂಕಲ್ಪದಂತೆ ಶರಣರ ಮೂರ್ತಿಗಳನ್ನು ಮಾಡಿಸಲಾಗಿದೆ. ಒಂದು ಅಧಿಕೃತ ಧಾರ್ಮಿಕ ಗ್ರಂಥವೊಂದರ ರಚನೆಯಾಗಬೇಕು; ಆ ಬಗ್ಗೆ ಸುದೀರ್ಘವಾಗಿ ಚರ್ಚಿಸಬೇಕು ಎಂಬ ಪೂಜ್ಯರ ಹಂಬಲವನ್ನು ಪೂರೈಸಲಾಗಲಿಲ್ಲ.

''ನೀವು ಮಹಾಚೈತ್ರ ಪತ್ರ ರದ್ದತಿಗಾಗಿ ಹೋರಾಟದಲ್ಲಿ ತೊಡಗಿ ಬರವಣಿಗೆಯನ್ನು ಸ್ಥಗಿತಗೊಳಿಸಿದಿರಿ. ಬೆಂಗಳೂರು ಸಮ್ಮೇಳನ ಹಮ್ಮಿಕೊಂಡು ಸಮಯವನ್ನು ಕಳೆಯುತ್ತಿರುವಿರಿ. ನಾನು ಆ ಗ್ರಂಥವನ್ನು ನೋಡದೆಯೇ ಕಣ್ಣುಮುಚ್ಚುತ್ತೇನೇನೋ ಎಂದು ಕೊರಗಾಗಿದೆ.'' ಆ ಮಾತುಗಳಿಂದ ಬಹಳ ಕಳವಳವಾಯಿತು. ''ಹಾಗೆಲ್ಲ ನೊಂದುಕೊಳ್ಳಬೇಡಿ ಅಪ್ಪಾಜಿ. ನನಗೆ ನಿಮ್ಮನ್ನು ನೋಯಿಸುವ ದುರುದ್ದೇಶವಿಲ್ಲ. ಇಂದು ನೀವು - ನಾವು, ಇನ್ನಿತರ ಅನೇಕ ಪೂಜ್ಯ ಸ್ವಾಮಿಗಳು ಶರಣರು, ಬಸವಾದಿ ಪ್ರಮಥರ ಬಗ್ಗೆ ಎಷ್ಟು ಪ್ರಚಾರ ಮಾಡಿ ಭಕ್ತಿಹುಟ್ಟಿಸಿ, ಜನರ ಹೃದಯ ಭಿತ್ತಿಯ ಮೇಲೆ ಬಸವಗುರುವಿನ ಸುಂದರ ಚಿತ್ರ ಮೂಡಿಸಿದರೇನಂತೆ, ಮಹಾಚೈತ್ರದಂತಹ ಒಂದು ಕೊಳಕು ಪುಸ್ತಕ ಸಾಕು, ಬಸವಾದಿ ಪ್ರಮಥರ ಮೇಲೆ ಮಸಿ ಚೆಲ್ಲಲಿಕ್ಕೆ. ಅದೂ ನನ್ನ ಕರ್ತವ್ಯವಾಗಿರಲಿಲ್ಲವೆ? ಬಸವ ಗುರು ಏಕೆ ಆ ಪುಸ್ತಕದ ಕೊಳಕು ತನವನ್ನು ನನ್ನ ಗಮನಕ್ಕೆ ತರಬೇಕಿತ್ತು. ಆ ಪುಸ್ತಕ ರದ್ದತಿಗೆ ಹೋರಾಡಬೇಕು ಎಂಬುದು ಆ ಗುರುವಿನ ಸಂಕಲ್ಪವಲ್ಲವೆ?''

ಬೆಂಗಳೂರು ಸಮ್ಮೇಳನ ಬಸವ ಸಂದೇಶ ಪ್ರಚಾರಕ್ಕೆ ಸಮಾಜ ಸಂಘಟನೆಗೆ ಒಂದು ಪೂರಕವಾದ ಕಾರ್ಯಕ್ರಮ ಅದು ಅತ್ಯಂತ ಯಶಸ್ವಿಯಾಯಿತು ಎಂಬುದೂ ಗಮನಾರ್ಹ, ಗಣನಾರ್ಹವಲ್ಲವೆ?''

ಪೂಜ್ಯ ಗುರೂಜಿ ಹಾಗೆ ಏಕೆ ಅಂದರೊ ಅಂತೂ ಅವರ ಆ ಸಂಕಲ್ಪವನ್ನು ನಾನು ಈಡೇರಿಸಲಿಲ್ಲವಲ್ಲ ಎಂಬ ಕೊರಗು ನನಗೆ ಉಳಿಯಿತು. ಹಿರಿಯೂರಿನಲ್ಲಿ ಪ್ರವಚನ ನಡೆದಾಗ 2-3 ಸಲ, ನನ್ನ ವೀಸಾ ಮುಗಿದಿದೆ ಎಂದರಂತೆ; ಇದೇ ನನ್ನ ಕೊನೆಯ ಪ್ರವಚನ ಎಂದೂ ಅಂದರಂತೆ ಗುರುಗಳ ಅಂತರ್ವಾಣಿ ಈ ತರಹ ನುಡಿಸುತ್ತೇನೋ ಅನ್ನಿಸುತ್ತಿದೆ. ಏನೇ ಆಗಲಿ ಪೂಜ್ಯ ಅಪ್ಪಾಜಿಯವರು ಒಂದು ಅಂದೋಲವನ್ನು ಆರಂಭಿಸಿದರು. ಬಸವ ತತ್ವದ ಪುನರುತ್ಥಾನದ ಯೋಜನೆ ಹಾಕಿದರು. ''ಗುರು ಬಸವಣ್ಣನವರು ಕೊಟ್ಟುದೊಂದು ಸ್ವತಂತ್ರ ಧರ್ಮ. ಲಿಂಗಾಯತ । ಲಿಂಗವಂತ ಎಂಬ ಹೆಸರಿನ ಈ ಧರ್ಮ ಸ್ವಾವಲಂಬಿ, ಪರಿಪೂರ್ಣ, ಪ್ರಗತಿಪರ. ಇದು ಯಾವುದಾದರೊಂದು ವೃಕ್ಷದ ಒಂದು ಟೊಂಗೆ, ಟಿಸಿಲಲ್ಲ; ಸ್ವತಂತ್ರ ಧರ್ಮ. ಲಿಂಗಾಯತವು ಜಾತಿಮತ ಪಂಥವಲ್ಲ; 11 ಲಕ್ಷಣಗಳುಳ್ಳ, ಒಂದು ಸ್ವತಂತ್ರ ಧಾರ್ಮಿಕ ಸಂವಿಧಾನವನ್ನುಳ್ಳ ಧರ್ಮ. ಇದಕ್ಕೆ ಭಾರತದಲ್ಲಿ ಸಂವಿಧಾನಾತ್ಮಕ (Constitutional Recognition) ಮನ್ನಣೆ ಸಿಗಬೇಕು. ಜಾಗತಿಕ ಧರ್ಮಗಳ (Word Religion) ಸಾಲಿನಲ್ಲಿ ಮಾನ್ಯತೆ ಸಿಗಬೇಕು. ಬಸವಣ್ಣನವರ ಹೆಸರು ಜಾಗತಿಕ ಪ್ರವಾದಿಗಳ ಸಾಲಿನಲ್ಲಿ ಗುರುತಿಸಲ್ಪಡಬೇಕು. ಲಿಂಗಾಯತ ಸಮಾಜವು ಒಂದು ಶಿಸ್ತಿನ ಸಮಾಜವಾಗಿ ಏಕರೂಪದ ಆಚಾರ - ವಿಚಾರ ಅಳವಡಿಸಿಕೊಂಡು ಅಖಂಡ ಶರಣ ಸಮಾಜವಾಗಬೇಕು.'' ಪೂಜ್ಯ

ಅಪ್ಪಾಜಿಯವರ ಈ ಸದಿಚ್ಛೆಯನ್ನು ಪೂರ್ಣಗೊಳಿಸಲು ನಾವು - ನೀವುಗಳು ತಯಾರಾಗಬೇಕು. ನಮ್ಮ ಸಂಸ್ಥೆಯ ಮಾತ್ರವಲ್ಲ ಸಮಾಜದ ಒಂದು ಬಹುದೊಡ್ಡ ಆಧಾರ ಸ್ತಂಭವಾಗಿದ್ದ ಪೂಜ್ಯ ಅಪ್ಪಾಜಿಯವರ ನಿರ್ಗಮನದಿಂದ ನಮಗೆಲ್ಲ ಆಘಾತವಾಗಿ, ಅನಾಥ ಭಾವ ಬಂದಿರುವುದು ಸ್ವಾಭಾವಿಕ. ಆದರೂ ನಾನು ಎದೆಗೆಟ್ಟಿಲ್ಲ. ನೀವೆಲ್ಲ ನಮ್ಮೊಡನಿದ್ದೀರಿ; ಇಡೀ ಸಮಾಜವೇ ನಮ್ಮೊಡನಿದೆ ಎಂಬ ಆತ್ಮವಿಶ್ವಾಸ ನನಗಿದೆ. "ಶರಣ ಮೇಳ" ಒಂದು ದೊಡ್ಡ ಜವಾಬ್ದಾರಿ. ಪೂಜ್ಯ ಅಪ್ಪಾಜಿಯವರ ಪ್ರವಚನವು ಆಗುತ್ತಾ ಹೋದಂತೆ ಬಸವ ಪ್ರಭಾವ ವಲಯ ವಿಸ್ತರಿಸಿ, ಜನಶಕ್ತಿ ಮತ್ತು ಧನ ಬಲ ಎರಡೂ ಪ್ರಾಪ್ತವಾಗುತ್ತಿತ್ತು, ಈಗ ಅದಿಲ್ಲವಾಗಿ ಕೊರತೆಯಾಗುತ್ತದೆ ನಿಜ; ಆದರೆ ಆ ಕಾರ್ಯಭಾರವನ್ನು ನಿಮಗೆ ವರ್ಗಾಯಿಸುತ್ತಿದ್ದೇನೆ. ಇನ್ನು ನೀವೆಲ್ಲರೂ ಶರಣ ಮೇಳದ ಯಶಸ್ಸಿಗೆ ದುಡಿದು ಅದನ್ನು ವಿಸ್ತರಿಸಬೇಕು.

ಪೂಜ್ಯ ಅಪ್ಪಾಜಿಯದು ಸಾರ್ಥಕದ ಬದುಕು. ಯಾರಿಗೂ ಒಂದು ದಿನವೂ ಭಾರವಾಗದೆ, ನರಳದೆ, ಮನೋವೈಕಲ್ಯ, ವೃದ್ಧಾಪ್ಯಕ್ಕೊಳಗಾಗದೆ ಕಾಯಕ ನಿರತರಾಗಿರುವಾಗಲೇ ಕ್ರಿಯಾ ವಿಶ್ರಾಂತಿಯನ್ನು ಪಡೆದಿದ್ದಾರೆ. ಅವರ ಬದುಕಿನ ಸಾರ್ಥಕತೆಗೆ ಅಳತೆಗೋಲೆಂಬಂತೆ ನೀವೆಲ್ಲ ಕಂಗೆಟ್ಟು ಬಂದಿದ್ದೀರಿ, ಆತ್ಮೀಯರೊಬ್ಬರನ್ನು ಕಳಕೊಂಡಂತೆ ದುಃಖಭರಿತರಾಗಿದ್ದೀರಿ. ದೇವರು ಸಹ ಅದನ್ನು ಸಾಂಕೇತಿಕವಾಗಿ ಸಾಕ್ಷಿ ನುಡಿದಿದ್ದಾನೆ. ಪೂಜ್ಯರಿಗೆ ಹಾಕಿರುವ ಮಲ್ಲಿಗೆ ಮಾಲೆಗಳ ಮೇಲೆ ಸಾವಿರಾರು ಜೇನ್ನೊಣಗಳು ಲೀಲಾನಂದದಲ್ಲಿ ಹಾರಾಡುತ್ತಿವೆ. ಅವುಗಳಲ್ಲಿ ವ್ಯಗ್ರತೆ ಇಲ್ಲ, ಸಾನಂದವಿದೆ. "ಅನುಭವ ಮಂಟಪ ಎಂಬ ಜೇಂಗೂಡು, ಬಸವಣ್ಣ ಎಂಬ ರಾಣಿ ಜೇನಿನ ನೇತೃತ್ವದಲ್ಲಿ ಅನೇಕ ಜಾತಿಮತ ಪಂಗಡಗಳಿಂದ ಬಂದ ಶರಣರೆಂಬ ಜೇನ್ನೊಣಗಳು ತಮ್ಮ ತಮ್ಮ ಅನುಭಾವದ ಪರಿಪಾಕ ತುಂಬಿ ವಚನ ಸಾಹಿತ್ಯ ಎಂಬ ಜೇನು ತುಪ್ಪವನ್ನು ಸಂಗ್ರಹಿಸಿದರು." ಎಂಬುದನ್ನು ಅಪ್ಪಾಜಿಯವರು ಪ್ರವಚನದಲ್ಲಿ ಉಲ್ಲೇಖಿಸುತ್ತಿದ್ದರು. ನಮ್ಮ ಮನಸ್ಸುಗಳು ನೊಣ ಆಗಬಾರದು, ಜೇನ್ನೊಣವಾಗಬೇಕು. ನೊಣ ಎಲ್ಲಿ ಬೇಕಾದರೂ ಕೂಡ್ರುತ್ತದೆ. ಜೇನ್ನೊಣ ಆಯ್ದ ಸ್ಥಳದಲ್ಲಿ ಅದೂ ಹೂವಿನ ಮೇಲೆ ಕೂರುತ್ತದೆ. ನಮ್ಮ ಮನಸ್ಸು ದೇವನಿಗೆ ಸಂಬಂಧಿಸಿದ ವಸ್ತುಗಳ ಮೇಲೆ ಮಾತ್ರ ಕೂಡಬೇಕು" ಎಂದು ಉಪದೇಶಿಸುತ್ತಿದ್ದರು.

"ಒಂದು ಸ್ಥಳದಲ್ಲಿ ಬಹಳಷ್ಟು ಜೇನ್ನೊಣಗಳು ಹಾರಾಡುತ್ತವೆ ಎಂದರೆ ಏನು ಅರ್ಥ? ಅಲ್ಲೆಲ್ಲೋ ಅವುಗಳಿಗೆ ಸಿಕ್ಕುವ ಮಕರಂದವಿದೆ, ತೋಟವಿದೆ ಎಂದು. ಹಾಗೆಯೇ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗಿನ ಭೂಭಾಗದಿಂದೆಲ್ಲ ಶರಣರು ಆಕರ್ಷಿಸಲ್ಪಟ್ಟು ಕಲ್ಯಾಣಕ್ಕೆ ಬಸವಣ್ಣನ ಬಳಿಗೆ ಬರಲು ಏನು ಕಾರಣ? ಅಲ್ಲಿ

ಧರ್ಮದ ಹೂವುಗಳು ಅರಳಿದ್ದವು. ದಾರ್ಶನಿಕತೆಯ ಮಕರಂದ ಸಿಗುತ್ತಿತ್ತು." ಹೀಗೆ ಬಣ್ಣಿಸುತ್ತಿದ್ದರು, ಅದಕ್ಕೆಂದೇ ಆ ಜೇನ್ನೊಣಗಳು ಬಂದು ಪೂಜ್ಯರ ಶರೀರಕ್ಕೆ ಹೊದ್ದಿಸಿದ ಹೂಮಾಲೆಗಳನ್ನು ಮುತ್ತಿವೆ.

ಎಷ್ಟು ಮಾತನಾಡಿದರೂ ಭಾವನೆಗಳು ಬತ್ತವು; ಶಬ್ದಗಳು ಸಾಲವು, ಆದ್ದರಿಂದ ಸಮಾರೋಪ ಮಾಡುತ್ತೇನೆ. ಗಣ ದಾಸೋಹವನ್ನು ಎಂದು ಇಟ್ಟುಕೊಳ್ಳುವಿರಿ ಎಂದು ಕೆಲವರು ಕೇಳಿದರು. ನನಗನ್ನಿಸುತ್ತದೆ, ಬರಬೇಕಾದ ನೀವೆಲ್ಲರೂ ಬಂದೇ ಬಿಟ್ಟಿದ್ದೀರಿ. ಇನ್ನೊಮ್ಮೆ ನಿಮ್ಮನ್ನು ಗಣದಾಸೋಹಕ್ಕೆ ಬನ್ನಿರಿ ಎಂದು ಆಹ್ವಾನಿಸುವ ಬದಲು ನಾನು ಹೀಗೆ ಸಲಹೆ ಕೊಡಬಯಸುತ್ತೇನೆ. ನೀವು ಎಲ್ಲೆಲ್ಲಿರುವಿರೋ ಅಲ್ಲೆಲ್ಲ ಸಂಸ್ಮರಣಾ ಕಾರ್ಯಕ್ರಮ ಇಟ್ಟುಕೊಳ್ಳಿರಿ, ಪೂಜ್ಯ ಅಪ್ಪಾಜಿಯವರ ಧ್ಯೇಯೋದ್ದೇಶ, ವ್ಯಕ್ತಿತ್ವ ಕುರಿತು ಗುಣಗಾನ ಮಾಡಿ, ಸ್ಥಳೀಯರಿಗೆ ಪರಿಚಯ ಮಾಡಿಕೊಡಿರಿ. ಇದರಿಂದ ಹೆಚ್ಚು ತತ್ತ್ವ ಪ್ರಚಾರವಾಗುವುದು. ಈ ಕಾರ್ಯ ಕ್ರಮವನ್ನು ಸಂಘಟನೆಗೆ ಬಳಸಿಕೊಳ್ಳಿರಿ ಅದುವೇ ನಿಜವಾದ ಶ್ರದ್ಧಾಂಜಲಿ.

ಈಗೊಂದು ವಾರದ ಕೆಳಗೆ ಒಂದು ದಿನ ನನಗೆ ಅಂತರ್ ಪ್ರೇರಣೆಯಾಯಿತು ಅದು ಏನೆಂದರೆ, ಪ್ರತಿದಿನ ಸಂಜೆ 7 ಗಂಟೆಗೆ ಒಂದು ಸಂಕ್ಷಿಪ್ತ ಪ್ರಾರ್ಥನೆ ಕೇವಲ 3-4 ನಿಮಿಷಗಳ ಅವಧಿಯನ್ನು, ನಾವು ಎಲ್ಲೇ ಇರಲಿ. ಮಾಡಬೇಕು. ಇದಕ್ಕೆ ಹೆಸರು ಏನಿಡಬೇಕು ಎಂಬುದು ನನಗಿನ್ನೂ ಹೊಳೆದಿಲ್ಲ(1: ವರದಿಯ ಕಡೆಯಲ್ಲಿ ನೋಡಿ) ಸ್ವಂತ ವಾಹನಗಳಲ್ಲಿ ಚಲಿಸುತ್ತಿದ್ದರೆ ಅದನ್ನು ನಿಲ್ಲಿಸಿ, ಸಾರ್ವಜನಿಕ ವಾಹನವಾದರೆ ಅದರಲ್ಲೇ, ಮನೆಯಲ್ಲಿದ್ದರೆ ಅಲ್ಲಿ - ಸರಿಯಾಗಿ ಏಳುಗಂಟೆಗೆ ಮಾಡಬೇಕು. ಬಸವ ಮಂತ್ರ, ಬಸವಂ ಪ್ರಣವಾಕಾರಂ, ಪ್ರಣವಾರೂಢನು, ಇವನಾರವ, ಬಸವ ಗುರುವಿನ ತತ್ತ್ವ, ಶ್ರೀ ಗುರುಬಸವಂಗೆ ಶರಣಾಗಿಹೆ, ಹೇ ಪರಮಾತ್ಮ, ಷಟ್ ಸೂತ್ರ ಘೋಷಣೆ, ಜಯ ಬಸವರಾಜ, ಇಷ್ಟು ಒಬ್ಬರು ಹೇಳಲು 4 ನಿಮಿಷ ಸಾಕು; ಪುನರಾವರ್ತಿಸಿದರೆ 8 ನಿಮಿಷ.

7 ಗಂಟೆಗೆ ಏಕೆಂದರೆ ಎಲ್ಲರೂ ಮನೆ ಸೇರಿರುವರು, ಮಕ್ಕಳು ಆಟವಾಡಿ ಕೈಕಾಲು ಮುಖ ತೊಳೆದು ಪಾಠ ಓದುವ ಸಮಯ; 770 ನಮ್ಮ ಧರ್ಮ ಸಂಸ್ಕೃತಿಯಲ್ಲಿ ಮಹತ್ವಪೂರ್ಣ ಅಂಕಿ. "ಲೌಕಿಕವಾಗಿ ಏಳು, ಪಾರಮಾರ್ಥಿಕವಾಗಿ ಏಳು, ಆಗ ಶೂನ್ಯ (ದೇವರು, ಪರಿಪೂರ್ಣಕ್ಕೆ) ಸಂಪಾದನೆ," ಎಂಬ ತತ್ತ್ವ ಈ ಸಂಖ್ಯೆಯಲ್ಲಿದೆ. (2. ವರದಿಯ ಕಡೆಯಲ್ಲಿ ನೋಡಿರಿ) ಆದ್ದರಿಂದ 7ಗಂಟೆ ಇಡೋಣ. ಹಿರಿಯೂರಿಗೆ ನಾನು ದಿ. 1-7-95ರಂದು ಆಗಮಿಸಿ, ಸಾರ್ವಜನಿಕವಾಗಿ ಪ್ರವಚನ ಮಾಡುವವಳಿದ್ದೆ. ಈ 'ಸಂಜೆಯ ಪ್ರಾರ್ಥನೆ' ವಿಷಯ ಬಸವ ಧರ್ಮದ ಜಗದ್ಗುರು ಪೀಠಾಧೀಶರೊಡನೆ ಚರ್ಚಿಸಿ ಅವರ ಅನುಮೋದನೆ

ಪಡೆಯುವ ಇಷ್ಟವಿತ್ತು. ಅನುಮೋದನೆ ದೊರೆತ ನಂತರ ನಮ್ಮ ಶರಣ ಬಂಧುಗಳೆಲ್ಲರಿಗೆ ತಿಳಿಸಿ ಬಸವ ಪಂಚಮಿಯಿಂದ (ದಿ. 1-8-95) ಆಚರಣೆಗೆ ತರುವ ಅಪೇಕ್ಷೆ ಇತ್ತು. ಆದರೆ ಒಂದು ತಿಂಗಳು ಮೊದಲೇ ಪೂಜ್ಯರು ಲಿಂಗೈಕ್ಯರಾದರು. ಆದ್ದರಿಂದ ಇಂದಿನಿಂದಲೇ ಅವರ ನೆನಹಿನಲ್ಲೇ ಆಚರಣೆಗೆ ತರೋಣ. ಇದರಿಂದ ಅಪಾರ ಶಿಸ್ತು, ಏಕರೂಪತೆ ಸಮಾಜದಲ್ಲಿ ಬರುತ್ತದೆ.

ಕಡೆಯದಾಗಿ ಒಂದು ಕಾರ್ಯಕ್ರಮ

'ಪೂಜ್ಯ ಅಪ್ಪಾಜಿ ಒಂದೆರಡು ಬಾರಿ ನುಡಿದಿದ್ದರು, ''ನನ್ನ ನಂತರ ನೀವೇ ಉತ್ತರಾಧಿಕಾರಿಯಾಗಿ ಕಾರ್ಯಕಲಾಪ ಮುಂದುವರಿಸಬೇಕು. ಗಂಗಾ ಮಾತಾಜಿ ಅಕ್ಕಮಹಾದೇವಿ ಪೀಠಕ್ಕೆ ಎರಡನೆಯ ಪೀಠಾಧಿಕಾರಿಯಾಗಬೇಕು ಎಂದು.'' ಈಗೆಲ್ಲ ಆ ಮಾತೇಕೆ? ಎಂದು ನಾವು ವಿರೋಧಿಸಿದ್ದುಂಟು. ಆದರೆ ಅವರಂದಂತೆ ಇಂದು ಈ ಸನ್ನಿವೇಶದಲ್ಲಿ ನಾನು ವಹಿಸಿಕೊಳ್ಳಬೇಕಾದ್ದು ಬಹಳ ವ್ಯಾಕುಲತೆಯನ್ನುಂಟು ಮಾಡಿದೆ. ದೇವರ ಇಚ್ಛೆ ಎಂದು ಸ್ವೀಕರಿಸಲೇ ಬೇಕಾಗಿದೆ' ಎಂದು ಹೇಳಿದರು.

'ಪೂಜ್ಯ ಅಪ್ಪಾಜಿಯವರು ಸುಮಾರು ಇಪ್ಪತ್ತು ವರ್ಷಕಾಲ ಧರಿಸಿದ್ದ ಜಪಮಾಲೆಯನ್ನು ಇದೀಗ ಗಂಗಾಮಾತಾಜಿಗೆ ಆಶೀರ್ವಾದ ಪೂರ್ವಕವಾಗಿ ಹಾಕುತ್ತಿರುವೆ. ಮುಂದಿನ ಪೀಠಾರೋಹಣ ಕಾಲದಲ್ಲಿ ಅವರಿಗೆ ಉತ್ತರಾಧಿಕಾರವನ್ನು ವಿದ್ಯುಕ್ತವಾಗಿ ನೀಡಲಾಗುವುದು' ಎಂದು ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರಿಗೆ ಜಪಮಾಲೆ ಹಾಕಿದರು. ''ಪೂಜ್ಯ ನಿಜಗುಣಾನಂದ ಸ್ವಾಮಿಗಳು ಹುಟ್ಟಿನಿಂದ ಬ್ರಾಹ್ಮಣರಾದರೂ, ಪೂರ್ವಾಶ್ರಮ ತೊರೆದು ಬಸವ ಪಥಕ್ಕೆ ಬಂದಿದ್ದಾರೆ. ಅವರಿಗೆ ಚಿತ್ರದುರ್ಗದ ಬಸವ ಮಂಟಪದಲ್ಲಿ ದಿ. 2-8-1995ರಂದು, ಜಂಗಮ ದೀಕ್ಷೆಯಾಗಿ ಕಾಷಾಯ ಲಾಂಛನವನ್ನು ನೀಡಬೇಕೆಂಬುದು ಪೂಜ್ಯರ ಸದಿಚ್ಛೆಯಾಗಿತ್ತು. ಪೂಜ್ಯರ ಸನ್ನಿಧಿಯಲ್ಲಿ ನಾನು ಜಂಗಮದೀಕ್ಷೆ ನೀಡಿ ಪ್ರತಿಜ್ಞಾವಿಧಿ ಬೋಧಿಸುವವಳಿದ್ದೆ. ಅದಕ್ಕಾಗಿ ಚಿತ್ರದುರ್ಗ ರಾಷ್ಟ್ರೀಯ ಬಸವ ದಳದವರು ಆಹ್ವಾನ ಪತ್ರ ಮುದ್ರಿಸಿದ್ದರು. ದಿ. 2-8-95ರಂದು ಚಿತ್ರದುರ್ಗದ ಪ್ರಾರ್ಥನಾ ಸಭೆಯಲ್ಲಿ ಭಾಗವಹಿಸಿ ಜಂಗಮದೀಕ್ಷೆ ಕೊಡುವುದಿತ್ತು. ಎರಡು ದಿವಸ ಮೊದಲೇ ಈ ಅನಿರೀಕ್ಷಿತ ಘಟನೆ ಸಂಭವಿಸಿತು. ಪೂಜ್ಯ ಅಪ್ಪಾಜಿಯವರ ಆಶಯ ಅರ್ಥವಾಗಬಾರದೆಂದು ಅದೇ ಬಸವ ಮಂಟಪದಲ್ಲಿ, ಪೂಜ್ಯರ ಪಾರ್ಥಿವ ಶರೀರದ ಸನ್ನಿಧಾನದಲ್ಲಿ ಕಾಷಾಯ ವಸ್ತ್ರ, ವಚನ ಸಾಹಿತ್ಯ ನೀಡಿ ಪ್ರತಿಜ್ಞಾನಿಧಿ ಬೋಧಿಸಲಾಯಿತು. ಪೂಜ್ಯ ಅಪ್ಪಾಜಿ ಹೊದೆಯುತ್ತಿದ್ದ ಕಾವಿಶಲ್ಯವನ್ನೀಗ ಪೂಜ್ಯ

ನಿಜಗುಣಾನಂದ ಸ್ವಾಮಿಗಳಿಗೆ ಆಶೀರ್ವಾದ ಪೂರ್ವಕವಾಗಿ ಹೊದ್ದಿಸುತ್ತಿದ್ದೇನೆ.'' ಎಂದು ಪೂಜ್ಯ ಮಾತಾಜಿ ಹೊದ್ದಿಸಿದರು. ''ಬೆಂಗಳೂರಿಂದ ರಾಣೇಬೆನ್ನೂರಿಗೆ ಹೋಗುವಾಗ ಮಾರ್ಗಮಧ್ಯದಲ್ಲಿ ಪೂಜ್ಯ ಅಪ್ಪಾಜಿಯವರ ದರ್ಶನ ಪಡೆದು ಹಲವಾರು ವಿಷಯ ಚರ್ಚಿಸಿದೆ. ಆಗ ವಿಜಯಕುಮಾರ್ ಅವರು (ಬಸವ ಕಿರಣ ಸಂಪಾದಕರು ಮತ್ತು ಗಣನಾಯಕರು) ಶಿವಮೊಗ್ಗಾದಿಂದ ಬಂದಿರುವರು. ಕಾರ್ಯಾಲಯದ ಜವಾಬ್ದಾರಿಹೊತ್ತಿರುವರು.'' ಎಂದಾಗ, ''ಅಹುದೇ, ಅವರು ಬಂದಿರುವುದು ಕೇಳಿ ನನಗೆ ತುಂಬಾ ಸಮಾಧಾನವಾಯಿತು.'' ಎಂದು ಸಂತೃಪ್ತಿಯಿಂದ ನುಡಿದರು. ಅವರು ಸಾತ್ವಿಕರು, ಉನ್ನತ ವ್ಯಕ್ತಿತ್ವ ಹೊಂದುವರು.'' ಎಂದರು. ಈಗ ನನಗೆ ಈ ಮಾತುಗಳನ್ನು ಮೆಲುಕು ಹಾಕಿದಾಗ ಅಪ್ಪಾಜಿ ಅಂದು ಆಡಿದ ಪ್ರತಿಯೊಂದು ಮಾತು 'ದೇವಾದೇಶ'ವಾಗಿತ್ತು ಎನ್ನಿಸುತ್ತಿದೆ. ವಿಜಯಕುಮಾರ ಅವರ ಮೇಲೆ ಪೂಜ್ಯ ಅಪ್ಪಾಜಿಯವರ ವಾತ್ಸಲ್ಯ - ಅಭಿಮಾನ ಅಗಾಧವಾಗಿದ್ದವು. ಪೂಜ್ಯರು ಅಸಂಖ್ಯಾತ ಜನ ಸಾಧಕ - ಸಾಧಕಿಯರನ್ನು ಮಕ್ಕಳಿಗಿಂತಲೂ ಮಿಗಿಲಾಗಿ ಆದರಿಸಿದರು. ಹೆಚ್ಚಿನ ಜನ ಋಣ ತೀರಿಸಿದರೂ ಅನೇಕರು ಗುರು ಋಣ ತೀರಿಸಲಿಲ್ಲ. ಆದ್ದರಿಂದ ಅವರು ತೂಗಿತೂಗಿ ಅಂದು ಆಡಿದ ಮಾತುಗಳಲ್ಲಿ 'ಸಮರ್ಥ ಆಧ್ಯಾತ್ಮಿಕ ಮಗ ಸಿಕ್ಕಿದ' ಎಂಬ ಧ್ವನಿ ಇಂದು ನನಗೆ ಗೋಚರವಾಗುತ್ತಿದೆ. ಆದ್ದರಿಂದ ಪೂಜ್ಯರು ಇಟ್ಟುಕೊಂಡ ಕನಸು ನನಸಾಗುವಂಥ ವ್ಯಕ್ತಿಯಾಗಿ, ವಿಜಯಾನಂದರಾಗಿ ಇವರು ರೂಪುಗೊಳ್ಳಲೆಂದು ಹಾರೈಸಿ ಗುರೂಜಿಯವರು ಧರಿಸುತ್ತಿದ್ದ ಗಡಿಯಾರವನ್ನು ವಿಜಯಾನಂದರಿಗೆ ಆಶೀರ್ವಾದ ಪೂರ್ವಕವಾಗಿ ನೀಡುವೆ.'' ಎಂದು ಪೂಜ್ಯ ಮಾತಾಜಿಯವರು ನುಡಿದಾಗ ನಾನು ದಿಗ್ಭ್ರಾಂತನಾದೆ. ಪೂಜ್ಯ ಗುರೂಜಿ ನನ್ನ ಮೇಲೆ ಅಂಥ ವಾತ್ಸಲ್ಯ ಅಭಿಮಾನ ಇಟ್ಟಿದ್ದರೇ ಎಂದು ಕೃತಜ್ಞತಾಭಾವದ ಧಾರೆಯಲ್ಲಿ ತೊಯ್ದುಹೋದೆ. ಅವರಿಟ್ಟುಕೊಂಡಂತಹ ಉದಾತ್ತ ಕನಸನ್ನು ನನಸಾಗಿಸುವ ಶಕ್ತಿ ನನಗೆ ಕೊಡಿರೆಂದು ಗುರು (ಬಸವಣ್ಣ), ಲಿಂಗ (ಸೃಷ್ಟಿಕರ್ತ), ಜಂಗಮ (ಪೂಜ್ಯ ಅಪ್ಪಾಜಿ) ರಲ್ಲಿ ಹೃತ್ಪೂರ್ವಕವಾಗಿ ಬೇಡಿದೆ.

ಈಗಾಗಲೇ ಜಂಗಮ ಲಾಂಛನಧಾರಿಗಳಾಗಿ ಬಸವ ಗುರುಪದತಲಕ್ಕೆ ತಮ್ಮನ್ನು ತಾವು ಅರ್ಪಿಸಿಕೊಂಡಿರುವ ಅಕ್ಕಂದಿರಾದ ಪೂಜ್ಯ ಶ್ರೀ ದಾನೇಶ್ವರಿ ಮಾತಾಜಿ ಪೂಜ್ಯ ಶ್ರೀ ನೀಲಾಂಬಿಕಾ ಮಾತಾಜಿ ಮತ್ತು ಪೂಜ್ಯ ಶ್ರೀ ಬಸವ ರತ್ನ ಮಾತಾಜಿ ಅವರಿಗೆ ಪ್ರೋತ್ಸಾಹಕರ ಮಾತುಗಳನ್ನಾಡಿ ಹೆಚ್ಚಿನ ಸೇವೆ ಮಾಡಲೆಂದು ಹಾರೈಸಿ ಪೂಜ್ಯ ಮಾತಾಜಿಯವರು ಬಸವ ಭಾವಚಿತ್ರವನ್ನು ಅನುಗ್ರಹಿಸಿದರು. ಮುಂದುವರೆದು ಪೂಜ್ಯ ಮಾತಾಜಿಯವರು ''ಅಕ್ಕಮಹಾದೇವಿಯನ್ನು ಕುರಿತು ಪೂಜ್ಯ ಅಪ್ಪಾಜಿ ಅಭಿಮಾನದ ಮಾತನ್ನಾಡಿ ತುಂಬಾ ಸಾತ್ವಿಕಳು; ಓದಬೇಕು, ನಿಷ್ಠೆಯಿಂದ ಪೂಜೆ

ಮಾಡಬೇಕೆಂಬ ಹಂಬಲವಿದೆ. ಆಕೆಗೂ ಜಂಗಮ ದೀಕ್ಷೆ ಕೊಡಿರಿ. ಶ್ರಾವಣ ಮಾಸದ ಪ್ರವಚನಕ್ಕೆ ಕಳಿಸಿರಿ. ಬಿಡುವು ಸಿಕ್ಕಾಗೆಲ್ಲ ಪ್ರವಚನದ ನೋಟ್ಸ್ ಬರೆಸಿದ್ದೇನೆ.'' ಎಂದರು. ''ತಮ್ಮ ಪ್ರವಚನದ ಸಿಬ್ಬಂದಿಯಲ್ಲಿ ಅಕ್ಕಮಹಾದೇವಿಯೇ ಹಿರಿಯಳು. ಆಕೆಯನ್ನು ಸ್ವತಂತ್ರವಾಗಿ ಪ್ರವಚನಕ್ಕೆ ಕಳಿಸಿದರೆ, ಪ್ರವಚನದ ವ್ಯವಸ್ಥೆ ಯಾರು ಮಾಡುವರು? ಯಾಕಿಷ್ಟು ಅವಸರ; ಕಳಿಸೋಣವಂತೆ.'' ಎಂದೆ. ''ಸುಮ್ಮನೆ ಹೇಳಿದೆ, ನಿಮ್ಮ ಗಮನದಲ್ಲಿರಲಿ. ನಿಮಗೆ ತಿಳಿಸಿಬಿಟ್ಟರೆ ನನಗೆ ಸಮಾಧಾನ.'' ಈ ಮಾತುಗಳನ್ನು ಅಪ್ಪಾಜಿ ಏಕೆ ಆಡಿದರೊ?! ಹೇಳಿ ಒಂದು ತಿಂಗಳು ಸಹ ಆಗಲಿಲ್ಲ ಅವರು ನುಡಿದುದು ಹುಸಿಯಾಗಲಿಲ್ಲ; ಅಕ್ಕಮಹಾದೇವಿ ಶ್ರಾವಣಮಾಸದ ಪ್ರವಚನಕ್ಕೆ ಹೋಗುವಂತೆ ಆಗಿಯೇ ಬಿಟ್ಟಿತು. ಇದು ಪೂಜ್ಯರ ಪ್ರಸಾದ ವಾಣಿಯೋ ಅಥವಾ ಅವರ ಅಂತರಾತ್ಮ ತಾನಾಗಿ ಈ ಮಾತುಗಳನ್ನು ಮುನ್ಸೂಚನೆಯಾಗಿ ನೀಡಿತ್ತೋ. ಬುದ್ಧದೇವ ತನ್ನ ಧರ್ಮ ಪ್ರಚಾರಕರನ್ನು ನಿಯೋಜಿಸುವ ರೀತಿಯ ದೃಶ್ಯವಿದಾಗಿದೆ. ಏನೇ ಇರಲಿ ಗುರುಗಳ ಇಂಥ ಆಶೋತ್ತರವನ್ನು ಪೂರೈಸುವ ಶಕ್ತಿ ಅಕ್ಕಮಹಾದೇವಿಗೆ ಬರಲಿ.'' ಎಂದು ಪೂಜ್ಯ ಮಾತಾಜಿಯವರು ಸೋದರಿ ಅಕ್ಕಮಹಾದೇವಿಗೆ ಬಸವ ಭಾವಚಿತ್ರವನ್ನು ಮತ್ತು ಪೂಜ್ಯರು ತಮ್ಮ ಪೆಟ್ಟಿಗೆಯಲ್ಲಿ ಇಟ್ಟಿರುತ್ತಿದ ಬಸವ ಲಿಂಗ ಮುದ್ರೆಯನ್ನು ಅನುಗ್ರಹಿಸಿದರು. ಬಸವ ಗಂಗೋತ್ರಿಯಲ್ಲಿ ಮುದ್ರಣಾಲಯ, ಕಲ್ಯಾಣಕಿರಣ, ಕಲ್ಯಾಣ ಮಂಟಪ ಎಲ್ಲ ನೋಡಿಕೊಂಡು ಹೋಗುತ್ತಿರುವ ನಿಸ್ವಾರ್ಥ, ತ್ಯಾಗಜೀವಿ ಸೋದರಿ ಕಸ್ತೂರಿಯವರಿಗೂ ಬಸವ ಭಾವಚಿತ್ರ ನೀಡಿ ಅನುಗ್ರಹಿಸಿದರು. ಉಳಿದೆಲ್ಲ ಸಾಧಕ - ಸಾಧಕಿಯರಿಗೂ ಆಶೀರ್ವಾದ - ಹರಕೆ ನೀಡಿ ಎಲ್ಲರೂ ಒಂದು ಕುಟುಂಬದಂತೆ ಹೊಂದಿಕೊಂಡು ಧರ್ಮಗುರು - ದೀಕ್ಷಾಗುರು ಉಭಯತರಿಗೂ ಕೀರ್ತಿ ತರಬೇಕು'' ಎಂದು ಸೂಚಿಸಿದರು.

ಗಣನಾಯಕರಿಗೆ ಆದೇಶ

''ನಮ್ಮ ದೇಶದಲ್ಲಿ, ಭಾರತೀಯ ಸಂಸ್ಕೃತಿಯಲ್ಲಿ ಒಂದು ವಿಚಿತ್ರ ಲಕ್ಷಣವಿದೆ. ಒಬ್ಬೊಬ್ಬರ ಕಾಲಕ್ಕೆ ಅತ್ಯದ್ಭುತವಾಗಿ ಕಾರ್ಯವಾಗುತ್ತದೆ. ಆನಂತರ ಅದು ಮುಂದುವರಿಯದೆ ಕುಂಠಿತವಾಗುತ್ತದೆ. ಹೀಗಾಗದೆ ನಿರಂತರವಾಗಿ, ಅವ್ಯಾಹತವಾಗಿ ಯಾರಾದರೂ ಆರಂಭಿಸಿದ ಮಹಾನ್ ಕಾರ್ಯಗಳು ಜರುಗಬೇಕು. ಈಗ ಪೂಜ್ಯ ಗುರುಗಳು ನಾವು ಬಸವ ಧರ್ಮ ಪುನರುತ್ಥಾನದ ಅಂಗವಾಗಿ ಶರಣ ಮೇಳ, ಬಸವ ಧರ್ಮದ ಮಹಾ ಜಗದ್ಗುರು ಪೀಠ, ರಾಷ್ಟ್ರೀಯ ಬಸವ ದಳ, ಬಸವ ಧರ್ಮ ಸಂಸತ್ತು, ಗಣಮೇಳಮುಂತಾಗಿ ಮಾಡಿದ್ದೇನೆ. ಇವು

ನಿರಂತರವಾಗಿ ಮುಂದುವರಿಯಬೇಕೆಂದು ಜವಾಬ್ದಾರಿಯನ್ನು ವರ್ಗಾಯಿಸಲೋಸುಗ ಗಣ ನಾಯಕ - ಗಣ ನಾಯಕಿಯರನ್ನು ಆಯ್ಕೆ ಮಾಡಿ ದಿ. 13-5-95ರಂದು ಅಖಿಲ ಭಾರತ ತೃತೀಯ ಬಸವ ಧರ್ಮ ಸಮ್ಮೇಳನದಲ್ಲಿ 12 ಜನರಿಗೆ ಪದವಿ ನೀಡಲಾಗಿದೆ. ಇದು ಮಾಡಿದ ಕಾರ್ಯಕ್ಕಾಗಿ ಪ್ರಶಸ್ತಿಯಲ್ಲ, ಬಿರುದಲ್ಲ. ಇನ್ನು ಮುಂದು ನೀವು ಮಾಡಬೇಕಾದ ಕಾರ್ಯ ಬಹಳವಿದೆ. ನೀವು ಸಮಾಜದ ಸ್ತಂಭಗಳಾಗಬೇಕು ಎಂದು ಹೊಣೆಗಾರಿಕೆ ವಹಿಸಿ ಕೊಟ್ಟಿರುವುದೇ ಆಗಿದೆ. ಈ ಹನ್ನೆರಡೂ ಜನರು ತನು-ಮನ-ಧನ-ಸಮಯ-ಅಭಿಮಾನ-ಪ್ರಾಣ ಎಂಬ ಷಡು ಸಂಪತ್ತನ್ನು ಬಸವ ಧರ್ಮದ ಪ್ರಚಾರ ಮತ್ತು ರಕ್ಷಣೆ, ಲಿಂಗಾಯತ ಸಮಾಜ ಸಂಘಟನೆ ಇವುಗಳಿಗಾಗಿ ಮೀಸಲಿಡಬೇಕು. ಇವರು ಹನ್ನೆರಡೂ ಜನ ಬಂದು ನನ್ನಿಂದ ವಿಭೂತಿಗಟ್ಟಿಗಳನ್ನು ಪಡೆದು, ನಮ್ಮ ಸಂಕಲ್ಪ ಪೂರೈಸುತ್ತೇವೆಂದು ದೃಢಪಡಿಸಿ, ಆ ವಿಭೂತಿಗಟ್ಟಿಗಳನ್ನು ಪೂಜ್ಯ ಅಪ್ಪಾಜಿಯವರ ಪಾರ್ಥಿವ ಶರೀರದ ಮೇಲೆ ಇಡಬೇಕು'' ಎಂದು ಕರೆದಾಗ,

1. ಗಣ ಪ್ರಮುಖ ಬಸವ ಕುಮಾರ್ ಪಾಟೀಲ, ಬೀದರ
2. ಗಣ ನಾಯಕ ಡಾ।। ನಿತೀನ ಚಂದ್ರ ಹತ್ತೀಕಾಳ, ಧಾರವಾಡ
3. ಗಣ ನಾಯಕ ವಿಜಯಾನಂದರು, ಶಿವಮೊಗ್ಗ
4. ಗಣ ನಾಯಕ ಸುಭಾಷ್ ಪಾಟೀಲ, ಹೈದರಾಬಾದ
5. ಗಣನಾಯಕ ಆರ್. ಚಂದ್ರಶೇಖರ, ನೀಲಗಿರಿ
6. ಗಣ ನಾಯಕ ಆರ್.ಜಿ. ಶೆಟಗಾರ, ಗುಲಬರ್ಗಾ
7. ಗಣ ನಾಯಕಿ. ದೇವಿಕಾ ಶರಣಪ್ಪ, ಬೆಂಗಳೂರು
8. ಗಣ ನಾಯಕಿ. ಮಾಲೂತಾಯಿ ಚಂದ್ರಕಾಂತ ಸ್ವಾಮಿ, ಈಚಲಕರಂಜಿ
9. ಗಣ ನಾಯಕಿ. ಜಯಮ್ಮ ಚಂದ್ರಪ್ಪ, ಶಿವಮೊಗ್ಗ
10. ಗಣನಾಯಕಿ. ಸರೋಜಮ್ಮ ನಾಗರಾಜು, ಮೈಸೂರು.
11. ಗಣನಾಯಕಿ. ಶಾರದಮ್ಮ ಭೀಮಲಿಂಗನಗೌಡ, ಬಳ್ಳಾರಿ
12. ಗಣನಾಯಕಿ. ಅಕ್ಕ ಅನ್ನಪೂರ್ಣ, ಬೀದರ.

ಇವರೆಲ್ಲರೂ ಭಕ್ತಿ-ಶ್ರದ್ಧಾಪೂರ್ವಕವಾಗಿ ವಿಭೂತಿ ಸ್ವೀಕಾರ ಮಾಡಿದರು. ಪೂಜ್ಯ ಮಾತಾಜಿಯವರು ಎಲ್ಲ ಶರಣ ಬಂಧುಗಳ ಸಹಾಯ, ಸಹಕಾರ ಕೋರಿ

ಆಶೀರ್ವಚನ ಮುಗಿಸಿ, ಮಂಗಲ ಹಾಡಿದರು.

ಜಯತು ಜಯತು ಲಿಂಗಾನಂದ ಸದ್ಗುರುವೇ ಪಾಹಿಮಾಂ
ಜಯತು ಜಯತು ಪ್ರತಿಭಾನ್ವಿತ ಜ್ಞಾನಮೂರ್ತೆ ರಕ್ಷಮಾಂ ।। ಪಲ್ಲವಿ।।
ಬಸವ ತತ್ವ ಬೋಧಿಸಲು ಜನ್ಮ ತಳೆದು ಬಂದಿರಿ
ಬಸವ ತಂದೆ ಕರುಣೆ ಹೊಂದಿ ಬಾಳಲಿ ಮುಂಬರಿದಿರಿ
ನಿಶಿತಮತಿಯು ನೀವಾಗಿ ಕ್ರಾಂತಿಯೋಗಿಯಾದಿರಿ
ಶುಭ ಜೀವನ ಜ್ಯೋತಿಯಲಿ ಜಗದ ಭ್ರಾಂತಿ ಕಳೆದಿರಿ ।। 1 ।।

ಜಾತಿವಾದ ಶುಷ್ಕ ಮಾರ್ಗ ಮೂಢರೂಢಿ ಜರಿದಿರಿ
ಕ್ರಾಂತಿ ಕಹಳೆಯಾದಿ ನೀವು ಜಾಗೃತಿಯಂ ಗೈದಿರಿ
ಮದಗಜದೊಲು ಮುನ್ನುಗ್ಗಿ ಬಸವ ಮೈಮೆ ಬೀರ್ದಿರಿ
ನವಕ್ರಾಂತಿಯ ನಿರ್ಮಾಪಕರಿಂದು ತಾವು ಆದಿರಿ ।। 2 ।।

ಪ್ರವಚನದ ಪಟುವಾಗಿ ಜ್ಞಾನುಸುಧೆಯ ಎರೆದಿರಿ
ಶಿವಬೆಳಗಿನ ಗುರುವಾಗಿ ಎನ್ನ ಧನ್ಯಗೈದಿರಿ
ನಿಮ್ಮ ಪರುಷ ಹಸ್ತವೆನ್ನ ಮಸ್ತಕವನ್ನು ಮುಟ್ಟಲು
ಜ್ಯೋತಿ ಮುಟ್ಟಿ ಜ್ಯೋತಿಯಾಗಿ ಬೆಳಗುವಂತೆ ಗೈದಿರಿ ।। 3 ।।

ಸ್ತ್ರೀ ಕುಲಕೆ ಪೀಠವೊಂದ ರಚಿಸಿ ಸಮತೆ ಸಾರ್ದಿರಿ
ಬಸವನುಸಿರ ಪಸರಿಸುತ ಮರ್ತ್ಯಕೆ ಬೆಳಕಾದಿರಿ
ಹರಿವ ನದಿಯು ನಿಮ್ಮ ಬಾಳು ಉರಿವ ಬತ್ತಿ ನಿಮ್ಮ ತ್ಯಾಗ
ಮೊರೆವ ಶಂಖ ನಿಮ್ಮ ವಾಣಿ ಸಚ್ಚಿದಾನಂದ ಖಣಿ ।। 4 ।।

ಈ ಮಂಗಲ ಗೀತೆಯ ಒಂದೊಂದು ಸಾಲನ್ನೂ ಜನರು ಭಾವಪೂರ್ಣವಾಗಿ ಮೆಲುಕು ಹಾಕುತ್ತ ಕಣ್ಣೀರು ಸುರಿಸುತ್ತಿದ್ದರು

ಹರಿವ ನದಿಯು ನಿಮ್ಮ ಬಾಳು ಉರಿವ ಬತ್ತಿ ನಿಮ್ಮ ತ್ಯಾಗ
ಮೊರೆವ ಶಂಖ ನಿಮ್ಮ ವಾಣಿ ಸಚ್ಚಿದಾನಂದ ಖಣಿ.

ಎಂದಾಗ ದುಃಖದ ಕಟ್ಟೆಯೊಡೆದು ಜನರು ಬಿಕ್ಕಿಬಿಕ್ಕಿ ಅತ್ತರು. ಎಲ್ಲರ ಕಿವಿಯಲ್ಲೂ ಆ ಶಂಖಧ್ವನಿ ಮೊಳಗಿದಂತಾಯಿತು. ಗದುಗಿನ ರಾಷ್ಟ್ರೀಯ ಬಸವ ದಳದ ಪ್ರೊ. ಜಿ. ಬಿ. ಹಳ್ಯಾಳ ಅವರು ಮುಂದೆ ಬಂದು,

ಭಕ್ತಿ ಎಂಬ ಪೃಥ್ವಿಯ ಮೇಲೆ
ಗುರುವೆಂಬ ಬೀಜವಂಕುರಿಸಿ,
ಲಿಂಗವೆಂಬ ಎಲೆಯಾಯಿತ್ತು
ವಿಚಾರವೆಂಬ ಹೂವಾಯಿತ್ತು
ಆಚಾರವೆಂಬ ಕಾಯಾಯಿತ್ತು
ನಿಷ್ಪತ್ತಿ ಎಂಬ ಹಣ್ಣಾಯಿತ್ತು
ನಿಷ್ಪತ್ತಿ ಎಂಬ ಹಣ್ಣು ತಾನು
ತೊಟ್ಟು ಕಳಚಿ ಬೀಳುವಲ್ಲಿ
ಕೂಡಲ ಸಂಗಮದೇವಾ
ತನಗೆ ಬೇಕೆಂದು ಎತ್ತಿಕೊಂಡ.

ಎಂದು ಭಾವಪೂರ್ಣವಾಗಿ ಹಾಡಿದರು. ಎಲ್ಲ ಸ್ವಾಮಿಗಳು ಪತ್ರೆ-ಪುಷ್ಪಗಳನ್ನು ವೃಷ್ಟಿಸಿದರು. ಪಾರ್ಥಿವ ಶರೀರವನ್ನು ಉತ್ಸವಕ್ಕಾಗಿ ಎತ್ತಲೂ ಒಪ್ಪಿಗೆ ನೀಡಲಾಯಿತು. ಅಲಂಕೃತ ವಾಹನದಲ್ಲಿಡಲಾಯಿತು. ಷಟ್ಕೋನ ಬಸವ ಧ್ವಜಾರೋಹಣವನ್ನು ಪೂಜ್ಯ ಶ್ರೀ. ನಿ. ಪ್ರ. ಡಾ।। ಸಿದ್ಧಲಿಂಗ ಮಹಾಸ್ವಾಮಿಗಳು ನೆರವೇರಿಸಿದರು. ವಾಹನವು ಚಲಿಸಿತು. ಶ್ರೀ ಬಸವೇಶ್ವರ ಐಕ್ಯಮಂಟಪದವರೆಗೆ ಉತ್ಸವವು ಸಾಗಿತು. ಅಪಾರ ಸಂಖ್ಯೆಯಲ್ಲಿ ಬಸವ ಭಕ್ತರು "ಶರಣಯಾತ್ರೆ" ಯಲ್ಲಿ ಭಾಗಿಗಳಾದರು. ಪೂಜ್ಯ ಮಾತಾಜಿ, ಪೂಜ್ಯ ಮಾತೆ ಗಂಗಾದೇವಿಯವರು, ಗುಳೇದಗುಡ್ಡದ ಜಗದ್ಗುರು ಬಸವರಾಜ ಸ್ವಾಮಿಗಳು, ಭಾಲ್ಕಿ - ಹುಲ್ಸೂರು ಶ್ರೀಗಳು ಮುಂತಾಗಿ ಹೋಗಿ ಗುರು ಬಸವಣ್ಣನವರ ಶ್ರೀ ಸಮಾಧಿಯ ಮೇಲೆ ಪುಷ್ಪವೃಷ್ಟಿಮಾಡಿ, ಪುನಃ ಅಲ್ಲಿಯ ಪುಷ್ಪಮಾಲೆ ತಂದು ಪೂಜ್ಯ ಗುರುಗಳಿಗೆ ಹಾಕಿ, ಆ ಪುಷ್ಪಗಳನ್ನು ವರ್ಷಿಸಲಾಯಿತು. ಪುನಃ ಮೆರವಣಿಗೆ ಸಾಗಿ ಬರುತ್ತಲೇ ಸಮಾಧಿ ಮಂಟಪಕ್ಕೆ ಗುರುಗಳ ಮೃಣ್ಮಯ ಕಾಯವನ್ನು ಒಯ್ಯಲಾಯಿತು. ಮೊದಲೇ ಶ್ರೀ ಬಸವೇಶ್ವರ ಪೂಜಾವ್ರತವನ್ನು ಸಮಾಧಿ ಮಂಟಪದಲ್ಲಿ ಮಾಡಲಾಗಿತ್ತು. ಪೂಜ್ಯ ಮಾತಾಜಿ ಬರುತ್ತಲೇ ಸುಪ್ರಭಾತದಲ್ಲಿ ಇಷ್ಟಲಿಂಗಾರ್ಚನೆ ಮಾಡಿದಾಗ ತೆಗೆದಿರಿಸಿದ್ದ 'ದೇವ ಕರುಣೋದಕ' ವನ್ನು ಲಿಂಗದ ಗೂಡಿಗೆ ಸಿಂಪಡಿಸಿ, ಅಲ್ಲಿ ಶ್ರೀಗುರು ಬಸವಣ್ಣನವರ ಲೋಹಪಟವನ್ನಿಟ್ಟು ಪೂಜಿಸಿ ಲಿಂಗದ ಗೂಡನ್ನು

ದೈವೀಕರಿಸಿದರು. ನಂತರ (ಬಸವ ಧರ್ಮದ ಸಂಸ್ಕಾರಗಳು ಪುಸ್ತಕದಲ್ಲಿ ವಿವರಿಸಿರುವಂತೆ) ಪದ್ಧತಿಯ ಪ್ರಕಾರ ವಿವಿಧ ವಸ್ತುಗಳನ್ನು ಲಿಂಗದ ಗೂಡಿನಲ್ಲಿ ಹರಡಲಾಯಿತು. ಪೂಜ್ಯ ಗುರುಗಳ ಪ್ರಕೃತಿ ಕಾಯವನ್ನು ಇಳಿಸಿದ ಬಳಿಕ, ಬಸವ ಪಾದಗಳಿಂದ ಕೂಡಿದ ಬಸವ ಲಿಂಗಮುದ್ರೆಯನ್ನು (ಮೇಲೆ ವೃತ್ತಾಕಾರದ ಬಿಲ್ಲೆ; ಅದರಲ್ಲಿ ಷಟ್ಕೋನ - ಬಸವ ಮಂತ್ರ ಕೆಳಗೆ ಒಂದು ಸಣ್ಣ ಪೀಠ: ಅದರಲ್ಲಿ ಪಾದದ್ವಯ) ಪೂಜ್ಯ ಗುರುಗಳ ತಲೆಯ ಮೇಲಿಟ್ಟು ಅಂತಿಮ ಪೂಜೆ ಸಲ್ಲಿಸಲಾಯಿತು.

1. ಶರಣ ಪೂಜೆಯ ಮಾಡಿರಿ
2. ಭಸ್ಮ ಸೂರ್ಯಾಡೋಣ
3. ಬೆಳಗಿರಿ ಬೆಳಗಿರಿ

ಹಾಡುತ್ತ ಪೂಜೆ, ಭಸ್ಮದಾನ, ಆರತಿ ಮಾಡಲಾಯಿತು. ನಂತರ ಚೀಲದಲ್ಲಿಟ್ಟು ವಿಭೂತಿಗಟ್ಟಿ ಪೇರಿಸಲು ಶರಣರು ಆರಂಭಿಸುತ್ತಲೇ, ಪೂಜ್ಯ ಮಾತಾಜಿ ಅಂತಿಮ ನಮನ ಸಲ್ಲಿಸಿ ಸಮಾಧಿಮಂಟಪದಿಂದ ಹೊರಟರು. ಅವರು ಬರೆದ ಒಂದು ಗೀತೆಯನ್ನು ಧ್ವನಿಸುರುಳಿ ಹಾಡುತ್ತಿತ್ತು.

ಶ್ರೀಗುರುವಿನ ಶಿವಚರಣಕೆ ನಮೋ ನಮೋ ಎಂಬೆನು
ಗುರುದೇವನ ಮಹಾತ್ಯಾಗಕೆ ನತಮಸ್ತಕಳಾದೆನು ॥ ಪಲ್ಲವಿ ॥
ಅಡಿಯ ಇಟ್ಟು ನಡೆದಲೆಲ್ಲ ದೀಪ ಹಚ್ಚಿ ಬಂದಿರಿ
ಬಸವ ಭಾನು ಕ್ರಾಂತಿ ಉಷೆಯು ಆಗಿ ಮುಂದೆ ನಡೆದಿರಿ
ಗುರುದೇವ ಲಿಂಗಾನಂದಾ ಹೆಸರು ಅಮರವಾಗಿದೆ.
ಸಚ್ಚಿದಾನಂದನ ಶುಭರಕ್ಷೆಯು ತಮಗಿದೆ ॥

ಹಾಡಿನ ಒಂದೊಂದು ಪದವೂ ಅಲೆ ಅಲೆಯಾಗಿ ತೇಲುತ್ತಾ ಜನತೆಯ ಹೃನ್ಮನ ಬುದ್ಧಿಗಳಲ್ಲಿ ಅಣುರಣಿಸುತ್ತಿತ್ತು. ಜನರು ಮಂತ್ರಮುಗ್ಧರಾಗಿ ಆಲಿಸುತ್ತ ಸಾಲುಗಟ್ಟಿ ಸಮಾಧಿ ಮಂಟಪದಲ್ಲಿಳಿದು ವಿಭೂತಿ ಗಟ್ಟಿಯನ್ನಿಟ್ಟು ಅಂತಿಮ ಬೀಳ್ಕೊಡುಗೆ ನೀಡುತ್ತಿದ್ದರು. ಮಧ್ಯಾಹ್ನ 3-30ಕ್ಕೆ ವಿಭೂತಿ ವೀಳ್ಯನೀಡಿ, ಅಂತಿಮ ನಮನ ಸಲ್ಲಿಸಿ, ಪೂಜ್ಯ ಮಾತಾಜಿಯವರು, ಇಲಕಲ್ ಪೂಜ್ಯರು ಇನ್ನಿತರರು ಹೋಗಿದ್ದರು. ಬೆಳಗಿನಿಂದಲೂ ದರ್ಶನ ಪಡೆಯುತ್ತಿದ್ದವರ ಸಾಲು ಮುಗಿದು ಪೂರ್ತಿ ಶರೀರವನ್ನು ವಿಭೂತಿಯಿಂದ ಮುಚ್ಚಿ ದೀಪ ಹಚ್ಚಿ ಗದ್ದುಗೆಯ ಮೇಲಿಟ್ಟಾಗ ಸಂಜೆ 6 ಗಂಟೆ. ಬಂದ ಲಕ್ಷಾಂತರ ಜನರು ಸ್ನಾನ - ಪೂಜೆ - ಪ್ರಸಾದ ಮುಗಿಸಿ ಹೊರಟರು. ಕೆಲವರು ಆತ್ಮೀಯರು ಪೂಜ್ಯ ಮಾತಾಜಿಯವರನ್ನು

ಸಾಂತ್ವನಿಸಲು ಉಳಿದರು. ಗುರುಗಳ ನಿರ್ಗಮನದಿಂದ ಮಹಾಮನೆ ಬರಿದಾದ ಭಾವ ಕೆಲವರಿಗೆ. ''ಇಲ್ಲ ಅದು ಬರಿದಾಗಿಲ್ಲ, ಸ್ಥೂಲ ದೇಹವನ್ನಳಿದುಕೊಂಡು ಚೈತನ್ಯ ದೇಹಿಗಳಾಗಿ ಗುರುಗಳು ಅಮರರಾಗಿದ್ದಾರೆ.'' ಎಂಬ ಭಾವ ಎಲ್ಲರಿಗೆ. ಸರಿಯಾಗಿ ಏಳುಗಂಟೆಗೆ ಪೂಜ್ಯ ಮಾತಾಜಿ ಆಗಮಿಸಿ ''ಓಂ ಶ್ರೀಗುರುಬಸವ ಲಿಂಗಾಯನಮಃ'' ಎಂದು ಪ್ರಾರ್ಥನೆ ಮಾಡಿಸಲು ಆರಂಭಿಸುತ್ತಲೇ ಎಲ್ಲೆಡೆಯಿಂದ ಧಾವಿಸಿಬಂದ ಶರಣರಿಗೆ ಆಶ್ಚರ್ಯ ಮತ್ತು ಸಮಾಧಾನ. ಅಂದಿನಿಂದ ''ನೆನಹು'' ಆರಂಭವಾಯಿತು. ಜಗದಗಲ ಮುಗಿಲಗಲ ಇದು ಬೆಳೆಯಲಿ ಎಂದು ಹಾರೈಸೋಣ.

1.ಸಂಜೆಯ ವೇಳೆಯಲ್ಲಿ ಎಲ್ಲರೂ ಕಡ್ಡಾಯವಾಗಿ ಮಾಡಬೇಕಾದ ಸಂಕ್ಷಿಪ್ತ ಪ್ರಾರ್ಥನೆಗೆ ಹೆಸರು ದಿ. 2-7-95ವರೆಗೆ ಹೊಳೆದಿರಲಿಲ್ಲ. 3-7-95ರಂದು ಸಂಜೆಯ ಪ್ರಾರ್ಥನೆಯ ಸಮಯದಲ್ಲಿ ಶ್ರೀಗುರು ಬಸವಣ್ಣನವರ ವಚನ

ಎನಗೆ ನಿಮ್ಮ ನೆನಹಾದಾಗಲೇ ಉದಯ
ಎನಗೆ ನಿಮ್ಮ ಮರಹಾದಾಗಲೇ ಅಸ್ತಮಾನ
ಎನಗೆ ನಿಮ್ಮ ನೆನಹೆ ಜೀವನ
ಎನಗೆ ನಿಮ್ಮ ನೆನಹೆ ಪ್ರಾಣ, ಕಾಣಾ ತಂದೆ

ಇದನ್ನಾಧರಿಸಿ 'ನೆನಹು' ಎಂದು ನಾಮಕರಣವನ್ನು ಪೂಜ್ಯ ಮಾತಾಜಿಯವರು ಮಾಡಿದರು.

2. ದಿ.4-7-95ರಂದು ಬೆಳಿಗ್ಗೆ ಚರ್ಚಿಸುತ್ತಾ ಕುಳಿತಾಗ, ''ಈ ಸಂಕ್ಷಿಪ್ತ ಪ್ರಾರ್ಥನೆ 'ನೆನಹು'ವನ್ನು ಬಸವ ಪಂಚಮಿಯಿಂದ ಆಚರಣೆಗೆ ತರುವ ಆಲೋಚನೆ ಇತ್ತು. ಆದರೆ ಅದಕ್ಕೆ ಮೊದಲೇ ಪೂಜ್ಯ ಗುರುಗಳ ಕ್ರಿಯಾ ವಿಶ್ರಾಂತಿ ಸಂಭವಿಸಿದ್ದರಿಂದ ದಿ. 2-7-95ರಂದೇ ಆರಂಭಿಸುವ ಅನಿವಾರ್ಯತೆ ಒದಗಿತು. ಸಂಜೆ 7 ಗಂಟೆಗೆ ಎಂಬಲ್ಲಿ 770 ಎಂಬುದರ ಸಂಕೇತವಿದೆ ಎಂದು ಹೇಳಿದ್ದೆನಲ್ಲವೆ? ಇಂದು ಮತ್ತೊಂದು ಕಾರಣ ಹೊಳೆಯಿತು. ಪೂಜ್ಯ ಅಪ್ಪಾಜಿಯವರು ಒಂದೂ ದಿನ ಬಿಡದೆ ಪ್ರವಚನ ಮಾಡುತ್ತಿದ್ದರು. ಒಂದು ದಿನವೂ ಬಿಡದೆ ಸಮಯಪಾಲನೆ ಮಾಡಿ ಸರಿಯಾಗಿ 7 ಗಂಟೆಗೆ ''ಓಂ ಶ್ರೀಗುರು ಬಸವ ಲಿಂಗಾಯನಮಃ'' ಎಂದು ಪ್ರಾರ್ಥನೆ ಆರಂಭಿಸುತ್ತಿದ್ದರು. ಗುರುಗಳು ಪ್ರಾರ್ಥನೆ ಆರಂಭಿಸುತ್ತಿದ್ದಂತೆಯೇ ಗಡಿಯಾರವನ್ನು 7 ಗಂಟೆಗೆ ಸರಿಯಾಗಿ ಇರಿಸಿಕೊಳ್ಳಬಹುದಿತ್ತು. ಅಷ್ಟು ಸಮಯ ಪಾಲನೆ ಆಗುತ್ತದೆ ಎಂದು ಎಂದು ಜನರು ಅನ್ನುತ್ತಿದ್ದರು. ಆದ್ದರಿಂದ 7 ಗಂಟೆ ಪೂಜ್ಯ ಗುರುಗಳೆ ಪ್ರವಚನಾರಂಭ ಪ್ರಾರ್ಥನೆಯ ಸಮಯವೂ ಆಗುವುದೆಂಬುದು ಈ ಅಂತರ್ವಾಣಿಯ ಸಂಕೇತವಿರಬಹುದು.'' ಎಂದರು.

★ ★

ಪಂಚಾಚಾರ್ಯರು ಬಸವಪೂರ್ವದವರೆ ?

- ಮಾತಾಜಿ.

ಪಂಚಾಚಾರ್ಯರು ಬಸವ ಪೂರ್ವದವರಲ್ಲ ಎಂಬ ಬಗ್ಗೆ ಡಾ॥ ಎಂ. ಚಿದಾನಂದ ಮೂರ್ತಿಯವರು ಬರೆದ ಚಿಕ್ಕದಾದರೂ ಚೊಕ್ಕವು ಅಧಿಕೃತವೂ ಆದ ಲೇಖನ ಇದೇ ಸಂಚಿಕೆಯಲ್ಲಿ ಪ್ರಕಟವಾಗಿದೆ. ಪಂಚಾಚಾರ್ಯವಾದಿಗಳು ಎಷ್ಟು ಅಪ್ರಾಮಾಣಿಕರು, ಸುಳ್ಳುಗಾರರು ಎಂದು ನನಗೆ ವಿಷಾದವಾಗುತ್ತಿದೆಯಲ್ಲದೆ, ಅವರು ಒಂದು ಸುಳ್ಳನ್ನು ಎಷ್ಟು ತ್ವರಿತಗತಿಯಲ್ಲಿ ಹಬ್ಬಿಸುವ ಗೊಬೆಲ್ ತಂತ್ರ ಅಳವಡಿಸಿಕೊಂಡಿದ್ದಾರೆಂದು ನನಗೆ ಅತೀವ ಆಶ್ಚರ್ಯವೆನಿಸುತ್ತದೆ. ಈ ಸುಳ್ಳಿನ ಭ್ರಮೆಯಿಂದ, ಅದರಿಂದ ಉಂಟಾದ ಗೊಂದಲದಿಂದ ಹೊರಬರಲು ನಮಗೇ ಎಷ್ಟೋ ಕಾಲ ಹಿಡಿಯಿತೆಂದ ಮೇಲೆ ಸಾಮಾನ್ಯ ಜನರ ಪಾಡೇನು? ವಚನ ಶಾಸ್ತ್ರ, ಇತಿಹಾಸ, ಶಾಸನ ಏನೊಂದನ್ನೂ ಓದಲು ಸಮಯ ಬುದ್ಧಿ ಇಲ್ಲದ ಜನರು, ಇವನ್ನು ಮರೆಮಾಚಿ ಕಾಗಕ್ಕ - ಗುಬ್ಬಕ್ಕನ ಕಥೆಯಂತೆ ಲಿಂಗೋದ್ಭವ ಲೀಲೆ ಹೇಳುವ ಸ್ವಾಮಿ - ಶಾಸ್ತ್ರಿ - ಪಂಡಿತರು, ವೇದಿಕೆಗಾಗಿ ಬಾಯ್ಬಿಟ್ಟು ಕೊಂಡು ಸುಳ್ಳಿನ ಕಥೆ ಹೆಣೆಯುವ ಕೆಲವು ಸಾಹಿತಿಗಳು ಇವರೆಲ್ಲರ ಸೋಗಲಾಡಿತನ, ಆತ್ಮವಂಚನೆ, ಕಂಡು ನನಗೆ ಸೋಜಿಗವೆನಿಸಿದೆ. ಈ ಲೇಖನಕ್ಕೆ ಇಂದು (9-7-95) ಒಂದು ಪ್ರೇರಣೆಯಾಯಿತು. ಚನ್ನಪ್ಪ ಕವಿ ಕೃತ ಶರಣ ಲೀಲಾಮೃತ ಕಣ್ಣಿಗೆ ಬಿದ್ದಿತು ಈತ ಕ್ರಿ.ಶ. 1750ರಲ್ಲಿ ಈ ಕೃತಿ ರಚಿಸಿದ್ದಾನೆ. ಇವನು ವಿಜಯನಗರದ ದಕ್ಷಿಣ ಭಾಗದಲ್ಲಿರುವ ನಿಡುಗಲ್ಲೆಂಬ ಪಟ್ಟಣವಾಸಿ. ಈ ಕೃತಿಯನ್ನು ಶ್ರೀ ಶಿವಬಸವಸ್ವಾಮಿಗಳೆಂಬುವವರು ಸಂಪಾದಿಸಿದ್ದು ದೇವನೂರಿನ ಶ್ರೀಗುರು ಮಲ್ಲೇಶ್ವರ ಸಂಸ್ಥಾನದಿಂದ ಪ್ರಕಟಿಸಲಾಗಿದೆ. 1945ರಲ್ಲಿ ಪ್ರಥಮ ಮುದ್ರಣವಾಗಿದೆ. ನನಗೆ ದೊರೆತಿರುವುದು 1990ರಲ್ಲಿ ಪ್ರಕಟವಾದ ಮೂರನೆಯ ಮುದ್ರಣ.

ಕವಿ ಚನ್ನಪ್ಪ ಶರಣರಭಿಮಾನಿಯಾಗಿದ್ದರೂ ಶುದ್ಧ ಶರಣಮಾರ್ಗಾನುಯಾಯಿಯಲ್ಲ. ಬಸವಾದಿ ಪ್ರಮಥರ ನಂತರ ಹುಟ್ಟಿಕೊಂಡ ಕಾವ್ಯಗಳ ಕರ್ತೃಗಳು ಕೇವಲ ಶಿವನನ್ನು ಸ್ತುತಿಸಿದ್ದಾರೆ. ಹರಿಹರ ಇದಕ್ಕೆ ಉದಾಹರಣೆ, ಭೀಮಕವಿ ಶಿವ - ಗಣಪತಿ ಎಲ್ಲ ಬಿಟ್ಟು ಶ್ರೀಗುರುವೇ ಎಂದು ಪ್ರಥಮತಃ ಬಸವ ಗುರುವನ್ನು ಸ್ತುತಿಸಿದ್ದಾನೆ. ಚಾಮರಸನು ಪ್ರಭುಲಿಂಗಲೀಲೆಯಲ್ಲಿ ಗುಹೇಶ್ವರಾಲ್ಲಮ ಪ್ರಭುವನ್ನು ಸ್ತುತಿಸಿದ್ದಾನೆ. ಬರುಬರುತ್ತ ಶರಣ ಧರ್ಮವಾಹಿನಿ ಬಹುದೇವತೋಪಾಸನೆಯಿಂದ ಮಲಿನಗೊಂಡಿತೆಂಬುದಕ್ಕೆ ಚೆನ್ನಪ್ಪ ಕವಿಯಸ್ತುತಿಪದ್ಯಗಳೇ ಸಾಕ್ಷಿ. ಆತನು ಕ್ರಮವಾಗಿ ಶಿವ, ಪಾರ್ವತಿ, ಗಣಪತಿ,

ಶಾರದಾ, ವೀರಭದ್ರ ಇವರನ್ನು ಸ್ತುತಿಸುತ್ತ ಶ್ರೀ ಬಸವಣ್ಣನವರ ಸ್ತೋತ್ರಕ್ಕೆ ಬರುತ್ತಾನೆ. ಈ ಬಗೆಯ ಸ್ತುತಿ ಶರಣಧರ್ಮಕ್ಕೆ ತಕ್ಕುದಲ್ಲವೆಂಬುದು ಸತ್ಯವಾದರೂ ನಮಗೆ ಇಲ್ಲಿ ಒಂದು ಸುಳಿವು ಸಿಗುತ್ತದೆ.

ಚನ್ನಪ್ಪ ಕವಿ, ಪಂಚಾಚಾರ್ಯರು ಬಸವ ಪೂರ್ವದವರು, ವೀರಶೈವದ ಆದ್ಯರೂ ಆಗಿದ್ದರೆ ಅದೇಕೆ ಅವರನ್ನು ಸ್ತುತಿಸುತ್ತಿರಲಿಲ್ಲ? ಬಸವ - ಸ್ತುತಿ ಆದ ಮೇಲೆ ಶ್ರೀಗಣಂಗಳ ಸ್ತೋತ್ರ ರಚಿಸಿದ್ದಾನೆ. ಇದರಲ್ಲಿ ಅಲ್ಲಮ ಪ್ರಭು, ಸಿದ್ಧರಾಮ, ಚನ್ನಬಸವಣ್ಣ, ಮಡಿವಾಳಯ್ಯ, ಶೂಲದ ಬೊಮ್ಮಯ್ಯ, ಜಗದೇವ ಮೊಲ್ಲೆಯ ಬೊಮ್ಮಯ್ಯಗಳು, ಹರಳಯ್ಯ, ಮಧುವರಸರು, ರುದ್ರಮುನಿ, ಅಪ್ಪಣ್ಣ, ಕೂಗಿನ ಮಾರಯ್ಯ, ಮುಂತಾದವರನ್ನು ಸ್ತೋತ್ರ ಮಾಡುವನು. ನಂತರ ಶಿವಕವಿಗಳಾದ ಮಲುಹಣ, ಮಯೂರ, ಬಾಣ, ಕಾಳಿದಾಸ ಮುಂತಾದವರನ್ನು ಸ್ತುತಿಸಿದ್ದಾನೆ. ಬಸವ ಪೂರ್ವದವರೆಂದು ಪಂಚಾಚಾರ್ಯ ಪ್ರಸ್ತಾಪವಾಗುವುದತ್ತಲಿರಲಿ, ನಂತರ ಸಹ ಅವರ ಹೆಸರು ಉಲ್ಲೇಖವಾಗಿಲ್ಲ ಶರಣ ಸಂದೋಹದಲ್ಲಿದ್ದ ರುದ್ರಮುನಿಯ ಹೆಸರು ಮಾತ್ರ ಪ್ರಸ್ತಾಪವಾಗಿದೆ. ಇದರರ್ಥ ಚೆನ್ನಪ್ಪ ಕವಿ ಬದುಕಿದ, ಅವನ ಕಾವ್ಯ ರಚನೆಯಾಗುವವರೆಗೂ ಅಂದರೆ ಕ್ರಿ.ಶ. 1750ರವರೆಗೆ ಸಹ ಪಂಚಾಚಾರ್ಯರು ಜನಜೀವನದ ಮೇಲೆ ಯಾವುದೇ ಪ್ರಭಾವಬೀರಿದಂತೆ ಕಾಣದು. ದಿ॥ ಕಾಶೀನಾಥ ಶಾಸ್ತ್ರಿಗಳ ಕಲ್ಪನಾವಿಲಾಸದ ಕೂಸುಗಳಾದ ಆದಿ ಪಂಚಾಚಾರ್ಯರು ಏನು ಘನ ಸಾಧನೆ ಮಾಡಿದ್ದಾರೆಂದು, ಲೋಕಕ್ಕೆ ಯಾವ ಕಾಣ್ಕೆ ಕೊಟ್ಟಿದ್ದಾರೆಂದು ಜನರು ಅವರನ್ನು ಆರಾಧಿಸುವರು? ಇದರಿಂದ ಐವರು ಆದಿ ಪಂಚಾಚಾರ್ಯರ ಲಿಂಗೋದ್ಭವ ಲೀಲೆ ಪಂಡಿತರ ಕಟ್ಟುಕಥೆ ಎಂಬುದು ದೃಢವಾಗುತ್ತದೆ. ಇದೇ ಕವಿಯು ಕೈಲಾಸದ ವರ್ಣನೆ ಮತ್ತು ಅಲ್ಲಿರುವ ಗಣಗಳ ವರ್ಣನೆಯನ್ನು ಒಂದನೆಯ ಸಂಧಿಯಲ್ಲಿ ಮಾಡಿದ್ದಾನೆ. ಅಲ್ಲಿ ಎಲ್ಲೆಲ್ಲೂ ರೇಣುಕ, ದಾರುಕ, ಘಂಟಾಕರ್ಣ ಮುಂತಾದವರ ಹೆಸರು ಇರಲಿ, ಐತಿಹಾಸಿಕ ವ್ಯಕ್ತಿಗಳಾಗಿ ಬಸವೋತ್ತರ ಕಾಲದಲ್ಲಿದ್ದ ರೇವಣಸಿದ್ಧ, ಮಲ್ಲಿಕಾರ್ಜುನ ಪಂಡಿತಾರಾಧ್ಯ, ಏಕೋರಾಮ ಮುಂತಾದವರ ಹೆಸರು ಸಹ ಪ್ರಸ್ತಾಪಿಸಿಲ್ಲ ಎಂಬುದು ಬಹು ಗಮನಾರ್ಹ.

ಒಂದನೆಯ ಸಂಧಿಯಲ್ಲಿ ಶಿವ - ಪಾರ್ವತಿ, ಕೈಲಾಸ, ಮುಂತಾದುವುಗಳನ್ನು ಬಣ್ಣಿಸುವ ಕವಿ ಎರಡನೆಯ ಸಂಧಿಯಲ್ಲಿ ಶಿವನ ಭಿಕ್ಷಾಟನ ಲೀಲೆಯನ್ನೂ, ಮೂರನೆಯದರಲ್ಲಿ ದಕ್ಷ ಸಂಹಾರವನ್ನು ಪ್ರಸ್ತಾಪಿಸಿ ನಾಲ್ಕನೆಯದರಲ್ಲಿ ಬಸವಣ್ಣನವರ ವಿಷಯಕ್ಕೆ ಬರುವನು. ಈ ಕೃತಿಯ ಕಥಾನಾಯಕ ಕಲ್ಯಾಣದ ಬಸವಣ್ಣನವರು. ಮೊದಲನೆಯ ಸಂಧಿಯ ಕಡೆಯಲ್ಲಿ ಬರುವ ಪುಷ್ಪಾಂಜಲಿಯಲ್ಲಿ ಶಿವನನ್ನು, ತನ್ನ ಗುರು ಚೆನ್ನಮಲ್ಲೇಶ್ವರರನ್ನು ಸ್ತುತಿಸಿ ನಂತರ ಪ್ರಭು ಸಿದ್ಧರಾಮ

ಬಸವೇಶ್ವರರನ್ನು ನೆನೆಯುವನು. ಶೈವದ ಮೂಲಿಗನಾದ ಶಿವನಿಂದ ನೇರವಾಗಿ ಬಸವಣ್ಣನವರನ್ನು ಕವಿ ಪ್ರಸ್ತಾಪಿಸುವುದೇ ವಿಶ್ವಗುರು ಬಸವಣ್ಣನವರು ಲಿಂಗಾಯತ ಧರ್ಮದ ಆದ್ಯರೆಂಬುದನ್ನು ಖಚಿತಪಡಿಸುತ್ತದೆ.

★★

ಪೂಜ್ಯ ಶ್ರೀ ಮಹಾಗುರು ಲಿಂಗಾನಂದ ಸ್ವಾಮೀಜಿ - ನಂದದ ಜ್ಯೋತಿ

- ಅನುಪಮಾ ಹೊಸೂರು

ಉಪ್ಪಿನ ಬೆಟಗೇರಿ

ಶರಣ ಬಂಧುಗಳೇ, ಎಷ್ಟು ಅನಿರೀಕ್ಷಿತ, ಎಷ್ಟು ಆಕಸ್ಮಿಕ, ಎಷ್ಟು ಅಸಹನೀಯವಾಗಿತ್ತು ಪೂಜ್ಯ ಶ್ರೀ ಲಿಂಗಾನಂದ ಮಹಾ ಸ್ವಾಮೀಜಿಯವರ ಲಿಂಗೈಕ್ಯವಾರ್ತೆ. ಕೊನೆಯ ಕ್ಷಣದವರೆಗೂ, ಬಸವ ಪ್ರವಚನ ಮಾಡುತ್ತಲೇ, ಭಕ್ತೋದ್ಧಾರಕ ಕಾಯಕ ಮಾಡುತ್ತಲೇ, ಸ್ವಾಮೀಜೀ ಐಕ್ಯರಾಗುತ್ತಾರೆಂಬುದನ್ನು, ಯಾರು ತಿಳಿದಿದ್ದರು? ಬಸವೇಚ್ಛೆಗೆ ಹೇಳುವುದೇನು? ಮೂಕರಾಗಿ ತಲೆಬಾಗುವದೊಂದೇ ದಾರಿ. ಇಲ್ಲಿಯವರೆಗೆ ಬಸವ ಶರಣರ ಬಾಳನ್ನೆಲ್ಲಾ ಆವರಿಸಿ, ಉಸಿರನ್ನೆಲ್ಲ ತುಂಬಿದ ಚೇತನಶಕ್ತಿ, ಇನ್ನಿಲ್ಲಾ ಅಂದರೆ, ನಮ್ಮ ದುಃಖ ತಡೆಯುವದಾದರೂ ಹೇಗೆ? ಆ ಮಹಾಮೂರ್ತಿಯಿಂದ ನಮ್ಮ ಜೀವನವನ್ನು ಇನ್ನಿಷ್ಟು ಪಾವನಗೊಳಿಸಿಕೊಳ್ಳ ಬೇಕೆಂದು ನಮ್ಮೆಲ್ಲರ ನಿರೀಕ್ಷೆಯಿತ್ತು. ನಿಜ ನಮ್ಮ ದುಃಖಕ್ಕೆ ತೀರವಿಲ್ಲಾ, ನಮ್ಮ ನಷ್ಟಕ್ಕೆ ಅಳತೆಯಿಲ್ಲಾ, ಎಂದೆಂದಿಗೂ ಪಡೆಯಲಾಗದ ಒಡವೆ ನಮ್ಮಿಂದ ಚ್ಯುತವಾಗಿದೆ. ನಿನ್ನೆಯವರೆಗೂ ವಿಶ್ವಧರ್ಮದಲ್ಲಿ ಶ್ರೀಮಂತರಾಗಿದ್ದ ನಮಗೆ ಇಂದು ದಟ್ಟದರಿದ್ರರಾಗಿದ್ದೇವೆ ಎಂದು ಅನಿಸುತ್ತಿದೆ, ಏನೂ ಹೇಳಲಾಗದ ಮೂಕವೇದನೆಯಾಗಿ ಕಣ್ಣಲ್ಲಿ ಹನಿ ಹನಿಯುತ್ತಿದೆ. ಆದರೂ ಇದು ಸಂಕಟಕ್ಕೆ ಕಾಲವಲ್ಲ, ಅಸ್ಥಿರತೆಗೆ ಸಮಯವಲ್ಲ. ನಿಧಾನವಾಗಿ ಯೋಚಿಸಿದರೆ ಜಗದ್ಗುರುಗಳು ನಮ್ಮನ್ನು ಅಗಲಿದರೂ ಎಂಬುದು ಲೋಕೋಪಚಾರದ ಮಾತು. ''ನಿಜವಾದ ನಿಜವಲ್ಲ'' ಏಕೆಂದರೆ ಬಸವ ತತ್ವಕ್ಕೆ ಗಂಟಲೊಣಗಿ ನಿಂತ ಭಕ್ತ ಸಮೂಹಕ್ಕೆ ವಿಶ್ವಧರ್ಮದ ಪ್ರಚಂಡ ಸತ್ಯಗಳ ಅಮೃತಪಾನಮಾಡಿಸಿ, ಬಸವಧರ್ಮ ಮರೆತವರನ್ನು ಎಚ್ಚೆತ್ತು, ಮೈ ಕೊಡವಿ, ಉಸಿರೆಳೆದು ಎದ್ದು ನಿಲ್ಲುವಂತೆ ಮಾಡಿದ್ದಾರೆ. ಆಗದವರು ನಿಂದನೆ ಮಾಡಿದರೂ ಹೆದರದೇ, ಇನ್ನೂ ಕೆಲವರು ಎದುರು ಬಿದ್ದರೂ ಅಂಜದೆ ಬಂದ ಎಡರುಗಳನ್ನೆಲ್ಲಾ ಜಯಿಸಿ, ಬಸವಧರ್ಮದ ಕೆಚ್ಚಲನ್ನು ನಮಗೆ ಕೊಟ್ಟಿದ್ದಾರೆ. ಹೀರಿದಾಗಲೆಲ್ಲಾ ಆ ಅಮೃತ ಸವಿ ಸಿಗುವ ಹಾಗೆ ಮಾಡಿದ್ದಾರೆ. ಸ್ವಾಮೀಜಿಯವರ ಉಪನ್ಯಾಸಗಳನ್ನು ಕೇಳಿದವರಿಗೆಲ್ಲಾ , ಓದಿದವರಿಗೆಲ್ಲಾ ಅದ್ಭುತ ಶಕ್ತಿ ಸಂಚಾರವಾಗುತ್ತದೆ. ನಮ್ಮ ಅಂತರಂಗದಲ್ಲಿ ಬಸವ

ತತ್ವ ಪ್ರಕಾಶಿಸಿ, ನಮ್ಮ ಮನದ ಕಾಳಿಕೆಯೆಲ್ಲ ಕಳೆಯುತ್ತದೆ. ಮೊದಲೇ ಇದ್ದ ಈಶ್ವರ ಶಕ್ತಿಯ ಹನಿ ಕಡಲಾಗುತ್ತದೆ. ನಮ್ಮ ಜಡತ್ವವೆಲ್ಲಾ ಅಳಿದು ನಮ್ಮ ಲಘುತ್ವ ಕಳೆದು, ಗುರುತ್ವ ಬರುತ್ತದೆ. ಹೀಗಾಗಿಯೇ ನಾನು ಹೇಳಿದ್ದು ಜಗದ್ಗುರುಗಳ ಅಗಲಿಕೆ 'ನಿಜವಾದ ನಿಜವಲ್ಲ' ಎಂದಿದ್ದೇನೆ. ಏಕದೇಹಸ್ತವಾದ ಚೇತನಾಶಕ್ತಿ ಅವರ ಉಪನ್ಯಾಸಗಳ ಮೂಲಕ ಸರ್ವತ್ರವಾಗಿದೆ ಮತ್ತು ಎಲ್ಲರ ಮನೋ ಮಂದಿರದಲ್ಲಿ ಸ್ಥಾಪಿತವಾಗಿದೆ. ಹಗಲಿರುಳು ಶ್ರೀ ಸಾಮಾನ್ಯನ ಕಲ್ಯಾಣಕ್ಕೆ ಪ್ರಯತ್ನಿಸಿ ಅವನ ನಿಜವಾದ ಶಾಂತಿಗಾಗಿ ಪ್ರಾಮಾಣಿಕ ಪ್ರಯತ್ನಗೈದ ಸ್ವಾಮೀಜಿಯ ಆತ್ಮಕ್ಕೆ ಅಶಾಂತಿಯೆಲ್ಲಿಯದು?

ಅದೊಂದು ಆ ಶಿವನ ಚಿತ್ಕಳೆಯಿಂದ ಕೂಡಿದ ಪ್ರಕಾಶಮಾನ ಜ್ವಾಲೆ ಮಾತ್ರ ಶರಣರೇ, ನಾನು ಈಗಾಗಲೇ ವಿನಂತಿಸಿಕೊಂಡಂತೆ ನಾವು ಈಗ ಧೃತಿಗೆಡಬೇಕಾಗಿಲ್ಲ, ನಮ್ಮ ಮುಂದಿನ ಕಾರ್ಯವೇನೆಂಬುದನ್ನು ನಮ್ಮ ಆಲಸ್ಯವನ್ನೆಲ್ಲಾ ಕಿತ್ತೊಗೆದು ನೋಡಬೇಕಾಗಿದೆ.

ಈ ಕಾರ್ಯಕ್ಕಾಗಿ ನಾವು ಏಕಾಂಗಿಗಳಾಗಿಲ್ಲ, ಸರ್ವತ್ರವಾದ ಸ್ವಾಮೀಜಿಯ ಚೇತನ ನಮಗೆ ಶ್ರೀ ರಕ್ಷೆಯಾಗಿದೆ. ಕಾಲಕಳೆದಂತೆಲ್ಲಾ ಅದು ಬಹುಗುಣಿತವಾಗುತ್ತದೆ. ಇದಲ್ಲದೇ ನಮ್ಮ ಸುದೈವದಿಂದಾಗಿ ನಮ್ಮ ಪುಣ್ಯ ಬಲದಿಂದಾಗಿ ನಮ್ಮ ದೌರ್ಬಲ್ಯವನ್ನು ಧಹಿಸಲು ಪೂಜ್ಯ ಮಾತಾಜಿಯವರು ನಮ್ಮೊಂದಿಗಿದ್ದಾರೆ.

ನಮ್ಮ ಏಕೈಕ ಧ್ಯೇಯ ಅವರ ಕಣ್ಣ ಬೆಳಕಿನಲ್ಲಿ ಮಾರ್ಗದರ್ಶನದಲ್ಲಿ ಮುನ್ನಡೆದು ಬಸವ ಸಂದೇಶ ಮನೆ ಮನೆಗೂ ಮುಟ್ಟಿಸಿ ಪ್ರತಿಯೊಂದು ಜೀವಿಯಲ್ಲಿಯ ಸುಪ್ತವಾದ ಚೇತನವನ್ನು ಜಾಗೃತಗೊಳಿಸಿ ಎಲ್ಲರಿಗೂ ನೈಜ ಆನಂದದ ದರ್ಶನ ಮಾಡಿಸುವದು.

ಈ ಬಸವಧರ್ಮಕ್ಕಾಗಿ ಕೆಲವರ ಮುಚ್ಚಿದ ಹೃದಯ ತೆರೆಯಲಿ. ಈಗಾಗಲೇ ತೆರೆದ ಹೃದಯಗಳಲ್ಲಿ ಅದು ಶಾಶ್ವತ ನೆಲೆಸಿರಲಿ, ಸದ್ಯಕ್ಕೆ ಕಂಗೆಟ್ಟಿರುವ ನಮಗೆಲ್ಲಾ ಶಾಂತಿ ಸಿಕ್ಕು, ಇಂದಿನ ಮುಂದಿನ ಮಾನವ ಕುಲದ ಕಲ್ಯಾಣವಾಗಲಿ.

ಇದಕ್ಕೆಲ್ಲಾ ಪೂಜ್ಯ ಲಿಂಗಾನಂದ ಸ್ವಾಮಿಜೀಯ ಕೃಪೆ ಕೈ ಬಿಡದೇ ಕಾಯಲಿ. ಬಸವ ತತ್ವ ಗಗನೋನ್ನತ ದೀಪಸ್ತಂಭವಾಗಲಿ ಎಂದು ಪ್ರಾರ್ಥಿಸುವೆ. ಕೊನೆಯದಾಗಿ ಬಸವ ತತ್ವಗಳನ್ನೆ ನಮ್ಮ ಕಿವಿಕೇಳಲಿ, ಮನ ಆರಾಧಿಸಲಿ. ನಾಲಿಗೆ ನುಡಿಯಲಿ, ಅನುಷ್ಠಾನಕ್ಕೆ ತರಲು ಮಿದುಳು ಆಜ್ಞಾಪಿಸಲಿ, ಬಸವಣ್ಣನ ಚಿತ್ರವನ್ನೆ ನಮ್ಮ ಕಣ್ಣು ನೋಡಲಿ. ಇದಕ್ಕೆಲ್ಲಾ ಆ ಮಂಗಳ ಮೂರ್ತಿ ಬಸವಣ್ಣನೇ ಅನುಗ್ರಹಿಸಲಿ ಎಂದು ಪ್ರಾರ್ಥಿಸುವೆ.

ಸಂಸ್ಮರಣೋತ್ಸವ - ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬ
ಕೆಲವು ವಿವರ

ಶರಣ ಬಂಧುಗಳೇ

ಪೂಜ್ಯ ಅಪ್ಪಾಜಿಯವರು ದಿ. 30-6-1995ರಂದು ಲಿಂಗೈಕ್ಯರಾದ ವಾರ್ತೆ ಹಬ್ಬುತ್ತಲೇ ಸಾಗರದೋಪಾದಿಯಲ್ಲಿ ಶರಣ ಸಮುದಾಯವು ಕೂಡಲ ಸಂಗಮಕ್ಕೆ ಹರಿದು ಬಂದಿತು. ತಮ್ಮನ್ನೂ ಸೇರಿ ತಾವೆಲ್ಲ ಅಂತ್ಯ ಸಂಸ್ಕಾರ, ಸಮಾಧಿ ಕ್ರಿಯೆಯಲ್ಲಿ ಭಾಗಿಗಳಾಗಿರುವಿರಾಗಿ ನಂಬುತ್ತೇನೆ. ಮುಂದೆ ಶರಣ ಗಣ ದಾಸೋಹ ಎಂದು ಇರಿಸಿಕೊಳ್ಳ ಬೇಕು ಎಂಬ ಆಲೋಚನೆ ಮಾಡಿ ನಾನೊಂದು ನಿರ್ಧಾರವನ್ನು ಶ್ರದ್ಧಾಂಜಲಿಯ ಸಭೆಯಲ್ಲಿ ಪ್ರಕಟಪಡಿಸಿದೆ. ಆತ್ಮೀಯ ಭಕ್ತರು, ಹೆಚ್ಚಿನ ರಾಷ್ಟ್ರೀಯ ಬಸವದಳಗಳವರು ದಿ. 2-7-95ರಂದು ಭಾಗಿಗಳಾದ ಕಾರಣ ದೊಡ್ಡ ಪ್ರಮಾಣದಲ್ಲಿ ಒಂದೇ ಸ್ಥಳದಲ್ಲಿ ಶರಣ ಗಣ ದಾಸೋಹವನ್ನು ಇಡದೆ ಎಲ್ಲರೂ ತಂತಮ್ಮ ಸ್ಥಳಗಳಲ್ಲಿಯೇ ಸಂಸ್ಮರಣೋತ್ಸವ, ಶ್ರದ್ಧಾಂಜಲಿ ಸಭೆಗಳನ್ನು ಏರ್ಪಡಿಸಿ ಗುರುಸ್ಮರಣೆ ಮಾಡಬೇಕು ಎಂಬುದಾಗಿ, ಬಹಳ ಜನರು ಈ ಸಲಹೆಯನ್ನು ಮೆಚ್ಚಿದರು.

ಕರ್ತವ್ಯವೆಂಬಂತೆ ದಿವ್ಯ ಸಮಾಧಿಯಾಗಿರುವ ಕೂಡಲ ಸಂಗಮದಲ್ಲಿ ಗುರುಪೂರ್ಣಿಮೆ ಎಂದು ಖ್ಯಾತನಾಮವಾಗಿರುವ ಆಷಾಢ ಹುಣ್ಣಿಮೆಯಂದು, ಬುಧವಾರ ದಿ. 12-7-1995ರಂದು ಸಂಸ್ಮರಣೆ ಮತ್ತು ದಾಸೋಹ ಏರ್ಪಡಿಸಲಾಗಿತ್ತು. ಬೆಂಗಳೂರು ನಗರದ ಸಮೀಪದ ಬಸವ ಗಂಗೋತ್ರಿಯಲ್ಲಿ ಶ್ರಾವಣ ಶುದ್ಧ ಬಸವ ಪಂಚಮಿಯ ಮಂಗಳವಾದ ದಿ. 1-8-1995ರಂದು ಸಂಸ್ಮರಣೋತ್ಸವ ಮತ್ತು ಗಣದಾಸೋಹ ಏರ್ಪಡಿಸಲಾಗಿದೆ. ಶ್ರೀಗುರು ಬಸವಣ್ಣನವರ 799ನೆಯ ಲಿಂಗೈಕ್ಯದಿನದಂದು ಬೃಹತ್ ಬಸವ ಪುತ್ಥಳಿ ನಿರ್ಮಾಣ ಕಾರ್ಯವನ್ನು ಆರಂಭಿಸುವ ಸಂಕಲ್ಪವಿದೆ. ಪೂಜ್ಯ ಅಪ್ಪಾಜಿ ದಿ. 15-5-1995 ಸೋಮವಾರದಂದು ಶಂಕುಸ್ಥಾಪನೆ ಮಾಡಿದ್ದಾರೆ. ಆಸಕ್ತ ಶರಣ ಬಂಧುಗಳಿಗೆಲ್ಲ ಹೃತ್ಪೂರ್ವಕ ಆಹ್ವಾನವಿದೆ.

ಸ್ಥಳೀಯವಾಗಿ ಕಾರ್ಯಕ್ರಮ

ಹರಿವ ನದಿಯು ನಿಮ್ಮ ಬಾಳು
ಉರಿವ ಬತ್ತಿ ನಿಮ್ಮ ತ್ಯಾಗ
ಮೊರೆವ ಶಂಖ ನಿಮ್ಮ ವಾಣಿ
ಸಚ್ಚಿದಾನಂದ ಖಣಿ

ಎಂಬಂತೆ ಪೂಜ್ಯ ಅಪ್ಪಾಜಿ ಜ್ಞಾನವಾಹಿನಿಯಾಗಿ ನಿರಂತರವಾಗಿ ಹರಿದು ಮುಮುಕ್ಷುಗಳ ಹೃನ್ಮನ ಬುದ್ಧಿಗಳನ್ನೂ ತಣಿಸಿದರು. ಆದ್ದರಿಂದ ಎಲ್ಲ ರಾಷ್ಟ್ರೀಯ ಬಸವ ದಳಗಳವರೂ, ಬಸವ ಧರ್ಮ ಸಂಸತ್ ಸದಸ್ಯರು ಮತ್ತು ಬಸವ ಭಕ್ತರು ಸ್ಥಳೀಯವಾಗಿ ಸಂಸ್ಮರಣೋತ್ಸವ - ಶ್ರದ್ಧಾಂಜಲಿ ಏರ್ಪಡಿಸಬೇಕು. ಇದರ ನಿಮಿತ್ತ ಪೂಜ್ಯ ಅಪ್ಪಾಜಿಯವರನ್ನು ಕುರಿತು ಲೇಖನಗಳನ್ನು ಬರೆದು ಪ್ರಮುಖ ದಿನಪತ್ರಿಕೆ, ವಾರಪತ್ರಿಕೆಗಳಲ್ಲಿ ಪ್ರಕಟಿಸುವಂತೆ ಮಾಡಬೇಕು. ಪ್ರವಚನ, ಆಡಿಯೋ - ವೀಡಿಯೋ ಕೆಸೆಟ್ಟು ಕೇಳಿ, ಪೂಜ್ಯ ಅಪ್ಪಾಜಿ ಬರೆದ ಪುಸ್ತಕ ಓದಿ ತಮ್ಮ ಮೇಲೆ ಆದ ಪರಿಣಾಮವನ್ನು ಲೇಖನ ರೂಪದಲ್ಲಿ ಬರೆಯಬಹುದು. ಪೂಜ್ಯರ ಫೋಟೋ ಸಹಿತ ಲೇಖನ - ಅಭಿಪ್ರಾಯ ಪ್ರಕಟಿಸ ಬಹುದು. ಇಂಥ ಸಂಸ್ಮರಣಾ ಕಾರ್ಯಕ್ರಮಗಳ ಮೂಲಕ ಪೂಜ್ಯರು ಇಟ್ಟುಕೊಂಡ ಗುರಿ, ಹಾಕಿಕೊಂಡ ಯೋಜನೆಗಳ ಪೂರೈಕೆಗಾಗಿ ದುಡಿಯಲು ಸಂಕಲ್ಪ ತೊಡಬಹುದು.

ರಾಷ್ಟ್ರೀಯ ಬಸವ ದಳದ ಹುಟ್ಟು ಹಬ್ಬ

ರಾಷ್ಟ್ರೀಯ ಬಸವ ದಳದ ರೂಪು - ರೇಷೆ ಮುಂತಾದುವೆಲ್ಲ ನನ್ನ ವಿಚಾರವಾದರೂ ಇಂಥದೊಂದು ಕ್ರಿಯಾಶೀಲ ಸಂಘಟನೆ ಬೇಕು; ಸಾಮೂಹಿಕ ಪ್ರಾರ್ಥನೆ ನಡೆಯದ ಹೊರತು ಸಂಘಟನೆ ಆಗದು ಎಂಬುವ ಆಲೋಚನೆಗೆ ಪ್ರೇರಕರು ಪೂಜ್ಯ ಶ್ರೀ ಅಪ್ಪಾಜಿಯವರು. ಆದ್ದರಿಂದ 1993ರ ಅಕ್ಟೋಬರದಲ್ಲಿ ಬಸವ ತತ್ತ್ವ ತರಬೇತಿ ಶಿಬಿರ ನಡೆದಾಗ ಒಂದು ನಿರ್ಣಯ ಕೈಗೊಳ್ಳಲಾಯಿತು. ಪೂಜ್ಯರು ನನ್ನ ಹುಟ್ಟುಹಬ್ಬವನ್ನು ವೈಯಕ್ತಿಕವಾಗಿ ಮಾಡುವುದು ಬೇಡ ಎಂದು ಸ್ಪಷ್ಟವಾಗಿ ಹೇಳಿದಾಗ ಶರಣರೆಲ್ಲರೂ ಡಾ|| ರಾಧಾಕೃಷ್ಣನ್‌ರವರ ಜಯಂತಿಯನ್ನು ಶಿಕ್ಷಕರ ದಿನಾಚರಣೆ ಎಂದು, ಚಾಚಾ ನೆಹರೂರವರ ಜಯಂತಿಯನ್ನು ಮಕ್ಕಳ ದಿನಾಚರಣೆಯೆಂದು ಆಚರಿಸಿದಂತೆ ರಾಷ್ಟ್ರೀಯ ಬಸವದಳದ ಹುಟ್ಟುಹಬ್ಬವನ್ನು ಪೂಜ್ಯ ಅಪ್ಪಾಜಿ ಜನ್ಮಿಸಿದ ಗಣೇಶ ಚೌತಿಯಂದು ಮಾಡೋಣ ಎಂದು ಸೂಚಿಸಿದರು. ಇದು ಎಲ್ಲರಿಗೂ ಬಹಳ ಮಾನ್ಯವಾಯಿತು. ಶರಣ ಗಣವನ್ನು; ಗಣನಾಯಕರನ್ನು ತಯಾರು ಮಾಡುವ ರಾಷ್ಟ್ರೀಯ ಬಸವ ದಳಕ್ಕೆ ಪ್ರೇರಕ ಶಕ್ತಿಯಾದ ಪೂಜ್ಯ ಅಪ್ಪಾಜಿಯವರ ಹುಟ್ಟುಹಬ್ಬದ ದಿನ ಗಣೇಶ ಚವತಿಯಂದು ದಳದ ಹುಟ್ಟುಹಬ್ಬ ಮಾಡುವುದು ಎಲ್ಲರಿಗೂ ಸೂಕ್ತವೆನಿಸಿತು.

ಆದ್ದರಿಂದ, ವಿವಿಧ ರಾಷ್ಟ್ರೀಯ ಬಸವ ದಳಗಳವರು ತಮ್ಮ ತಮ್ಮ ಶಾಖೆ ಸ್ಥಾಪಿತವಾದ ದಿನದ ಲೆಕ್ಕಾಚಾರದ ಮೇಲೆ ವಾರ್ಷಿಕೋತ್ಸವವನ್ನು ಆಚರಿಸಿದರೂ, ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬವನ್ನು ಭಾದ್ರಪದ ಚೌತಿ (ಗಣೇಶ ಚೌತಿ)

ಪೂಜ್ಯ ಅಪ್ಪಾಜಿಯವರ ಹುಟ್ಟುಹಬ್ಬದಂದು ಆಚರಿಸಬೇಕು. ವಿಶೇಷ ಆಹ್ವಾನಿತರನ್ನು ಬರಮಾಡಿಕೊಂಡು ಸಂಘಟನೆಯ ಧ್ಯೇಯೋದ್ದೇಶವನ್ನು ಜನರಿಗೆ ಮನಗಾಣಿಸಬೇಕು; ಪ್ರಚಾರ ಮಾಡಬೇಕು. ಈ ರೀತಿ ಕಾರ್ಯಕ್ರಮಗಳನ್ನು ಪೂರ್ವಭಾವಿ ಸಿದ್ಧತೆಯೊಡನೆ ಹಮ್ಮಿಕೊಂಡು ಮಾಡುವಿರಾಗಿ ನಂಬಿದ್ದೇವೆ.

- ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಬಸವ ತತ್ತ್ವ ತರಬೇತಿ ಶಿಬಿರ ಇಲ್ಲ

ಪ್ರತಿ ವರ್ಷವೂ ಅಕ್ಟೋಬರ ತಿಂಗಳಲ್ಲಿ ನಡೆಯುತ್ತಿದ್ದ ಬಸವ ತತ್ತ್ವ ತರಬೇತಿ ಶಿಬಿರವು ಈ ವರ್ಷ ಇಲ್ಲವೆನ್ನಲು ವಿಷಾಧಿಸುತ್ತೇವೆ. ನನ್ನ ಸಮಯವು ಸೆಪ್ಟಂಬರ್ ತಿಂಗಳಿಂದಲೂ ''ಮಹಾಚೈತ್ರ''ದ ಹೋರಾಟಕ್ಕೆ, ನಂತರ, ಬೆಂಗಳೂರು ಸಮ್ಮೇಳನದ ಸಿದ್ಧತೆಗೆ ವ್ಯಯವಾಗಿರುವ ಕಾರಣ ಶಿಬಿರವನ್ನು ರದ್ದುಮಾಡಲಾಗಿದೆ. ಶರಣ ಮೇಳದ ಭಿತ್ತಿಪತ್ರ, ಕರಪತ್ರ, ಸಿನಿಮಾ ಮುಂತಾದ ಸ್ಲೈಡು ಪ್ರಚಾರ ಸಾಮಗ್ರಿಗಳನ್ನೂ ಮತ್ತು ದೇಣಿಗೆ ಸಂಗ್ರಹಕ್ಕಾಗಿ ರಸೀತಿ ಪುಸ್ತಕಗಳನ್ನೂ ಅಂಚೆಯ ಮೂಲಕ ಕಳಿಸಲಾಗುವುದು ಮತ್ತು ಪ್ರಚಾರ ಸಾಮಗ್ರಿಗಳನ್ನು ಸೆಪ್ಟಂಬರ್ ಮೊದಲನೆಯ ವಾರದೊಳಗೆ ಸಿದ್ಧವಾಗುವಂತೆ ಇಡಲಾಗುವುದು, ಬೆಂಗಳೂರು - ಕೂಡಲ ಸಂಗಮಗಳಿಗೆ ಬಂದೂ ನೇರವಾಗಿ ಒಯ್ಯಬಹುದು.

- ಮಾತಾಜಿ.

ಬಸವ (ಲಿಂಗಾಯತ) ಧರ್ಮದ ಆರು ಸೂತ್ರಗಳು

1. ಧರ್ಮ ಗುರು	-	ಮಂತ್ರಪುರುಷ ಬಸವಣ್ಣನವರು
2. ಧರ್ಮ ಸಂಹಿತೆ	-	ಸಮಾನತೆ ಸಾರುವ ವಚನ ಸಾಹಿತ್ಯ
3. ಧರ್ಮ ಲಾಂಛನ	-	ವಿಶ್ವದಾಕಾರದಲ್ಲಿರುವ ವಿಶ್ವಾತ್ಮನ ಕುರುಹಾದ ಇಷ್ಟಲಿಂಗ
4. ಧರ್ಮ ಕ್ಷೇತ್ರ	-	ಗುರು ಬಸವಣ್ಣನವರ ಐಕ್ಯಕ್ಷೇತ್ರ ಕೂಡಲ ಸಂಗಮ.
5. ಧರ್ಮ ಧ್ವಜ	-	ಷಟ್ಕೋನ ಸಹಿತ ಬಸವ ಧ್ವಜ
6. ಧರ್ಮದ ಧ್ಯೇಯ	-	ಜಾತಿ ವರ್ಣ ವರ್ಗ ರಹಿತ ಧರ್ಮಸಹಿತ ಕಲ್ಯಾಣ ರಾಜ್ಯ ನಿರ್ಮಾಣ.



ಅಡಿಯ ಇಟ್ಟು ನಡೆದಲೆಲ್ಲ ದೀಪ ಹಚ್ಚಿಬಂದಿರಿ
ಬಸವ ಭಾನು ಕ್ರಾಂತಿ ಉಷೆಯು ಆಗಿ ಮುಂದೆ ನಡೆದಿರಿ
ಗುರುದೇವ ಲಿಂಗಾನಂದ ಹೆಸರು ಅಮರವಾಗಿದೆ
ಸಚ್ಚಿದಾನಂದನ ಶುಭರಕ್ಷೆಯು ತಮಗಿದೆ.

ಲಿಂಗಾನಂದ ಮಹಾಸ್ವಾಮಿಗಳ ಶರಣಾಲಯ (ಗದ್ದುಗೆ) ನಿರ್ಮಾಣಕ್ಕೆ ಧನ ದಾಸೋಹ ಮಾಡಲು ಮನವಿ

ವಿಶ್ವಗುರು ಬಸವಣ್ಣನವರು ಹುಟ್ಟಿದ ನಾಡಿನಲ್ಲಿ ಮಣಿಗವಳ್ಳಿಯ ಮಾಣಿಕ್ಯವಾಗಿ 15-9-1931ರಂದು ಜನಿಸಿ, ಬಿ.ಎ. ಆನರ್ಸ್ ಪದವೀಧರರಾಗಿ ಬಸವ ಗುರುವಿನ ಪ್ರೇರಣೆಯಿಂದ 25-4-1995ರಂದು ಆಧ್ಯಾತ್ಮಿಕ ಮಾನಸಾಂತರ ಹೊಂದಿ, 19-11-1956ರಂದು ಜ್ಞಾನ ಸನ್ಯಾಸವನ್ನು ಸ್ವೀಕರಿಸಿ, ಅಂದಿನಿಂದ ಕಡೆಯವರೆಗೂ ಒಂದು ದಿನವೂ ಬಿಡದಂತೆ ಪ್ರವಚನದ ಮೂಲಕ ಜ್ಞಾನ - ದಾಸೋಹ ಮಾಡಿದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಅಪೂರ್ವ ವಾಗ್ಮಿಗಳು, ಪ್ರತಿಭಾನ್ವಿತ ಚೇತನ, ಪ್ರವಚನ ಪಿತಾಮಹರು.

ವಿಶ್ವಗುರು ಬಸವಣ್ಣನವರು ಬೋಧಿಸಿದ ವಿಶ್ವಧರ್ಮದ ಸಾರವನ್ನು ಪ್ರಚಾರ ಮಾಡಿದ್ದೇ ಅಲ್ಲದೆ, ಹಲವಾರು ಧರ್ಮ ಪ್ರಚಾರವನ್ನು ತರಬೇತಿಗೊಳಿಸಿ, ಅನೇಕ ಸಂಸ್ಥೆಗಳನ್ನು ಕಟ್ಟಿದ ಕ್ರಿಯಾಶೀಲ ಮಹಂತರು. ಪ್ರಪ್ರಥಮ ಮಹಿಳಾ ಜಗದ್ಗುರು ಪೀಠವನ್ನು ಧಾರವಾಡದಲ್ಲಿ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ ಎಂಬ ಹೆಸರಿನಿಂದ ಸ್ಥಾಪಿಸಿ, ತಮ್ಮ ಕರಕಮಲ ಸಂಜಾತೆ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರನ್ನು ಪ್ರಥಮ ಅಧಿಕಾರಿಣಿಯನ್ನಾಗಿ ಮಾಡಿ, ಸ್ತ್ರೀ ಸಮಾನತಾ ತತ್ತ್ವವನ್ನು ಎತ್ತಿಹಿಡಿದ ಕ್ರಾಂತಿಕಾರಿಗಳು. ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯನ್ನು ಸ್ಥಾಪಿಸಿ, ಅದರ ಚೇರ್ಮನ್ನರಾಗಿ ಸಂಸ್ಥೆಯನ್ನು ಬೃಹತ್ತಾಗಿ ಬೆಳೆಸಿದುದೇ ಅಲ್ಲದೆ, ಇದೀಗ ಕೂಡಲ ಸಂಗಮ ಕ್ಷೇತ್ರವನ್ನು ಸರ್ವಾಂಗ ಸುಂದರವಾಗಿ ಕಟ್ಟಲೋಸುಗ ಬಸವ ಧರ್ಮ ಪೀಠ ಟ್ರಸ್ಟನ್ನು ರಚಿಸಿ, ಬೃಹತ್ ಯೋಜನೆಗಳನ್ನು ಹಾಕಿರುವ ಅವಿಶ್ರಾಂತ ಕ್ರಿಯಾಮೂರ್ತಿ, ನಾಡಿನಾದ್ಯಂತ ಸಂಚರಿಸಿ, ಜನಮನದಲ್ಲಿ ಬಸವತತ್ತ್ವದ ಬೀಜಗಳನ್ನು ಬಿತ್ತಿ, 'ಎತ್ತೆತ್ತ ನೋಡಿದೊಡತ್ತತ್ತ ಬಸವನೆಂಬ ಬಳ್ಳಿ, ಎತ್ತಿ ನೋಡಿದರೆ ಲಿಂಗವೆಂಬ ಗೊಂಚಲು ಒತ್ತಿ ಹಿಂಡಿದರೆ ಭಕ್ತಿ ಎಂಬ ರಸ' ಎಂಬ ವಾತಾವರಣ ನಿರ್ಮಾಣ ಮಾಡಿ, ಬಸವ ಯುಗಕ್ಕೆ ನಾಂದಿ ಹಾಡಿದ ಜಂಗಮ ಜ್ಯೋತಿ.

ಇಂತಹ ಪೂಜ್ಯರು ಬಸವ ಧರ್ಮದ ಮಹಾಜಗದ್ಗುರು ಪೀಠವನ್ನು ದಿನಾಂಕ 13-1-1992ರಂದು ಏರಿದರು. ನಾಡಿನ ಉದ್ದಗಲಕ್ಕೂ ಸಂಚರಿಸಿ ವೀರಸೇನಾನಿ ಎಂಬ ಬಿರುದನ್ನು ಪಡೆದರು.

''ಹರಿವ ನದಿಯು ನಿಮ್ಮ ಬಾಳು, ಉರಿವ ಬತ್ತಿ ನಿಮ್ಮ ತ್ಯಾಗ, ಮೊರೆವ ಶಂಖ ನಿಮ್ಮ ವಾಣಿ ಸಚ್ಚಿದಾನಂದ ಖಣಿ'' ಎಂಬಂತೆ ಹರಿವ ಜ್ಞಾನವಾಹಿನಿಯಾಗಿ ಅಸಂಖ್ಯಾತ ಜನರ ಮನದಲ್ಲಿ ಭಕ್ತಿಯ ಬೆಳೆತೆಗೆದ ಪೂಜ್ಯ ಸ್ವಾಮೀಜಿ ದಿ. 30.6.1995 ರಂದು ಲಿಂಗೈಕ್ಯರಾದರು. ಪೂಜ್ಯರ ಪಾರ್ಥಿವ ಶರೀರವನ್ನು ಅವರ ಸದಿಚ್ಛೆಯಂತೆಯೇ ಕೂಡಲ ಸಂಗಮದ ಬಸವ ಧರ್ಮ ಪೀಠದ ಮಹಾಮನೆ

ಮಹಾಮಠದ ಆವರಣದಲ್ಲಿ ಬಸವಾಲಯದ ಬಲಪಕ್ಕದಲ್ಲಿ ಶರಣ ಮಂಟಪಗಳ ಪರಿಸರದಲ್ಲಿ ಸಮಾಧಿ ಮಾಡಲಾಗಿದೆ. ಇಂತಹ ದಿವ್ಯ ಸಮಾಧಿಯನ್ನು ಸುಂದರವಾಗಿ ಕಮಲದಾಕೃತಿಯ ಮಂಟಪವಾಗಿ ಶರಣಾಲಯ (ಗದ್ದುಗೆ)ವೊಂದನ್ನು ನಿರ್ಮಾಣ ಮಾಡಬೇಕೆಂದು ಶಿಷ್ಯವೃಂದ, ಭಕ್ತವೃಂದ ನಿಶ್ಚಯಿಸಿದೆ. ನಾಲ್ಕು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಯೋಜನೆಯೊಂದನ್ನು ಸಿದ್ಧಪಡಿಸಿದ್ದು ಸಹೃದಯರಿಂದ ಉದಾರವಾದ ಧನ ಸಹಾಯ ನಿರೀಕ್ಷಿಸುತ್ತೇವೆ. ಆದ್ದರಿಂದ ದಾನಿಗಳು ಕೆಳಕಂಡಂತೆ ನೆರವು ನೀಡಬಹುದು.

1. ಮಹಾಪೋಷಕರು ರೂ. 10,000/- ಮೇಲ್ಪಟ್ಟು
2. ಪೋಷಕರು ರೂ. 5,000/- ಮೇಲ್ಪಟ್ಟು
3. ಹಿತೈಷಿಗಳು ರೂ. 2,000/- ಮೇಲ್ಪಟ್ಟು
4. ದಾನಿಗಳು ರೂ. 1,000/- ಮೇಲ್ಪಟ್ಟು
5. ಸಹೃದಯರು ರೂ. 500/- ಮೇಲ್ಪಟ್ಟು

ಇನ್ನು ಶಕ್ತ್ಯಾನುಸಾರ - ಭಕ್ತ್ಯಾನುಸಾರ ಎಷ್ಟೇ ಕೊಟ್ಟರೂ ಸಂತೋಷದಿಂದ ಸ್ವೀಕರಿಸಲಾಗುವುದು.

ಅಸಂಖ್ಯಾತ ಜನರು ಆಗಮಿಸಿ, ದರ್ಶನ ಪಡೆದು ಆಧ್ಯಾತ್ಮಿಕ ಸ್ಫೂರ್ತಿ - ಚೇತನವನ್ನು ಪಡೆದು ಹೋಗುವ ಶರಣಾಲಯವನ್ನು ಸುಂದರವಾಗಿ, ಚೇತೋಹಾರಿಯಾಗಿ ನಿರ್ಮಾಣ ಮಾಡಬೇಕೆಂಬ ನಮ್ಮೆಲ್ಲರ ಸದಿಚ್ಛೆಯು ಬೇಗನೆ ಸಾಕಾರಗೊಳ್ಳುವಂತೆ ತಾವೆಲ್ಲರೂ ಉದಾರವಾಗಿ ನೆರವು ನೀಡುವಿರಾಗಿ ನಂಬಿದ್ದೇವೆ.

ಬಹಳ ವ್ಯಾಪಕವಾದ ಯೋಜನೆ, ಉದಾತ್ತ ಉದ್ದೇಶಗಳನ್ನು ಹೊಂದಿರುವ ಬಸವ ಧರ್ಮಪೀಠಕ್ಕೆ ಧನಸಹಾಯ ಮಾಡಬೇಕೆಂಬ ಸದ್ಭಕ್ತರು ಚೆಕ್, ಡ್ರಾಫ್ಟ್, ಎಂ.ಟಿ. ಮನಿಯಾರ್ಡರ್, ನಗದು - ಯಾವುದೇ ಧರ್ಮಪೀಠ, ಸಿ ಮತ್ತು ಐ 20ನೇ ಖಾತೆ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೂಡಲಸಂಗಮ - 587115. ತಾ|| ಹುನಗುಂದ, ಜಿ|| ಬಿಜಾಪುರ.

ಬೆಂಗಳೂರು ಶಾಖೆ

ಜನರಿಗೆ ಸಂಪರ್ಕಿಸಲು ಸುಲಭವಾಗಲೆಂದು ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ಒಂದು ಶಾಖೆಯನ್ನು ತೆರೆಯಲಾಗಿದೆ, ಅದರ ವಿಳಾಸ ಹೀಗಿದೆ: ಬಸವಧರ್ಮಪೀಠ, ಬಸವ ಮಂಟಪ, 20ನೆಯ ಮುಖ್ಯರಸ್ತೆ, 2ನೆಯ ಬ್ಲಾಕ್, ರಾಜಾಜಿನಗರ, ಬೆಂಗಳೂರು - 560 010, ದೂರವಾಣಿ : 3325335. 80ಜಿ ಇನ್‌ಕಮ್ ಟ್ಯಾಕ್ಸ್‌ರಿಯಾಯಿತಿ ನಿರೀಕ್ಷಿಸುವ ದಾನಿಗಳು ಡಿ.ಡಿ./ಚೆಕ್ ಅನ್ನು 'ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್, ಕೂಡಲ ಸಂಗಮ' ಎಂಬ ಹೆಸರಿಗೆ ಬರೆಯಬೇಕು.

ಕಟ್ಟಡ ಕೆಲಸವು ತ್ವರಿತಗತಿಯಲ್ಲಿ ನಡೆಯುತ್ತಿರುವುದರಿಂದ ಸಹೃದಯವಂತ ಧರ್ಮಾಭಿಮಾನಿಗಳು ತನು, ಮನ, ಧನಗಳಿಂದ ಉದಾರವಾದ ಧನ ಸಹಾಯ ಮಾಡಲು ಮುಂದೆ ಬರುವಿರಾಗಿ ನಂಬುತ್ತೇವೆ.

ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿ
ಉಪಾಧ್ಯಕ್ಷೆ, ಬಸವ ಧರ್ಮ ಪೀಠ (ರಿ),
ಮಹಾಮನೆ ಮಹಾಮಠ, ಕೂಡಲ ಸಂಗಮ - 588 115,
ತಾ || ಹುನುಗುಂದ, ಜಿ || ಬಿಜಾಪುರ
ಕೂಡಲ ಸಂಗಮದ ದೂರವಾಣಿ : 08351-74-838

ಆಗಸ್ಟ್ ತಿಂಗಳ ಶರಣರ ಹಬ್ಬಗಳು

ವಿಶ್ವಗುರು ಬಸವಣ್ಣನವರು ಲಿಂಗೈಕ್ಯರಾದ ಶ್ರಾವಣ ಶುದ್ಧ ಬಸವ ಪಂಚಮಿ 1-8-1995 ರಂದು ಒದಗಿ ಬಂದಿದೆ.

ತಾಯಿ ನೀಲಾಂಬಿಕೆಯು ಲಿಂಗೈಕ್ಯಳಾದ ಷಷ್ಠಿಯು ದಿ. 2-8-95 ರಂದು ಒದಗಿ ಬಂದಿದೆ.

ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳವರ ಜಯಂತಿಯು ಗಣೇಶ ಚೌತಿಯ ದಿ. 29-8-95 ರಂದು ಒದಗಿ ಬಂದಿದೆ. ಪೂಜ್ಯರ ಸ್ಮರಣಾರ್ಥ ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬ-ವನ್ನು ಅಂದು ಆಚರಿಸಬೇಕು.

ರೂಪು ಅಳಿದ ಅಮೃತ ಚೇತನ

ಪೂಜ್ಯ ಶ್ರೀ ಲಿಂಗಾನಂದ ಮಹಾಸ್ವಾಮೀಜಿಯವರು ದಿ. 30-6-95 ರಂದು ಲಿಂಗೈಕ್ಯರಾದ ವಾರ್ತೆ ಕೇಳಿ ಅಸಂಖ್ಯಾತರು ತಮ್ಮ ಭಾವನೆಗಳನ್ನು ವ್ಯಕ್ತ ಪಡಿಸಿ ಪತ್ರ ಬರೆದಿದ್ದಾರೆ. ಕಲ್ಯಾಣ ಕಿರಣದ ಗಾತ್ರ ಸಾಕಷ್ಟು ಆಗಿರುವುದರಿಂದ ಮುಂದಿನ ಸಂಚಿಕೆಯಲ್ಲಿ ಆಯ್ದ ಪತ್ರಗಳನ್ನು ಪ್ರಕಟಿಸಲಾಗುವುದು.


ಕಲ್ಯಾಣ ಕಿರಣ ಓದುಗರ ಗಮನಕ್ಕೆ

ಕಲ್ಯಾಣ ಕಿರಣವು ಕಾರಣಾಂತರದಿಂದ ಅನಿಯಮಿತವಾಗಿ ಹೊರಬರುತ್ತಿದೆ. ಇದರಿಂದ ಬಹಳ ಜನರಿಗೆ ಬೇಸರವಾಗಿದೆ. ಇಂಥ ಸನ್ನಿವೇಶದಲ್ಲೇ ಪ್ರವಚನದ ಮೂಲಕ ಜನಮನವನ್ನರಂಜಿಸಿ ಸಂಸ್ಥೆಗೆ ಆದಾಯ ತರುತ್ತಿದ್ದ ಪೂಜ್ಯ ಅಪ್ಪಾಜಿಯವರೂ ಅಗಲಿದ್ದಾರೆ. ಆದಷ್ಟು ಬೇಗನೇ ಕಲ್ಯಾಣ ಕಿರಣಕ್ಕೆ ನಿಯಮಿತತೆ ತರಲು ಪೂಜ್ಯ ಮಾತಾಜಿಯವರು ಯೋಜನೆ ರೂಪಿಸುತ್ತಿದ್ದಾರೆ. ಕಲ್ಯಾಣ ಕಿರಣದ ವಿಳಾಸ ಬದಲಾವಣೆ, ಅದು ಸಕಾಲದಲ್ಲಿ ತಲುಪದೆ ಇರುವುದು, ಚಂದಾ ಕಳಿಸುವಿಕೆ ಇಂಥ ವಿವರಗಳನ್ನು ನೇರವಾಗಿ ಕಲ್ಯಾಣ ಕಿರಣ ಕಾರ್ಯಾಲಯಕ್ಕೆ ಕಳಿಸಿದರೆ ಒಳ್ಳೆಯದು. ಬೆಂಗಳೂರಿನ ಬಸವ ಮಂಟಪದ ವಿಳಾಸಕ್ಕೆ ಬರೆದರೆ, ಅಲ್ಲಿ ಪತ್ರಗಳು ಕೈಜಾರಿದರೆ ನಮಗೆ ಸಕಾಲದಲ್ಲಿ ತಲ್ಪವು. ಆದ್ದರಿಂದ ಕಲ್ಯಾಣ ಕಿರಣಕ್ಕೆ ಸಂಬಂಧಿಸಿದ ಪತ್ರಗಳನ್ನು ನೇರವಾಗಿ ಕೆಳಗೆ ಕಾಣಿಸಿದ ವಿಳಾಸಕ್ಕೆ ಬರೆಯಿರಿ.

— **ಸೋದರಿ ಕಸ್ತೂರಿ,** ಕಲ್ಯಾಣ ಕಿರಣ ಮಾಸಪತ್ರಿಕೆ
ಬಸವ ಗಂಗೋತ್ರಿ, ಕುಂಬಳಗೋಡು-560074
ಬೆಂಗಳೂರು ದಕ್ಷಿಣ ತಾಲ್ಲೋಕು



ಲಿಂಗೈಕ್ಯ ಸ್ವಾಮೀಜಿ



ಸೂತ್ರ ಹಿಡಿದು ಇಷ್ಟ ಲಿಂಗಾರ್ಚನೆ